REGISTERED NO. M. 1393.

ಕಂಠೀರವ

ಅರ್ಧಾಣ

ESTD. 1919 ಸ್ಥಾಪನೆ.

ವಾರಕ್ಕೆರಡಾವರ್ತಿ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾಪತ್ರಿಕೆ.

KANTEERAVA, MANGALORE

The only Nationalist Kanarese BI-WEEKLY with the largest circulation.

ಸಂಪುಟ ೧೪ ಮಂಗಳೂರು, ೧೯೩೭ನೇ ಇಸವಿ ಜನವರಿ ತಾರೀಕು ೨೨ನೇ ಶುಕ್ರವಾರ ಸಂಚಿಕೆ ೪೪

VOL. XVIII MANGALORE, FRIDAY, JANUARY 22, 1937 NO. 84

THE

Canara Banking Corporation, Udipi, Ltd.

(Incorporated in British India)

ನೋಟೀಸು.

ನ್ಯಿರಖು ಠೇವಣಾತಿಗಳು

ನಮ್ಮ ಎಲ್ಲಾ ಕಾರ್ಯಾಲಯಗಳಲ್ಲಿ, ಇದೇ ತಾ. 1—1—1937ರಿಂದ ಈ ಕೆಳಗಿನ ಬಡ್ಡಿ ದರದ ಮೇಲೆ ಸ್ವೀಕರಿಸೋಣಾಗುತ್ತದೆ:—

3 ತಿಂಗಳಿಗೆ ಸಾಲಿಯಾನಾ	2½%
6 ,, ,,	3 %
9 ,, ,,	3½%
12 ಮತ್ತು 24 ತಿಂಗಳಿಗೆ ಸಾಲಿಯಾನಾ	4 %

(ಬಡ್ಡಿ ಪಾವತಿ ಅರ್ಧ ವರ್ಷಕ್ಕೊಮ್ಮೆ)

ಪೊಪ್ಯುಲರ್

- ಬ್ರಿಟಿಷ್ ಕರ್ನಾಟಕದ ಪ್ರಥನು ವಿಮಾಸಂಸ್ಥೆ—ದಕ್ಷಿಣ ಕನ್ನಡದ ಆದರ್ಶ ವಿಮಾಸಂಸ್ಥೆ.
- ಪ್ರಥಮ ವರ್ಷದಿಂದಲೇ ವಿಮಾನಿಧಿ ಸ್ಥಾಪಿತವಾಗಿದ್ದು ಇದು ವರ್ಷಂಪ್ರತಿ ಬೆಳೆಯುತ್ತಾ ಇದೆ.
- ಪ್ರಥಮ ವರ್ಷದಲ್ಲಿಯೇ ಬೋನಸ್—ಅಖಿಲ ಕರ್ನಾಟಕದಲ್ಲಿ ಪ್ರಥಮ ಬಾರಿಯೇ ಬೋನಸನ್ನು ಹಂಚಿದ ಸಂಸ್ಥೆಯೆಂದರೆ ಇದೊಂದೇ.

ವಿಮೆಯನ್ನು ಮಾಡಲೂ, ಮಾಡಿಸಲೂ ಇದೀಗ ನಮ್ಮ ಸಂಸ್ಥೆ.
ಸುಲಭವಾದ ವಿಮಾಕಂತುಗಳು—ಸರ್ವರಿಗೂ ಅನುಕೂಲವಾದ ಆತ್ಯಾಧುನಿಕ ಶಾಸ್ತ್ರೀಯ ವಿಮಾಪದ್ಧತಿಗಳು—ಅಡಳಿತೆಯು ಸುವ್ಯವಸ್ಥಿತ—ಭದ್ರತೆಯು ವಿಶ್ವಾಸಾರ್ಹ.

ಯೋಗ್ಯ ವಿಜಂಟೆರುಗಳಿಗೆ ಧಾರಾಳ ಕಮಿಶನ್.

ಮಾಹಿತಿಪತ್ರ ಇತ್ಯಾದಿ ಹೆಚ್ಚಿನ ವಿವರಗಳಿಗೆ ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆಯಿರಿ.

Asiatic Government Security LIFE ASSURANCE CO., LTD.,

Established 1913. **Life Branch 1922.**

The Pioneer Insurance Institution in Mysore State transacting business throughout India. Varied plans of Assurances for both male and female lives at competitive rates. Attractive Policies with liberal privileges including Disability Benefits. Substantial Bonus. Profitable Agency Connections.

For Prospectus and Agency terms apply to:

Head Office: "Asiatic Buildings" Bangalore City,

OR

to any of the Company's undernoted Branches:

Madras Branch:	187, Mount Road.
Bombay Branch:	Hornby Road, Fort.
Calcutta Branch:	15, Clive Street.

V. RANGASWAMI, B. A., B. L.,
General Manager.

The Premier Bank of India, Ltd., Madras

ದಿ ಪ್ರೀಮಿಯರ್ ಬೇಂಕ್ ಒಫ್ ಇಂಡಿಯಾ, ಲಿಮಿಟೆಡ್,

ಹೆಡ್ ಆಫೀಸ್:—ತಂಬುಚೆಟ್ಟಿ ಸ್ಟ್ರೀಟು, ಮದ್ರಾಸು.

ಚೇರ್‌ಮೇನ್—ಡಾಕ್ಟರ್ ಯು. ಎಲ್. ನಾರಾಯಣ ರಾವ್,
(ಭುಜಂಗನಿವಾಸ, ತ್ಯಾಗರಾಯನಗರ.)

ಕಾಯಂ ಠೇವಣಾತಿಗಳು ವರುಷ ಒಂದಕ್ಕೆ ಶೇಕಡಾ 5½ ಸಲೆಯಲ್ಲಿಯೂ, ಎರಡು ವರುಷಗಳಿಗೆ ಶೇಕಡಾ 6ರ ಸಲೆಯಲ್ಲಿಯೂ ಸ್ವೀಕರಿಸಲ್ಪಡುತ್ತವೆ. ಆರು ತಿಂಗಳಿಗೊಮ್ಮೆ ಬಡ್ಡಿಯು ಕೊಡಲಾಗುವುದು. ಬ್ಯಾಂಕಿನ ಇತರ ಎಲ್ಲಾ ವಹಿವಾಟುಗಳೂ ನಡೆಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಹೆಡ್ಡಾಫೀಸಿಗೆ ಬರೆದುಕೊಳ್ಳುವುದು.

S. V. RAO, D. Com.,
Managing Director.

ಮೂಲವ್ಯಾಧಿಗೆ ಹೆಡನ್ಸಾ ಚಿಕಿತ್ಸೆ

ಯಾವುದೇ ಸ್ಥಿತಿಯಲ್ಲಿಯಾದರೂ ಮೂಲವ್ಯಾಧಿಯನ್ನು ಗುಣಪಡಿಸುವುದು.

ಮೂಲವ್ಯಾಧಿಗೆ ಅತ್ಯುತ್ತಮ, ಪೂರ್ಣ ಭರವಸೆಯುಳ್ಳ ಮತ್ತು ಬಹು ಬೇಗ ಗುಣಪಡಿಸುವ ಚಿಕಿತ್ಸೆಯಿದು. ರಕ್ತ ಬರುವುದನ್ನು ನಿಲ್ಲಿಸುವುದು, ಬ್ಲಿರುಕುಗಳನ್ನು ಮುಚ್ಚುವುದು, ಹುಣ್ಣುಗಳನ್ನೂ ಗಾಯಗಳನ್ನೂ ಗುಣಪಡಿಸುವುದು. ಅನೇಕ ಚಿಕಿತ್ಸಾಲಯಗಳಲ್ಲಿ ಇದನ್ನುಪಯೋಗಿಸುತ್ತಿರುವರು.

ಯೂರೋಪಿನ ಪ್ರಸಿದ್ಧ ವೈದ್ಯರೂ, ಶಸ್ತ್ರಚಿಕಿತ್ಸಕರೂ ಬಹಳ ಶಿಫಾರಸು ಮಾಡಿದ್ದಾರೆ.

ಯಾವ ಕೆಮಿಸ್ಟ್ ಅಂಗಡಿಯಲ್ಲಾದರೂ ಸಿಗುತ್ತದೆ.

Madras Stockists:—
Messrs. DADHA & CO., 52, Nainiappa Naick Street, Madras.

Bala Sahitya Mandala, Limited,

KODIALBAIL, MANGALORE.

Just received the "Penguin Books" reputed books for light reading. Each Re. 0—6—6.

&

"Chyavanaprash" of Shakti Oushadhalaya.

Works of—Leo Tolstoy

The Supreme Dictionary (the cheapest & best dictionary with illustration) contains 1200 pages Rs. 2—10—0. A. B. C. of English usage—priced Re. 1—4—0.

Kannada section

1. Books prescribed for the Vidwan exam. both preliminary and Final are available with us at all times.
   Not least of all—Books of general interest treating on all subjects of all Karnataka.
2. **Stationery.** Black Bird Fountain pens (in assorted colours), Ever Sharp Fountain pens, Parker and Parkette, Warris (the latest pen—most reliable) priced Rs. 2—8—0.

ಪ್ರೊಸ್ಪೆಕ್ಟಸ್.

(ಮುಂಬಾಯಿ ಮತ್ತು ಕಲ್ಕತ್ತಾ ಸ್ಟೋಕ್ ಎಕ್ಸ್‌ಚೇಂಜ್ ಮಾರ್ಕೆಟುಗಳಲ್ಲಿ ಈ ಶೇರುಗಳ ದರಗಳನ್ನು ಕೊಡುವದಕ್ಕಾಗಿ ಕ್ರಮೇಣ ಏರ್ಪಾಡುಗಳು ಮಾಡಲಾಗುವುವು.)

ಈ ಪ್ರಾಸ್ಪೆಕ್ಟಸಿನ ಪ್ರತಿಯೊಂದು ಕಲ್ಲಿಕೋಟೆಯಲ್ಲಿರುವ ದಕ್ಷಿಣ ಮಲಬಾರಿನ ಅಸಿಸ್ಟಾಂಟ್ ರಿಜಿಸ್ಟ್ರಾರ್ ಒಫ್ ಜೊಯಿಂಟ್ ಸ್ಟೋಕ್ ಕಂಪೆನೀಸ್‌ರವರೊಡನೆ ದಾಖಲುಮಾಡಲಾಗಿಯದೆ.

ಪಾಲುಗಳ ವಂತಿಗೆ ಪಟ್ಟಿಯು 1937ನೆ ಇಸವಿ ಜನವರಿ ತಾ. 25ನೇ ಸೋಮವಾರ ಆರಂಭವಾಗಿ, ಡ್ಯಾರೆಕ್ಟರುಗಳಿಂದ ಅಪೇಕ್ಷಿಸೋಣಾಗುವ ಅನಂತರದ ಯಾವದೇ ದಿನದಲ್ಲಿ ಮುಚ್ಚಲ್ಪಡುವದು.

ಕ್ಯಾಲಿಕಟ್ ಹೊಸಿಯರೀಸ್, ಲಿಮಿಟೆಡ್.

(೧೯೧೩ರ ಇಂಡಿಯನ್ ಕಂಪೆನೀಸ್ ಆಕ್ಟಿನನ್ವಯ ಇನ್ಕೊರ್ಪೊರೇಟ್ ಆದುದು.)

ಅಧಿಕೃತ ಮೂಲಧನ ರೂ. 3,00,000; ಇದು ಪಾಲೊಂದರ ರೂ. 10ರ 30,000 ಪಾಲುಗಳಾಗಿ ವಿಭಾಗಿಸಲ್ಪಟ್ಟಿದೆ

ಪ್ರಚುರವಮಾಡಲ್ಪಟ್ಟಿರುವ ಮೂಲಧನ (a) ಇಷ್ಟರಲ್ಲೇ ಪ್ರಚುರವಮಾಡಲ್ಪಟ್ಟಿರುವ ಪಾಲೊಂದರ ರೂ. 10ರ 10,000 ಸಾವಮಾನ್ಯ ಪಾಲುಗಳ ರೂ. 1,00,000

ಈ ರೀತಿಯಲ್ಲಿ ಪಾವತಿ ಮಾಡಲ್ಪಡತಕ್ಕದು:—ಅರ್ಜಿಯೊಡನೆ ಪಾಲೊಂದರ ರೂ. 5

ಪಾಲು ಕೊಡಲ್ಪಟ್ಟೊಡನೆ ಪಾಲೊಂದರ ರೂ. 5

ಇವುಗಳಲ್ಲಿ 1,681 ಪಾಲುಗಳು ಕೊಡಲ್ಪಟ್ಟಿದ್ದು ಯಾ ಚೆಂದಾ ಅರ್ಪಿಸಲ್ಪಟ್ಟಿದ್ದು ರೂ. 16,810 ಪಾವತಿಯಾಗಿದ್ದು ಶೇಷವು ಮಾತ್ರ ಈಗ ಸಿಗುವಂಥಾದ್ದಾಗಿರುತ್ತದೆ.

(b) ಹಾಲಿ ಪ್ರಚಾರ—ಪಾಲೊಂದರ ರೂ. 10ರ ಸೇಕಡಾ $7\frac{1}{2}$ಯ ಕ್ಯೂಮ್ಯುಲೇಟಿವ್ ಪ್ರೆಫರೆನ್ಸ್ 10,000 ಪಾಲುಗಳ ರೂ. 1,00,000

ಈ ರೀತಿಯಲ್ಲಿ ಪಾವತಿಮಾಡಲ್ಪಡತಕ್ಕದು:—ಅರ್ಜಿಯೊಡನೆ ಪಾಲೊಂದರ ರೂ. 5

ಪಾಲು ಕೊಡಲ್ಪಟ್ಟೊಡನೆ ಪಾಲೊಂದರ ರೂ. 5

ಡಿಬೆಂಚರುಗಳು ಏನೊಂದೂ ಪ್ರಚುರಮಾಡಲ್ಪಟ್ಟಿಲ್ಲ.

ಮೇಲೆ ಹೇಳಿದ ಪ್ರೆಫರೆನ್ಸ್ ಪಾಲುಗಳು ಅವನ್ನು ಪಡಕೊಂಡವರಿಗೆ, ತಾತ್ಕಾಲಿಕವಾಗಿ ಅವುಗಳ ಮೇಲೆ ತೆರಲ್ಪಟ್ಟಿರುವ ಮೂಲಧನದ ಮೇಲೆ ಸಾಲಿಯಾನಾ ವಾರ್ಷಿಕ ಶೇಕಡಾ $7\frac{1}{2}$ಯ ನಿಶ್ಚಿತ ಕ್ಯೂಮ್ಯೂಲೇಟಿವ್ ಪ್ರೆಫರೆನ್ಸಿಯಲ್ ಡಿವಿಡೆಂಡಿನ ಹಕ್ಕನ್ನು ಸ್ಥಾಪಿಸುವದಲ್ಲದೆ, ಕಂಪೆನಿಯನ್ನು ಮುಚ್ಚುವ ಕಾಲದಲ್ಲಿ ಇತರ ಸಾವಮಾನ್ಯ ಪಾಲುಗಾರರಿಗೂ ಮುಂಚಿತವಾಗಿ ಮೂಲಧನವನ್ನು ಹಿಂದೆ ಪಡೆಯುವ ಮತ್ತು ಕಂಪೆನಿಯನ್ನು ಮುಚ್ಚುವ ಕಾರ್ಯವನ್ನಾರಂಭಿಸುವ ವರೆಗೆ ಸಾರಲ್ಪಟ್ಟಿರಲಿ, ಯಾ ಸಾರಲ್ಪಡದೆ ಇರಲಿ, ಡಿವಿಡೆಂಡಿನ ಬಾಕಿಯನ್ನು ಪಡೆಯುವ ಅಧಿಕಾರವನ್ನೂ ಕೊಡುವದು. ಆದರೆ ಕಂಪೆನಿಯ ಲಾಭ ಯಾ ಆಸ್ತಿಗಳಲ್ಲಿ ಅದಕ್ಕಿಂತಲೂ ಹೆಚ್ಚಿಗಿನ ಯಾವ ಹಕ್ಕನ್ನೂ ಸ್ಥಾಪಿಸುವದಿಲ್ಲ.

ಡ್ಯಾರೆಕ್ಟರರು

ಮ. ರಾ. ರಾ.ಗಳಾದ ಟಿ. ಮಾನವೇದನ್ ತಿರುಮಲ್ಪಾಡ್, ಅವರ್ಗಳ್, ನೀಲಾಂಬೂರಿನ ರಾಜರು, ಕಲ್ಲಿಕೋಟೆಯ ಮಲಬಾರ್ ಚೇಂಬರ್ ಒಫ್ ಕೊಮರ್ಸಿನ ಅಧ್ಯಕ್ಷರು; ಸರೋಜಾ ಮಿಲ್ಸ್, ಲಿಮಿಟೆಡ್, ಕೊಯಂಬತ್ತೂರು, ಕೊಚ್ಚಿನ್ ಫರ್ನಿಚರ್ ಕೊ., ಲಿಮಿಟೆಡ್, ಮದ್ರಾಸು, ಯುನ್ಯಾಟೆಡ್ ಐಸ್ ಫ್ಯಾಕ್ಟರೀಸ್, ಲಿಮಿಟೆಡ್, ಕಲ್ಲಿಕೋಟೆ ಇವುಗಳ ಡ್ಯಾರೆಕ್ಟರರು; ನೀಲಾಂಬೂರು.

ಕೆ. ಬಿ. ಶಂಕರರಾವ್, ಅವರ್ಗಳ್, ಬಿ. ಎ., ಬಿ.ಎಲ್., ವಕೀಲ್ ಮತ್ತು ಡ್ಯಾರೆಕ್ಟರರು, ದಿ ರಾಧಾ ಬ್ಯಾಂಕ್, ಲಿಮಿಟೆಡ್, ಕಲ್ಲಿಕೋಟೆ, ಮಂಗಳೂರು.

ಎಂ. ಎಸ್. ಮಾಧವರಾವ್, ಬಿ. ಎ., ಭೂಮ್ಯಾಲಿಕ ಮತ್ತು ಪಬ್ಲಿಸಿಸ್ಟ್, ಮಂಗಳೂರು.

ಆರ್. ಎನ್. ಬಿಜೂರ್, ಅವರ್ಗಳ್, ಬಿ. ಎ., ವ್ಯಾಪಾರಿ ಮತ್ತು ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಮಿಲ್ಸ್, ಲಿಮಿಟೆಡ್‌ನ ಸೇಲ್ಸ್ ಏಜೆಂಟರು, ಕಲ್ಲಿಕೋಟೆ.

ಯು. ಬಿ. ಸೋಮೇಶರಾವ್, ಅವರ್ಗಳ್, ಬ್ಯಾಂಕರ್, ಕಲ್ಲಿಕೋಟೆ; ಪ್ರೆಸಿಡೆಂಟ್ ಮತ್ತು ಮ್ಯಾನೆಜಿಂಗ್ ಡ್ಯಾರೆಕ್ಟರ್, ದಿ ರಾಧಾ ಬ್ಯಾಂಕ್, ಲಿಮಿಟೆಡ್, ಕಲ್ಲಿಕೋಟೆ; ಮ್ಯಾನೇಜಿಂಗ್ ಡ್ಯಾರೆಕ್ಟರ್, ಯುನ್ಯಾಟೆಡ್ ಐಸ್ ಫ್ಯಾಕ್ಟರೀಸ್, ಲಿಮಿಟೆಡ್, ಕಲ್ಲಿಕೋಟೆ.

ಮ್ಯಾನೇಜಿಂಗ್ ಏಜೆಂಟರು

ಮೆಸರ್ಸ್. ರಾಮಚಂದ್ರ & ಕೊ., ರಾಧಾ ಬ್ಯಾಂಕ್ ಬಿಲ್ಡಿಂಗ್ಸ್, ಚಾಲಾಪುರಂ ಪೋಸ್ಟ್, ಕಲ್ಲಿಕೋಟೆ.

ಬ್ಯಾಂಕರುಗಳು

1. ದಿ ಸೆಂಟ್ರಲ್ ಬ್ಯಾಂಕ್ ಒಫ್ ಇಂಡಿಯಾ, ಲಿಮಿಟೆಡ್, ಮದ್ರಾಸು.
2. ದಿ ಟ್ರಾವೆಂಕೂರು ನೇಶನಲ್ ಬ್ಯಾಂಕ್, ಲಿಮಿಟೆಡ್, ಕಲ್ಲಿಕೋಟೆ.
3. ದಿ ರಾಧಾ ಬ್ಯಾಂಕ್, ಲಿಮಿಟೆಡ್, ಕಲ್ಲಿಕೋಟೆ.

ಆಡಿಟರ್

ವಿ. ಟಿ. ಎಸ್. ಕುಂಜಿತಪದಂ, ಬಿ. ಎ., ಜಿ. ಡಿ. ಎ., ಡಿ. ಇಕೊನ್., ಅಕೌಂಟಾಂಟ್, ಆರ್. ಎ., 11, ಜಾಫರ್ ಸ್ಯಾರಂಗ್ ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು.

ಲೀಗಲ್ ಅಡ್ವೈಸರ್

ಮ. ರಾ. ರಾ. ಡಿ. ರಾಮಕೃಷ್ಣ ಭಟ್, ಅವರ್ಗಳ್, ಬಿ. ಎ., ಬಿ. ಎಲ್., ವಕೀಲ್, ಕಲ್ಲಿಕೋಟೆ.

ಕಾರ್ಖಾನೆ

ಕಮ್ಮಿಸ್ಸೇರಿಯಟ್ ಬಿಲ್ಡಿಂಗ್ಸ್, ಕಲ್ಲಿಕೋಟೆ.

ರಿಜಿಸ್ಟರ್ಡ್ ಕಾರ್ಯಾಲಯ

ಕಮ್ಮಿಸ್ಸೇರಿಯಟ್ ಬಿಲ್ಡಿಂಗ್ಸ್, ಕಲ್ಲಿಕೋಟೆ, (ಮಲಬಾರ್).

ಪ್ರೊಸ್ಪೆಕ್ಟಸ್.

ಈ ಕಂಪೆನಿಯ ಮೆಮೊರಾಂಡಂ ಆಫ್ ಅಸೋಸಿಯೇಶನಿನಲ್ಲಿ ಹೇಳಲ್ಪಟ್ಟಿರುವ ಉದ್ದಿಶ್ಯ ಮತ್ತು ಕಾರ್ಯಗಳಿಗಾಗಿಯೂ, ಮುಖ್ಯವಾಗಿ ಹಿಂದೂಸ್ಥಾನದಲ್ಲಿ ತನ್ನ ಸವಮಾನದ ಇತರ ಕಾರ್ಖಾನೆಗಳ ಸಾಲಿನಲ್ಲಿ ಪ್ರಾಮುಖ್ಯ ಸ್ಥಾನದಂಥಾ ಪ್ರಖ್ಯಾತಿಯನ್ನು ಪಡೆದಿರುವ ರಾಮು ಹೊಸಿಯರಿ ವರ್ಕ್ಸ್, ಕಲ್ಲಿಕೋಟೆ, ಎಂಬ ಪ್ರಸಿದ್ಧ ವ್ಯಾಪಾರಿ ಸಂಸ್ಥೆಯನ್ನು ಚಾಲುಸ್ಥಿತಿಯಲ್ಲಿಯೇ ವಿ. ಯು. ಬಿ. ಸೋಮೇಶರಾಯರಿಂದ ಪಡಕೊಳ್ಳುವ ಉದ್ದಿಶ್ಯದಿಂದಲೂ 1936ನೆ ಫಿಬ್ರಿಲ್ ತಾ. 2ರಲ್ಲು ಸ್ಥಾಪಿಸಲ್ಪಟ್ಟು ರಿಜಿಸ್ಟರ್ ಮಾಡಲ್ಪಟ್ಟಿತು.

ಕಂಪೆನಿಯ ರಿಜಿಸ್ಟರ್ಡ್ ಕಾರ್ಯಾಲಯವೂ, ಕಾರ್ಖಾನೆಯೂ ಮತ್ತು ವ್ಯಾಪಾರದ ಮುಖ್ಯ ಸ್ಥಳವೂ ಕಲ್ಲಿಕೋಟೆ (ಮಲಬಾರ ಜಿಲ್ಲೆ)ಯಲ್ಲಿರುತ್ತದೆ.

ಮ್ಯಾಂಜಲಕ ವ್ಯಾಪಾರಿ ಸಂಸ್ಥೆಯು (ರಾಮು ಹೊಸಿಯರಿ ವರ್ಕ್ಸ್) ಡ್ಯಾರೆಕ್ಟರರು ಅಧಿಕ ಮೂಲಧನದಿಂದಲೂ ಮತ್ತು ಹೆಚ್ಚಿಗಿನ ಅತ್ಯಾಧುನಿಕ ಯಂತ್ರೋಪಕರಣಗಳ ಸ್ಥಾಪನದಿಂದಲೂ, ವ್ಯಾಪಾರದ ಅಭಿವೃದ್ಧಿಗೆ ಯೋಗ್ಯ ಸಾಧ್ಯತೆಗಳಿರುವದರಿಂದ, ವ್ಯಾಪಾರವನ್ನು ವರ್ಧಿಸಬಹುದೆಂದು ಅರಿತುದರಿಂದ ಸಾರ್ವಜನಿಕ ನಿಯಮಿತ ಸಂಸ್ಥೆಯಾಗಿ ಮಾರ್ಪಡಿಸಲ್ಪಟ್ಟಿತು.

ಸಾವಮಾನ್ಯ:—ನೇಯಿಗೆಯ ಕೈಗಾರಿಕೆಯು ಎರಡು ಮುಖ್ಯ ವಿಭಾಗಗಳನ್ನುಳ್ಳುದಾಗಿದೆ. ಅಂದರೆ ಊಲನ್ ವಿಭಾಗ ಮತ್ತು ಹತ್ತಿ ವಿಭಾಗ. ಸೂಕ್ಷ್ಮವಾಗಿ ನುಡಿಯುವದಾದರೆ ಊಲನ್ ವಿಭಾಗವು ಉತ್ತರ ಹಿಂದೂಸ್ಥಾನದ ಶೀತಪ್ರದೇಶಗಳಾದ ಪಂಜಾಬ್ ಮತ್ತು ಕಾಶ್ಮೀರ ಪ್ರದೇಶಗಳಿಗೆ ಮಾತ್ರ ಸಂಬಂಧಿಸಿದ್ದು ಅಲ್ಲಿ ಅದೊಂದು ಪ್ರಾಮುಖ್ಯ ಕೈಗಾರಿಕೆಯಾಗಿದೆ. ಉದಾಹರಣಾರ್ಥವಾಗಿ, 1936ನೆ ಇಸವಿಯ ಜನವರಿ ತಿಂಗಳ ಕಲ್ಕತ್ತೆಯ 'ಇಂಡಸ್ಟ್ರಿ' ಪತ್ರಿಕೆಯು ಈ ಕೆಳಗಣಂತೆ ಹೇಳುತ್ತದೆ:—

'ಪಂಜಾಬದಲ್ಲಿನ ನೇಯಿಗೆ ಕೈಗಾರಿಕೆ'. 1935ನೆ ಮಾರ್ಚಿ ತಾ. 31ಕ್ಕೆ ಅಂತ್ಯವಾಗುವ ವರ್ಷದ, ಪಂಜಾಬ ಸರಕಾರದ ಕೈಗಾರಿಕೆ ಶಾಖೆಯ ವರದಿಯನ್ನು ವಿಮರ್ಶಿಸುವಾಗ, ಸ್ಥಳೀಯ ಸರಕಾರವು, ಲೂದಿಯಾನದಲ್ಲಿನ ನೇಯಿಗೆಯ ಕೈಗಾರಿಕೆಗೆ ಅದೊಂದು ಉತ್ತಮ ವರ್ಷವಾಗಿತ್ತೆಂದು ಹೇಳುತ್ತದೆ. ಉತ್ಪತ್ತಿಯ ಮೌಲ್ಯವು ರೂ. 40,000,000 (ರೂಪಾಯಿ ನಾಲ್ಕು ಕೋಟಿ) ಎಂದು ಅಂದಾಜುಮಾಡಲ್ಪಟ್ಟಿದೆ; ಇದು ಹಿಂದಿನ ವರ್ಷದ ಸಂಖ್ಯೆಯ ಸುಮಾರು ದುಬಾರೆಯಷ್ಟಾಗಿದೆ. ಆಮದಾದ ನೇಯಿಗೆ ಪದಾರ್ಥಗಳ ಮೇಲಣ ಟ್ಯಾರಿಫ್ ಡ್ಯೂಟಿಯಿಂದಾಗಿ ಸ್ಥಳೀಯ ಕಾರ್ಖಾನೆದಾರರು ಪ್ರಯೋಜನವನ್ನು ಪಡೆದರು. ಲೂದಿಯಾನಾದಲ್ಲಿ ನೇಯಿಗೆಯ ಕೈಗಾರಿಕೆಯಲ್ಲಿ 6000 ಮಜೂರರು ಕೆಲಸವನ್ನು ಪಡೆದರು. ಲಾಹೋರ್ ಮತ್ತು ಅಮೃತಸರದ ನೇಯಿಗೆಯ ಕಾರ್ಖಾನೆಗಳೂ ಸಹ ಉತ್ತಮವಾಗಿ ನಡೆದುವು.'

ಹತ್ತಿಯ ವಿಭಾಗವು ಸಾವಮಾನ್ಯವಾಗಿ ಕರಾವಳಿಯ ಉಷ್ಣಪ್ರದೇಶಗಳಿಗೆ ಮಾತ್ರ ಸಂಬಂಧಿಸಿದ್ದು ಈ ವಿಭಾಗದಲ್ಲಿ ದಕ್ಷಿಣ ಹಿಂದೂಸ್ಥಾನವು ತಯಾರಿಯ ಹಾಗೂ ವ್ಯಾಪಾರದ ಹೀಗೆರಡು ದೃಷ್ಟಿಗಳಿಂದಲೂ ಪ್ರಾಮುಖ್ಯ ಭಾಗವನ್ನು ವಹಿಸುತ್ತದೆ. ಬಹಳ ಇತ್ತೀಚೆಗಿನ ವರೆಗೆ ಈ ಹತ್ತಿಯ ವಿಭಾಗಕ್ಕೆ **ಮಲಬಾರ** ಮತ್ತು **ದಕ್ಷಿಣ ಕನ್ನಡ**ಗಳು, ಆ ಪ್ರಶಂಸಾಪಾತ್ರರಾದ ಬಾಸೆಲ್ ವಿಶನಿನವರಿಂದ, ಈ ಕೈಗಾರಿಕೆಯು ಅಲ್ಲಿ ಸ್ಥಾಪಿತವಾದುದರಿಂದಾಗಿ, ಹೊಂದಿದುವಾಗಿದ್ದು **ಮಲಬಾರವು** ಇಂದು ಈ ಕೈಗಾರಿಕೆಯ ಒಂದು ಮುಖ್ಯ ಕೇಂದ್ರವೂ, ಅದರ ಪದಾರ್ಥಗಳ ದೊಡ್ಡದೊಂದು ಗಿರಾಕಿಯೂ ಆಗಿರುತ್ತದೆ.

ಈ ಕೈಗಾರಿಕೆಗೆ ಪ್ರತ್ಯೇಕವಾದ ಚತುರತೆಯ ಮಜೂರರು ಬೇಕಾಗಿದ್ದು, ಇವರು ಮಲಬಾರಿನಲ್ಲಿ ತುಂಬಾ ಇದ್ದಾರೆ. ಕೆಲವೊಂದು ವಿಧಾನಗಳಿಗೆ ಬಹಳ ನಾಜೂಕಾದ ರೀತಿಯ ಕೈಗೆಲಸವು ಬೇಕಾಗಿದ್ದು, ಇವನ್ನು ಹೆಂಗಸರು ಸಮರ್ಥತೆಯಿಂದ ಮಾಡುತ್ತಿದ್ದು, ಇಂಥಾ ಮಜೂರವರ್ಗವು ಮುಖ್ಯವಾಗಿ ಕಳೆದ ಮೂರು ನಾಲ್ಕು ತಲಾಂತರಗಳಿಂದ ಮಿಶನರಿಗಳಿಂದ ತರಬೇತು ಮಾಡಲ್ಪಟ್ಟಿರುವ ಕ್ರಿಶ್ಚಿಯನ್ ಮತಾಂತರಿಗಳಲ್ಲಿ ದೊರಕಿಸಿಕೊಳ್ಳಲ್ಪಡುತ್ತದೆ. **ಕಲ್ಲಿಕೋಟೆಯು** ಮಲಬಾರ ಜಿಲ್ಲೆಯ ಮುಖ್ಯಸ್ಥಾನವಾದುದರಿಂದಾಗಿ; ಅಗ್ಗವಾದ ಚತುರ ಮಜೂರವರ್ಗ ಮತ್ತು ಉತ್ತಮ ಚಲಾವಣೆಯ ಸೌಕರ್ಯಗಳಿಂದಾಗಿ, ಬಹಳ ಸಮಯದಿಂದ ಈ ಕೈಗಾರಿಕೆಯ ತವರುಮನೆಯಾಗಿರುತ್ತದೆ. ಬನಿಯನು ಮೊದಲಾದುವುಗಳಿಗೆ ವ್ಯಾಪಾರಿ ಕೇಳಿಕೆಯು ದಿನೇ ದಿನೇ ಹೆಚ್ಚುತ್ತಿದ್ದು, ಈ ವ್ಯಾಪಾರದಲ್ಲಿ ದಕ್ಷಿಣ ಹಿಂದೂಸ್ಥಾನವು ತನಗೆ ಬೇಕಾದಷ್ಟನ್ನು ಪೂರೈಸಲು ತನ್ನಷ್ಟಕ್ಕೆ ಸಮರ್ಥವಾಗಬೇಕಾದರೆ, ಈ ರೀತಿಯ ಇನ್ನೂ ಹೆಚ್ಚಿಗಿನ ಕಾರ್ಖಾನೆಗಳಿಗೆ ಎಡೆಯಿದೆ.

ವ್ಯಾಪಾರ ಮತ್ತು ಮಾರ್ಕೆಟುಗಳು:—ಇದು ಹಿಂದೂಸ್ಥಾನದ ಉಪೇಕ್ಷಿತ ಕೈಗಾರಿಕೆಗಳಲ್ಲೊಂದಾಗಿರುತ್ತದೆ. ಪುಟ್ಟ ಕೈಗಾರಿಕೆಯಾದುದರಿಂದಾಗಿ ಇದು ದೊಡ್ಡ ಧನಾಢ್ಯರ ಗಣನೆಯನ್ನು ಆಕರ್ಷಿಸಿಲ್ಲ. ಆ ಮಹಾಯುದ್ಧದ ಅನಂತರದ ಕೈಗಾರಿಕೆಯ ಉತ್ಕರ್ಷತೆಯ ಕಾಲದಲ್ಲಿ ಸಾಕಷ್ಟು ಧನಾಧಾರಗಳಿಲ್ಲದ ಜನಗಳಿಂದ ಕಾರ್ಖಾನೆಗಳು ಆರಂಭಿಸಲ್ಪಟ್ಟು ಸ್ವಲ್ಪ ಕಾಲಾವಧಿಯ ವಿಜಯದ ಅನಂತರ ಎರಡು ಕಾರಣಗಳಿಂದಾಗಿ ನಷ್ಟಹೊಂದಿದುವು; ಆ ಕಾರಣಗಳೆಂದರೆ (a) ಆಗ್ಗೆ ಸಂಭವಿಸಿದ ಮುಗ್ಗಟ್ಟು ಮತ್ತು (b) ಜಪಾನಿನ ಹಿಸುಕುವ ಮೇಲಾಟ. ಆದರೆ ಇಂಡಿಯಾ ಸರಕಾರದವರು ಆ ಮೇಲೆ ಹೊರಿಸಿದ ಸಾಕಷ್ಟು ಪಾಲನೆಯ ಕರಗಳಿಂದಾಗಿ, ಈ ಕೈಗಾರಿಕೆಯನ್ನು ಪುನರ್ಜೀವನಗೊಳಿಸಲು ಪ್ರಯತ್ನಗಳು ಈಗ ನಡೆಸಲ್ಪಡುತ್ತಿವೆ. ಈ ಹೊಸ ಕರಗಳು 1934-35ರಲ್ಲು ಜಾರಿಗೆ ಬಂದುವು. ಆ ವರ್ಷದಲ್ಲಿ ಸಮುದ್ರದ ಮೂಲಕ ಈ ಆಧಿಪತ್ಯಕ್ಕೂ ಹಿಂದೂಸ್ಥಾನಕ್ಕೂ ಆಮದುಮಾಡಲ್ಪಟ್ಟ ಹತ್ತಿ ನೇಯಿಗೆಯ ಮೌಲ್ಯವು ರೂ. 77 ಲಕ್ಷ, ಈ ಕರಗಳು ಹೊರಿಸಲ್ಪಟ್ಟ ಒಂದು ವರ್ಷದ ಅನಂತರ ಆಮದಿನ ಮೌಲ್ಯದಲ್ಲಿ ಬಹಳವಾದ ಇಳಿತವಿದ್ದು 1935–36ನೆ ವರ್ಷದಲ್ಲಿ ಅದು ರೂ. 57 ಲಕ್ಷವಾಗಿತ್ತು. ಈಗ ಇರುವ ಸ್ಥಳೀಯ ಕಾರ್ಖಾನೆಗಳು ಸ್ಥಳೀಯ ಬೇಡಿಕೆಯನ್ನು ಪೂರೈಸಲು ಅಸಮರ್ಥವಾಗಿದ್ದು, ಇದು ಜಪಾನಿನ ಮ್ಯಾಲುಗಳ ಸಹಾಯದಿಂದ ಪೂರೈಸಲ್ಪಡುತ್ತದೆ. ಗಿರಣಿ ಕೈಗಾರಿಕೆಯಲ್ಲಿ, ನೇಯಿಗೆಯು ಒಂದು ಮುಖ್ಯ ಅಂಗವಾಗಿದ್ದು ಬಹಳ ಲಾಭದಾಯಕವಾದುದಾಗಿರುತ್ತದೆ; ಮತ್ತು ಮದ್ರಾಸು ಸರಕಾರವು ಟೆಕ್ಸ್‌ಟೈಲ್ ಎಕ್ಸ್‌ಪರ್ಟರ ಆರ್ಥಿಕ ವರದಿಯಲ್ಲಿ ಈ ಕೈಗಾರಿಕೆಯಲ್ಲಿ, ಸರಿಯಾಗಿ ಸಜ್ಜುಗೊಳಿಸಲ್ಪಟ್ಟ ಕಾರ್ಖಾನೆಯು ಆವಶ್ಯಕವಾದ ಕಲಾಜ್ಞಾನದಿಂದ ಚತುರತೆಯಿಂದಲೂ ಸೂಕ್ಷ್ಮತೆಯಿಂದಲೂ, ಚಲಾಯಿಸಲ್ಪಟ್ಟಲ್ಲಿ ಹಾಕಿದ ಮೂಲಧನದ ಮೇಲಣ ಲಾಭವು ಶೇಕಡಾ 12ಕ್ಕೆ ಕಡಿಮೆಯಾಗಬಾರದಾಗಿ ಹೇಳಲ್ಪಟ್ಟಿದೆ. ಕಲ್ಲಿಕೋಟೆಯಲ್ಲಿ ಇತ್ತೀಚೆಗೆ ಅನುಭವಸ್ಥ ನಿರ್ದೇಶಕ ಮಂಡಳಿಯಿಂದ ಸ್ಥಾಪಿಸಲ್ಪಟ್ಟ ರಿಜಿಸ್ಟರ್ ಮಾಡಲಟ್ಟ ಸ್ಥಳೀಯ ಕಾರ್ಖಾನೆಯೊಂದು ಧೈರ್ಯವಾಗಿ ಶೇಕಡಾ 20ರ ಮೇರೆಯನ್ನು ಅಂದಾಜು ಮಾಡಿದೆಯೆಂದು ತಿಳಿದುಬರುತ್ತದೆ.

ಹೊಸಿಯರಿ ಯಂತ್ರಸಾಧನಗಳಲ್ಲಿ ಹೆಸರುವಾಸಿಗಳಾದ ಯುರೋಪೀಯ ವಿದ್ವಾಂಸರುಗಳಿಂದ ಈ ಕಂಪೆನಿಯು. ಪ್ಲಾಂಟು ಮತ್ತೂ ಯಂತ್ರಸಾಧನಗಳ ಪರಿಶೋಧನೆ ಮಾಡಿಸಿದೆ; ಆ ಬಗ್ಗೆ ಅವರಿಂದ ಸರ್ಟಿಫಿಕೇಟನ್ನೂ ಪಡೆದಿದೆ.

'ಮೇಲ್ಕಂಡ ಈ ಪ್ಲಾಂಟಿನ ಮೂಲಕ, ದಿನಕ್ಕೆ 9 ತಾಸುಗಳ ಕೆಲಸದ ಮೇರೆಗೆ, ಮಾರಾಟಕ್ಕೆ ತಯಾರಾಗ ಬೇಕಾದ ಬನಿಯನುಗಳು ಸುಮಾರು 130 ಡಜನ್ (75 ಡಜನ್ ನೆಟ್ ಮತ್ತೂ 55 ಡಜನ್ ಸಾದಾ ಮತ್ತು ರಿಬ್).'

'ಈ ಮಾದರಿಯ ಒಂದು ಕಾರ್ಖಾನೆಯನ್ನು ಈಗ ಹೊಸ ಯಂತ್ರೋಪಕರಣಗಳೊಡನೆ ಸ್ಥಾಪಿಸಬೇಕಾದಲ್ಲಿ ಸುಮಾರು ರೂ. 70,000ದಿಂದ ರೂ. 75,000ಗಳ ವರೆಗೆ ಖರ್ಚಾಗಬಹುದು. ಅತ್ಯಾಧುನಿಕ ರೀತಿಯ ಸಾದಾ ಜರ್ಸಿ ಯಂತ್ರಗಳನ್ನು ಸುಮಾರು 20,000 ರುಪಾಯಿಗಳ ವೆಚ್ಚದಿಂದ ಜತೆಗೂಡಿಸಿ ಈ ಕಾರ್ಖಾನೆ ಯನ್ನು ಒಂದು ಆದರ್ಶಪ್ರಾಯವಾದ ಫ್ಯಾಕ್ಟರಿಯಾಗಿ ಮಾಡಬಹುದು.'

'ಅಗ್ಗವಾದ, ಮೊದಲೇ ಶಿಕ್ಷಣ ಪಡೆದ ಶ್ರಮಜೀವನ ಸೌಲಭ್ಯ ಹಾಗೂ ರೈಲ್ ಮತ್ತೂ ಸಮುದ್ರಗಳೆರಡರ ಕಡೆ ಯಿಂದಲೂ ಅತ್ತಿತ್ತ ಸಾಗಿಸುವ ವಹಿವಾಟಿದ ಸೌಕರ್ಯ ಈ ಕಾರಣಗಳಿಂದ ಈ ಕೈಗಾರಿಕೆಯ ಅಭಿವೃದ್ಧಿಗೆ ಪಶ್ಚಿಮಕರಾವಳಿಯೇ ಅತ್ಯಂತ ಯೋಗ್ಯ ಪ್ರದೇಶವಾಗಿದೆ. ವಿದೇಶೀ ಮೇಲಾಟಕ್ಕೆ ವಿರುದ್ಧವಾಗಿ ಸರಕಾರದಿಂದ ಏರ್ಪಡಿಸಿರುವ ಆ ಸುಂಕವು ಈ ಕೈಗಾರಿಕೆಯ ಮುಂದಿನ ಅಭಿವೃದ್ಧಿಯ ಕುರಿತು ಸಾರುತ್ತಿರುವ ಒಂದು ಶುಭಸೂಚನೆಯ ದೃಷ್ಟಾಂತವಾಗಿದೆ.'

ಈಗ ಅಗತ್ಯವಿರುವ ಮೂಲಧನವು, ಆ ಯಂತ್ರ ಸಾಮುಗ್ರಿ ಮತ್ತೂ ಪ್ಲಾಂಟಿನ ಸಂಬಂಧವಾಗಿ ಇವನ್ನು ಮಾರಿದವರಿಗೆ, ಸಲ್ಲಬೇಕಾಗಿರುವ ಆ ಮಾರಾಟದ ಕ್ರಯ ದ ಬಾಕಿಯ ನಿವೃತ್ತಿಗೂ ಇನ್ನೂ ಕೆಲವು ಅತ್ಯಾಧುನಿಕ ವಾದ ಹೊಸ ಹೊಸ ಯಂತ್ರಸಾಧನಗಳನ್ನು ಇಲ್ಲಿ ಏರ್ಪಡಿಸಿ ಈ ಕಾರ್ಖಾನೆಯನ್ನು ವೃದ್ಧಿಗೊಳಿಸಿ, ವಿಸ್ತ ರಿಸಲಿಕ್ಕೂ ಹಾಗೂ ಈ ಕಾರ್ಖಾನೆಯ ಕೆಲಸಕಾರ್ಯ ಗಳಿಗೂ ಉಪಯೋಗಿಸಲ್ಪಡುವುದು. ಈ ರೀತಿ ಇದನ್ನು ವಿಸ್ತಾರಗೊಳಿಸುವ ಕೆಲಸವು ಪೂರ್ಣವಾದಾಗ, ಮಾರಾ ಟಕ್ಕೆ ತಯಾರಾಗುವ ಸರಕುಗಳು ಬಹಳ ಮಟ್ಟಿಗೆ ಹೆಚ್ಚಿ, ಅದರ ಫಲಿತಾಂಶವೂ ಬಹಳ ಉತ್ತಮಗೊಳ್ಳುವುದು.

ಈ ಕಾರ್ಖಾನೆಯಲ್ಲಿ ಈಗ ಮುಖ್ಯವಾಗಿ ತಯಾ ರಾಗುವ ಸಾಧನಗಳೆಂದರೆ ನೆಟ್ ಮತ್ತೂ ಸಾದಾ ಜರ್ಸಿ ಬನಿಯನುಗಳು ಹಾಗೂ ಸೊಳ್ಳೆಫರದೆಗಳು. ಪರದೇಶ ಗಳಿಂದ ಬರತಕ್ಕವುಗಳ ಮೇಲೆ ಸೇಕಡಾ 25ರ ಸಲೆಯ ಸುಂಕವು ಮಾತ್ರವೇ ಇದ್ದರೂ ಜಪಾನಿನವರ ಸ್ಪರ್ಧೆಯು ನೆಟ್ ಬನಿಯನುಗಳ ವಿಚಾರದಲ್ಲಿರಲೇ ಇಲ್ಲ. ಈಗ ಲಂತೂ, ಇಂಡಿಯಾ ಸರಕಾರದವರು, ಡಜನ್ ಬನಿಯನಿಗೆ ಸುಮಾರು ರೂ. 2ರಿಂದ ರೂ. 2—4—0ರ ವರೆಗೆ ಬರಬ ಹುದಾದ ಅಂದರೆ, ಸೇಕಡಾ 25ರ ಸಲೆಯ ಮುಂಪಾವತಿ ಅಥವಾ ಪೌಂಡೊಂದರ 12 ಆಣೆ ಇವುಗಳಲ್ಲಿ ಹೆಚ್ಚಿರುವು ದನ್ನು, ಸುಂಕವಾಗಿ ತೆರಬೇಕೆಂದು ವಿಧಿಸಿ ಈ ಕೈಗಾರಿಕೆ ಗೊಂದು ವಿಶೇಷ ಪ್ರೋತ್ಸಾಹವನ್ನಿತ್ತ ಕಾರಣ, ಹೊರಗಡೆ ಯವರ ಮೇಲಾಟಕ್ಕೆ ಬೆದರಬೇಕಾಗಿಲ್ಲವೆಂದು ಡೈರೆಕ್ಟ ರರು ಧೈರ್ಯಗೊಂಡಿದ್ದಾರೆ.

ಈ ಸಂಸ್ಥೆಯು ಸ್ವದೇಶೀ ಉದ್ಯಮವಾಗಿದ್ದು, ಈ ಕಾರ್ಖಾನೆಯ ಸಾಧನಗಳಿಗೆ ಉತ್ತರ ಹಿಂದುಸ್ಥಾನದ ಮಾರ್ಕೆಟುಗಳಿಂದ ಕೂಡ ವಿಶೇಷವಾದ ಕೇಳಿಕೆಗಳಿವೆ. ಈ ಸಂದರ್ಭದಲ್ಲಿ ವಿದೇಶಗಳ ಒಂದೆರಡು ಕಂಪೆನಿಗಳು ಈ ಸಂಸ್ಥೆಯಲ್ಲಿ ವಿಚಾರಿಸಿ, ಈ ಸಂಸ್ಥೆಯ ಸಾಮುಗ್ರಿ ಗಳ ಮಾದರಿಯನ್ನೂ ತರಿಸಿಕೊಂಡಿವೆ ಎಂದು ತಿಳಿಸ ಬೇಕಾಗಿದೆಯಲ್ಲದೆ, ಅವರ ದೊಡ್ಡ ದೊಡ್ಡ ಆರ್ಡರು ಗಳನ್ನೂ ನಿರೀಕ್ಷಿಸಲಾಗಿದೆ. ಸಹಜವಾಗಿಯೂ ಈ ವಿಚಾರಣೆಯು, ಹಿಂದೀ ಕೈಗಾರಿಕೆಗಳಿಗೂ ಪ್ರವೇಶಿಸದ ಮಲಯ, ಸ್ಟೈಟ್ ಸೆಟ್ಲ್‌ಮೆಂಟ್ಸ್ ಮತ್ತೂ ಆಫ್ರಿಕದ ಕಾಲನಿಗಳ ಸಂಬಂಧವಾಗಿದೆ.

ಈ ಕಂಪೆನಿಯು 1936ನೇ ಎಪ್ರಿಲಿನಲ್ಲಿ ತನ್ನ ಕೆಲ ಸವನ್ನು ಆರಂಭಿಸಿತು. ಬನಿಯನುಗಳಿಗಾಗಿ, ಋತು ಮಾನದ ಕೇಳಿಕೆಗಳು ದಶಂಬರ ಜನವರಿಯಲ್ಲಿ ಆರಂಭ ವಾಗುತ್ತಿದ್ದು, ಆಗ ಬಂದ ಆರ್ಡರುಗಳ ಯಾವತ್ತು ಸ್ತಾಮುಗ್ರಿಗಳನ್ನು ಜೂನ್ ಅಂತ್ಯದೊಳಗಾಗಿ ಆಯಾ ಆರ್ಡರು ಕೊಟ್ಟವರಿಗೆ ಒಪ್ಪಿಸಿ ಪೂರೈಸುವುದು ಸಾಮಾನ್ಯ ವಾಗಿದೆ. ಬಂಗಾಳದ ಸರಬರಾಯಿಗಾಗಿ ಕಲ್ಕತ್ತೆಯ ದೊಡ್ಡ ದೊಡ್ಡ ವ್ಯಾಪಾರಿಗಳಿಂದಲೂ, ವಿದೇಶದ ಮಾರ್ಕೆ ಟುಗಳ ಸರಬರಾಯಿಗಾಗಿ ಯುರೋಪಿಯನ್ ಫರ್ಮು ಗಳಿಂದಲೂ ಕಾಗದಪತ್ರಗಳು ಬಂದಿವೆ. ಹಾಗೂ ಕೊಚ್ಚಿ, ತಿರುವಾಂಕೂರು ಸಂಸ್ಥಾನ, ಮಲಬಾರ್, ದಕ್ಷಿಣ ಕನ್ನಡ, ಮಧ್ಯಪ್ರಾಂತ, ಸಂಯುಕ್ತಪ್ರಾಂತ, ದಿಲ್ಲಿ ಮತ್ತು ಸಿಂಧ್, ಪ್ರಾಂತಗಳಿಂದ ಆಗಲೇ ಆರ್ಡರುಗಳು ಬಂದಿವೆ. ಆಂಧ್ರ ತಮಿಳುನಾಡು, ಬೊಂಬಯಿ, ಕರಾಚಿಗಳಿಗೂ ಬನಿಯನ್ ಗಳನ್ನು ಒದಗಿಸುವಂತೆ ಏರ್ಪಾಡುಗಳು ನಡೆಯುತ್ತಿವೆ. ಕಲ್ಕತ್ತೆಯಲ್ಲಿರುವ ನಮ್ಮ ಪ್ರತಿನಿಧಿಗಳಿಂದ 20,000 ಡಜನಿನಿಂದ 30,000 ಡಜನ್ ವರೆಗಿನ ಬನಿಯನು ಗಳನ್ನು ಒದಗಿಸುವಂತೆ ವಾಗ್ದಾನವು ದೊರಕಿದೆ. ಆದುದ ರಿಂದ ಕಂಪೆನಿಯು ವಿನಿಯೋಗಿಸಿದ ಮೂಲಧನದ ಮೇಲೆ 10ರಿಂದ 12ರ ಸಲೆಯ ಪ್ರತಿಫಲವನ್ನು ನಿಸ್ಸಂದೇಹ ವಾಗಿಯೂ ಲೆಕ್ಕ ಹಾಕಿದೆ. ಮತ್ತೂ ಈ ಕಾರ್ಖಾ ನೆಯ ವಿಸ್ತಾರದೊಡನೆ, ಇನ್ನೂ ಹೆಚ್ಚಿನ ಉತ್ತಮ ಪ್ರತಿ ಫಲವನ್ನೂ ಹಾರೈಸಲಾಗಿದೆ.

ಆದಾಯವನ್ನು ಗಳಿಸಲು ಅಗತ್ಯವಿರುವ ಎಲ್ಲದಕ್ಕೂ ಖರ್ಚುವೆಚ್ಚಗಳನ್ನಾಗಲೇ ಮಾಡಿ ಪೂರೈಸಿದ್ದು, ಈಗ ಕಂಪೆನಿಯು ತನ್ನ ಸುವ್ಯವಸ್ಥೆಯನ್ನೊಳಗೊಂಡ ವಾಸ್ತವಿಕ ವ್ಯವಹಾರವನ್ನೇ ನಡೆಸುತ್ತಿದೆ. ಕಂಪೆನಿಯು ಈಗಿನಿಂದಲೇ ಆದಾಯವನ್ನು ಗಳಿಸುವ ಸ್ಥಿತಿಯಲ್ಲಿದೆ. ಅಲ್ಲದೆ ಈ ಸಂಸ್ಥೆಯು ತನ್ನ ಮ್ಯಾನೇಜಿಂಗ್ ಏಜೆಂಟರುಗಳಾಗಿ ಮೆಸರ್ಸ್. ರಾಮಚಂದ್ರ ಎಂಡ್ ಕೋ, ಕಲ್ಲಿಕೋಟೆ, ಇವರ ಹಾಗೂ ಪಾರ್ಟನರರಾಗಿ ಈ ವ್ಯವಹಾರದಲ್ಲಿ ಸಾ ಕಷ್ಟು ಅನುಭವವಿರುವ ಶ್ರೀ. ಯು. ಬಿ. ಸೋಮೇಶ ರಾಯರ ಸೇವೆಯನ್ನು ಸಂಪಾದಿಸಿರುವುದು ಒಳ್ಳೆಯ ಅದೃಷ್ಟದ ಮಾತೆನ್ನಬೇಕು.

ಮಾರಿದವರು:—ಕಲ್ಲಿಕೋಟೆಯಲ್ಲಿ ರಾಮಾ ಹೊಸಿಯರಿ ವರ್ಕ್ಸ್ ಎಂಬ ಹೆಸರು ಮತ್ತು ಶೈಲಿಗಳೊಡನೆ ಶ್ರೀ. ಯು. ಬಿ. ಸೋಮೇಶರಾವ್, ಬ್ಯಾಂಕರ್, ಕಲ್ಲಿಕೋಟೆ, ಇವರು ನಡೆಸಿಕೊಂಡು ಬರುತ್ತಿದ್ದ ಈ ಹೊಸಿಯರಿ ವ್ಯಾಪಾರಸಂಘವನ್ನು ಕೆಳಗೆ ಸೂಚಿಸಿದ ಕರಾರಿನ ಷರತ್ತು ಮತ್ತು ನಿಯಮಗಳಿಗೆ ಒಳಪಟ್ಟು ಕೊಂಡುಕೊಳ್ಳುವ ಉದ್ದೇಶದಿಂದ ಕಂಪೆನಿಯು ಆ ರಾಯರೊಡನೆ ಒಂದು ಕರಾರು ಮಾಡಿಕೊಂಡಿದೆ. ಈ ಮಾರಾಟದ ಬೆಲೆಯು ರೂ. 58,136—5—9ಪೈಗಳಾಗಿದ್ದು, ಟ್ರಾನ್ಸ್‌ಫರ್ ಮಾಡಿದ ತಾರೀಕಿನಿಂದ ಶ್ರೀ. ಯು. ಬಿ. ಸೋಮೇಶರಾಯರಿಗೆ ರೂ. 22,074—2—9ಪೈಯನ್ನು ವರ್ಷಕ್ಕೆ ಸೇಕಡಾ 9%ರ ಬಡ್ಡಿ ಕೂಡಿಸಿ ಸಲ್ಲಿಸತಕ್ಕದೆಂದು ಒಪ್ಪಲಾಗಿದೆ. (b) ಹಾಗೂ ಸಂಪೂರ್ಣವಾಗಿ ತೆತ್ತು ಪೂರೈಸಿದ, ಪಾಲಿಗೆ ರೂ. 10/-ರ 1200 ಆರ್ಡಿನೆರಿ ಷೇರುಗಳನ್ನೂ ಅವರಿಗೆ ಕೊಡಬೇಕಾಗಿದೆ. (c) ಮತ್ತು ಮಾರಾಟ ಮಾಡಿದವರಿಗೆ ಕಂಪೆನಿಯು ಇನ್ನೂ ಸಲ್ಲಿಸಲು ಮಿಗುವ ಹಣದ ಅಂಶ ವನ್ನು ಕಂಪೆನಿಯೇ ಇಟ್ಟುಕೊಂಡು, ಟ್ರಾನ್ಸ್‌ಫರ್ ಆದ ತಾರೀಖಿನಿಂದ ಒಂದು ವರ್ಷದ ಮೇಲೆ ಆ ಹಣವನ್ನು ಬಡ್ಡಿ ಇಲ್ಲದೆ ಸಲ್ಲಿಸಬೇಕಾಗಿದೆ; ಇದರಲ್ಲಿ ಗುಡ್‌ವಿಲಿನ ಭಾಗವೇನೂ ಇಲ್ಲ.

ಕಂಟ್ರಾಕ್ಟುಗಳು:—ಈ ಕೆಳಗಿನ ಕಂಟ್ರಾಕ್ಟು ಗಳನ್ನು ಮಾಡಿಕೊಳ್ಳಲಾಗಿದೆ.

(1) ಕರಾರಿನಲ್ಲಿ ಕಾಣಿಸಿದ ಷರತ್ತು ಮತ್ತು ನಿಬಂಧನೆಗಳ ಮೇರೆಗೆ, ಕಂಪೆನಿಗೂ, ಶ್ರೀ. ಸೋಮೇಶರಾಯರಿಗೂ ರಾಮಾ ಹೊಸಿ ಯರಿ ಫ್ಯಾಕ್ಟರಿ, ಕಲ್ಲಿಕೋಟೆ, ಇದನ್ನು ಕೊಂ ಡುಕೊಳ್ಳಲು, ತಾ. 16—3—1936ರಲ್ಲಿ ಆಗಿರುವ ಕರಾರು.

(2) ನಮೂದಿಸಿಗುವ ಷರತ್ತು ಮತ್ತು ನಿಬಂಧನೆ ಗಳ ಮೇರೆಗೆ, ಕಂಪೆನಿಗೂ, ಮೆಸರ್ಸ್, ರಾಮಚಂದ್ರ ಎಂಡ್ ಕೋ, ಕಲ್ಲಿಕೋಟೆ, ಇವರಿಗೂ, ಕಂಪೆನಿಯ ರಾಮಚಂದ್ರ ಎಂಡ್ ಕೊ. ಇವರನ್ನು ಮೆನೇಜಿಂಗ್ ಏಜಂಟರ ನ್ನಾಗಿ ನೇಮಕ ಮಾಡುವ ಕುರಿತು ತಾ. 13—4—1936ರಲ್ಲಿ ಆಗಿರುವ ಕರಾರು.

ಮೆಮೊರೇಂಡವ್ ಆಫ್ ಎಸೋಸಿಯೇಶನ್:—ಹೆಸರು, ವಿಳಾಸ ಮತ್ತೂ ದಸ್ಕತು ಹಾಕಿದ ವರ ವಿವರಣೆ ಹಾಗೂ ಅವರಿಂದ ಚಂದಾ ಅರ್ಪಿಸಲಾದ ಪಾಲು ಸಂಖ್ಯೆಗಳ ಸಹಿತವಾದ ಮೆಮೊರೇಂಡಮಿನ ಸಹಿ ತವಾದ ಒಂದು ಪ್ರತಿಯನ್ನು ಪ್ರಾಸ್‌ಪೆಕ್ಟಸ್ಸಿನೊಡನೆ ಸೇರಿಸಲಾಗಿದ್ದು ಅದರದೇ ಒಂದು ಭಾಗವಾಗಿದೆ.

ಡೈರೆಕ್ಟರರಾಗಲು ಅರ್ಹತೆ:—ಒಬ್ಬ ಎಕ್ಸ್‌ಒ ಫಿಶಿಯೋ ಡೈರೆಕ್ಟರ್, ಒಬ್ಬ ಸ್ಪೆಶಲ್ ಡೈರೆಕ್ಟರ್, ಹಾಗೂ ಡಿಬೆಂಚರ್ ಡೈರೆಕ್ಟರ್ ಇವರ ಹೊರತಾಗಿರುವ ಡೈರೆಕ್ಟರರ ಅರ್ಹತೆಗೆ ಆತನು ಸ್ವಂತ ಹಕ್ಕಿನ 1000 ರೂಪಾಯಿ ಬೆಲೆ ಬಾಳುವ ಕಂಪೆನಿಯ ಪಾಲು ಗಳನ್ನು ಉಳ್ಳವನಾಗಿರಬೇಕು.

ಡೈರೆಕ್ಟರರಿಗೆ ಪ್ರತಿಫಲ:—ಡೈರೆಕ್ಟರರ ಸೇವೆಗೆ ಪ್ರತಿಫಲವು, ಅವನು ಹಾಜರಾಗುವ ಪ್ರತಿ ಮೀಟಿಂಗಿಗೂ, ಅಂಥ ಹಾಜರಾತಿಗೆ ತಗಲುವ ಯಾವುದಾದರೂ ಖರ್ಚಿನ ಕೂಡ, ರೂ. 10ಕ್ಕೆ ಮೀರದಂತೆ, ಆಗಾಗ ಡೈರೆಕ್ಟರರಿಂದ ನಿರ್ಮಾನಿಸಲ್ಪಡಬಹುದಾದ ಅಂಥ ಮೊತ್ತವಾಗಿರ ತಕ್ಕದ್ದು. ಕಂಪೆನಿಯು ತನ್ನ ಜನರಲ್ ಮೀಟಿಂಗಿನಲ್ಲಿ ಆಗಾಗ್ಗೆ, ಯಾವುದಾದರೂ ಪ್ರತ್ಯೇಕವಾದ ಸೇವೆಗೆಂದು ನಿರ್ಧರಿಸಬಹುದಾದ ಹೆಚ್ಚಿನ ಪ್ರತಿಫಲವನ್ನೂ, ಏನಾ ದರೂ ಇದ್ದಲ್ಲಿ, ಡೈರೆಕ್ಟರರಿಗೆ ತೆರಬಹುದು.

ಡೈರೆಕ್ಟರರ ಆಸಕ್ತಿಯ ಸ್ವಭಾವ ಮತ್ತೂ ವಿಶಾಲತೆ:—ಡೈರೆಕ್ಟರರಲ್ಲಿ ಒಬ್ಬರಾದ ಶ್ರೀ. ಯು. ಬಿ. ಸೋಮೇಶ ರಾಯರು ರಾಮಾ ಹೊಸಿಯರಿ ವರ್ಕ್ಸ್‌ನ್ನು ಮಾರಿದವರಾಗಿದ್ದು ಅವರಿಗೆ ಸಲ್ಲಬೇಕಾದ ಕೊಂಡುಕೊಂ ಡ ಬೆಲೆ ರೂ. 58,136-5-9ಪೈಯಲ್ಲಿ ಕಂಪೆನಿಯು ಅವ ರಿಗೆ ಮತ್ತೂ ಅವರು ನೇಮಿಸುವವರಿಗೆ ಕೊಂಡ ಬೆಲೆಯ ಅಂಶವಾಗಿ ಕಂಪೆನಿಯ ಸಂಪೂರ್ಣ ತೆತ್ತ 1200 ಪಾಲು ಗಳನ್ನು ಕೊಟ್ಟಿದೆ. ಇನ್ನು ಪ್ರಕೃತದ ಅರ್ಪಿಸೋಣದರ ವೊತ್ತದಿಂದ ಅವರಿಗೆ ರೂ. 46,136—5—9ಪೈ ಸಲ್ಲ ಬೇಕಾಗಿದೆ. ಶ್ರೀ. ಯು. ಬಿ. ಸೋಮೇಶರಾಯರೂ, ಶ್ರೀ. ಆರ್. ಎನ್. ಬಿಜೂರರವರೂ ಮೆನೇಜಿಂಗ್ ಏಜೆಂಟ್ಸ್ ರಾದ ಮೆಸರ್ಸ್. ರಾಮಚಂದ್ರ ಎಂಡ್ ಕೋ.ರವರ ಪಾ ರ್ಟನರರಾಗಿದ್ದು, ಸ್ಥಾಪಕರ ಪಾಲುಗಳೆಂದಾಗಲೀ, ಮ್ಯಾ ನೇಜಮೆಂಟಿನ ಪಾಲುಗಳೆಂದಾಗಲೀ ಯಾವ ಡೈರೆಕ್ಟರರಿ ಗಾಗಲೀ ಯಾವ ಪಾಲುಗಳನ್ನೂ ಕೊಟ್ಟಿಲ್ಲ.

ಪಾಲುಗಾರರ ಓಟಿನ ಹಕ್ಕು:—ಯಾವ ಕಾಲ ದಲ್ಲಿಯಾಗಲೀ, ಪ್ರತಿ ಪಾಲುಗಾರನೂ, ಅವನದು ಪ್ರಿಫ ರೆನ್ಸ್ ಅಥವಾ ಆರ್ಡಿನೆರಿ ಪಾಲುಗಳಾಗಿದ್ದರೂ, ಅವನು ಹಾಜರಿದ್ದಾಗಲೀ, ಪ್ರಾಕ್ಸಿ ಅಥವಾ ಎಟೋರ್ನಿ ಮೂಲಕ ವಾಗಲೀ, ಕೈ ತೋರಿಸಿ ಒಂದು ಓಟು ಕೊಡಲೂ ಮತ್ತೂ ಪೋಲಿನ ಕಾಲದಲ್ಲಿ ಅವನ ಪ್ರತಿ ಪಾಲಿಗೂ ಒಂದು ಓಟ್ ಕೊಡಲೂ ಹಕ್ಕುಳ್ಳವನಾಗಿರುತ್ತಾನೆ.

ಆಡಳಿತ:—ಕಂಪೆನಿಯ ಆಡಳಿತೆಯು ಮೆಸರ್ಸ್. ರಾಮಚಂದ್ರ ಎಂಡ್ ಕೊ., ಕಲ್ಲಿಕೋಟೆ, ಇವರ ಕೈಯಲ್ಲಿ ರುತ್ತದೆ. ಆದುದರಿಂದ ಕಂಪೆನಿಗೆ ಶ್ರೀ. ಯು. ಬಿ. ಸೋ ಮೇಶರಾಯರ ಅನುಭವದ ಸತ್ಫಲವು ದೊರಕುತ್ತದೆ.

ಆದಾಯ ವಿಭಾಗದಿಂದ ಸಾಲದ ಮತ್ತೂ ಠೇವ ಣಾತಿಯ ಮೇಲಿನ ಬಡ್ಡಿ, ಕೆಟ್ಟ ಸಾಲಗಳು, ಆದಾಯ ದಿಂದ ಸಲ್ಲಬೇಕಾದ ಕೆಲಸದ ಖರ್ಚು ಇವುಗಳನ್ನು ಕಳೆದು ಉಳಿಯುವ ವಾರ್ಷಿಕ ಏನ್ ಮುನಾಫೆಯಿಂದ ಮ್ಯಾನೇಜಿಂಗ್ ಏಜೆಂಟರಿಗೆ ಪ್ರತಿಫಲವು ಸೇಕಡ 10ರಂತೆ ಸಲ್ಲತಕ್ಕದ್ದು. ಆದಾಯತೆರಿಗೆ, ಸುಪರ್‌ಟೇಕ್ಸ್, ಸವೆ ಯುವ ಅಂಶಗಳ ಮೌಲ್ಯ, ಇನ್ಶೂರೆನ್ಸ್, ಸಿಂಕಿಂಗ್ ಫಂ ಡಿನ ಕ್ಷೇಮನಿಧಿ ಅಥವಾ ಮೂಲಧನದ ಲೆಕ್ಕಾಚಾರದ ಸಂಬಂಧವಾಗಿ ಆಗಬಹುದಾದ ಯಾವುದೇ ಖರ್ಚು ಇವು ಗಳನ್ನು ಅದರಿಂದ ಕಳೆಯದೆ ಅಂಥ ಕಮಿಶನು ಪ್ರತಿ ವರ್ಷವೂ, ಕಂಪೆನಿಯ ವಾರ್ಷಿಕ ಲೆಕ್ಕಪತ್ರಗಳನ್ನು ಪಾ ಲುಗಾರರು ಮಂಜೂರು ಮಾಡಿದ ಕೂಡಲೇ, ಸಲ್ಲತಕ್ಕ ದ್ದಾಗಿರುವುದು.

ಇದು ಹೊರತಾಗಿ ತಿಂಗಳಿಗೆ ನಿರ್ಣೈಸಿದ ಪ್ರತಿಫಲ ವಾದ ರೂ. ೫೫೦ ಅಥವಾ ಡೈರೆಕ್ಟರರು ಆಗಿಂದಾಗ ಮಂ ಜೂರು ಮಾಡಬಹುದಾದ ಅಂಥ ದೊಡ್ಡ ಮೊಬಲಗಿಗೂ ಕೂಡ ಅವರು ಬಾಧ್ಯರಾಗಿರುತ್ತಾರೆ.

ಕನಿಷ್ಠ ಮಿತಿಯ ಚಂದಾ:—ಡೈರೆಕ್ಟರರು ಎ ಲೋಟ್‌ಮೆಂಟಿನ ಕುರಿತು ಮುಂದರಿಸಬಹುದಾದ ಕನಿಷ್ಠ ಮಿತಿಯ ಚೆಂದಾ ರೂಪಾಯಿ 100 ಮೌಲ್ಯದ 10 ಪಾಲು ಗಳು.

ಆರಂಭದ ಖರ್ಚು:—ಇದು ಕಮಿಶನು ಮತ್ತು ವಟ್ಟಗಳ ಹೊರತಾಗಿ ಸುಮಾರು ರೂ. 5000ಕ್ಕೆ ಮಿಕ್ಕ ದೆಂದು ಅಂದಾಜಾಗಿದ್ದು ಕಂಪೆನಿಯಿಂದ ತೆರಲ್ಪಡುವುದು. ಪ್ರಮೋಶನಿನ ಐವಜಾಗಿ ರೂ. 5000ಗಳನ್ನು ತೆರಲು ಕಂಪೆ ನಿಯ ಆರ್ಟಿಕಲ್ಸ್ ಆಫ್ ಎಸೋಸಿಯೇಶನಿನಲ್ಲಿ ಅಧಿಕಾರ ನಿದ್ದರೂ ಅಂಥ ಹಣವನ್ನು ಕೊಟ್ಟದ್ದೂ ಇಲ್ಲ, ಮುಂದೆ ಕೊಡುವುದೂ ಇಲ್ಲ.

ವಟ್ಟ ಮತ್ತೂ ಕಮಿಶನ್:—ಈ ರೂಪದಲ್ಲಿ ಕಂಪೆನಿ ಆರಂಭವಾದ ಲಾಗಾಯಿತು ಏನೂ ತೆತ್ತದ್ದಿಲ್ಲ. ಡೈರೆಕ್ಟರರು 1913ನೇ ಇಸವಿ ಇಂಡಿಯನ್ ಕಂಪೆನಿಗಳ ಆಕ್ಟಿನ ಸೆಕ್ಶನ್ 105ರ ಮೇರೆಗೆ, ಕಂಪೆನಿಗೆ ಕೊಡಲಾದ ಅಧಿಕಾರಗಳಿಗೆ ಅನುಗುಣವಾಗಿ ಅವರು ಅಧಿಕಾರವನ್ನು ಜಾರಿಗೆ ತರಬಹುದಾಗಿದ್ದು ಈ ವ್ಯವಹಾರದಲ್ಲಿ ಅಂಥ ಕಮಿಶನು, ಚೆಂದಾ ಅರ್ಪಿಸಲು ಒಪ್ಪಿಸಿದ ಪ್ರತಿ ಒಂದು ಪಾಲು ಅಥವಾ ಹೆಚ್ಚು ಪಾಲುಗಳ ಮೇಲೆ ಸೇಕಡ 5 ಕ್ಕಿಂತ ಹೆಚ್ಚಾಗಿರತಕ್ಕದ್ದಲ್ಲ.

ಅರ್ಜಿ:—ಪ್ರಾಸ್‌ಪೆಕ್ಟಸಿನೊಡನೆ ಇರತಕ್ಕ ಫಾರ್ಮು ಅಥವಾ ಫಾರ್ಮುಗಳಲ್ಲಿ ಪಾಲುಗಳಿಗಾಗಿ ಅರ್ಜಿಯನ್ನು ಭರಾಯಿಸಿ ಮ್ಯಾನೇಜಿಂಗ್ ಏಜೆಂಟರುಗಳಿಗೆ ಅಥವಾ ಕಂಪೆನಿಯ ರಿಜಿಸ್ಟರ್ಡ್ ಆಫೀಸಿಗೆ ಅಥವಾ ಕಂಪೆನಿಯ ಬ್ಯಾಂಕರರುಗಳಿಗೆ, ಆ ಅರ್ಜಿಯ ಸಂಬಂಧ ಸಲ್ಲ ಬೇಕಾದ ಹಣಕ್ಕೆ ಕಂಪೆನಿಯ ಹೆಸರಲ್ಲಿ ಬರೆದ ಚೆಕ್ಕಿನ ಸಹಿತ ಕಳುಹಿಸತಕ್ಕದ್ದು. ಅರ್ಜಿಯ ಫಾರ್ಮು ಗಳು ಮತ್ತೂ ಪ್ರಾಸ್‌ಪೆಕ್ಟಸನ್ನು ಮ್ಯಾನೇಜಿಂಗ್ ಏಜಂಟರುಗಳಿಂದ ಅಥವಾ ಕಂಪೆನಿಯ ಬ್ಯಾಂಕರು ಗಳಿಂದ ಪಡೆಯಬಹುದು.

ಎಲಾಟ್‌ಮೆಂಟ್ ಮಾಡದಿರುವಾಗ, ಠೇವಣಾತಿ ಹಣವನ್ನು ಸಂಪೂರ್ಣವಾಗಿ ಹಿಂದಿರುಗಿಸಲಾಗುವುದು ಮತ್ತು ಅಪೇಕ್ಷಿಸಿದ ಪಾಲುಗಳಿಗಿಂತ ಎಲಾಟ್ ಮಾಡಿದ ಪಾಲುಗಳ ಸಂಖ್ಯೆ ಕಡಿಮೆಯಾದಾಗ, ಅರ್ಜಿಯೊಡನೆ ತೆತ್ತ ಹಣದಲ್ಲಿ ಉಳಿಯುವ ಹಣವನ್ನು ಎಲಾಟಾದ ಮೇ ಲಿನ ಹಣದ ಪಾವತಿ ಬಗ್ಗೆ ಉಪಯೋಗಿಸಿಕೊಂಡು, ಮತ್ತೇ ನಾದರೂ ಶಿಲ್ಕು ಉಳಿದಲ್ಲಿ ಅದನ್ನು ಅರ್ಜಿದಾರನಿಗೆ ಹಿಂದಿ ರುಗಿಸಲಾಗುವುದು.

ಇನ್‌ಸ್ಪೆಕ್ಶನ್:—ಪ್ರಾಸ್‌ಪೆಕ್ಟಸಿನಲ್ಲಿ ಪ್ರಸ್ತಾವಿಸಿ ದ ಕಂಪೆನಿಯ ಮೆಮೊರೇಂಡವ್ ಮತ್ತೂ ಆರ್ಟಿಕಲ್ಸ್ ಆಫ್ ಎಸೋಸಿಯೇಶನಿನ ಮತ್ತೂ ಕಂಟ್ರಾಕ್ಟುಗಳ ಪ್ರತಿ ಗಳನ್ನು, ಪಾಲುಗಳ ಪಟ್ಟಿ ಅಂತ್ಯವಾಗುವ ದಿನದ ಮೊ ದಲು ಯಾವ ದಿನವಾದರೂ ಆಫೀಸಿನ ಸಮಯದಲ್ಲಿ ಮ್ಯಾನೇಜಿಂಗ್ ಏಜೆಂಟರುಗಳ ಕಾರ್ಯಾಲಯದಲ್ಲಿ ಪರಿ ಶೋಧನೆ ನಡೆಸಬಹುದು.

ತಾ. 14ನೇ ಜನವರಿ 1937.

1. ಟಿ. ಮಾನವೇದನ್.
2. ಕೆ. ಬಿ. ಶಂಕರ್ ರಾವ್.
3. ಎಂ. ಎಸ್. ಮಾಧವ ರಾವ್.
4. ಆರ್. ಎನ್. ಬಿಜೂರ್.
5. ಯು. ಬಿ. ಸೋಮೇಶ ರಾವ್.

ಈ ವ್ಯವಹಾರದಲ್ಲಿ, ರೂ. 25,000ಗಳನ್ನು ಚೆಂದಾ ಅರ್ಪಿಸಲು (Underwrite) ಸಿದ್ಧರಾಗಿರುವ ಮಹಾಶ ಯರ ಪ್ರಪೋಜಲುಗಳನ್ನು ಸ್ವೀಕರಿಸಿ, ಅವುಗಳನ್ನು ಅನು ಕೂಲಾನುಸಾರವಾಗಿ ಸವಾಲೋಚಿಸಲಾಗುವುದು. ಈ ಸಂಬಂಧದ ಪತ್ರವ್ಯವಹಾರವನ್ನು ನಡೆಸಬೇಕಾದ ವಿಳಾಸ ವಿದು:- ಮೆಸರ್ಸ್. ರಾಮಚಂದ್ರ ಎಂಡ್ ಕೊ., ರಾಧಾ ಬ್

ಮೋಸಹೋಗಬೇಡಿ!

ಶ್ರೀ ಅಂಬಾಳ್ ಮದರಾಸು ನಶ್ಯವು ಅನೇಕ ವರ್ಷಗಳಿಂದ ಅಸಮಾನವಾದ ಮತ್ತು ಶಾಶ್ವತವಾದ ಕೀರ್ತಿಯನ್ನು ಹೊಂದಿ ಜಗತ್ಪ್ರಸಿದ್ಧವಾಗಿರುವುದನ್ನು ನಿತು ಕೆಲವರು ಹಣಾಶೆಯುಳ್ಳವರಾಗಿ ಕಿರಿದು ಬಾಗೆಸೊಪ್ಪನ್ನು ತರಿಸಿ ಅವುಗಳಲ್ಲಿರುವ ಮಣ್ಣು, ತಂಬು, ಮುಸಿಗಳನ್ನು ತೆಗೆಯದೆ ಬೆರಕೆ ತುಪ್ಪವನ್ನು ಸೇರಿಸಿ ನಶ್ಯವನ್ನು ತಯಾರಿಸಿ ವ್ಯಾಪಾರಸ್ಥರಲ್ಲಿ ಹೋಗಿ ಕಡಿಮೆ ಜೆಲೆಗೆ ಸಾಲವಾಗಿ ಕೊಟ್ಟು ಬರುತ್ತಿರುವರು. ಕೆಲವು ವ್ಯಾಪಾರಸ್ಥರು ಸರಸವಾಗಿಯೂ ಸಾಲವಾಗಿಯೂ ಸಿಗುವುದರಿಂದ ಮೇಲ್ಕಂಡ ಹಲ್ಯಾ ನಶ್ಯವನ್ನು ತರಿಸಿ ಇದೇ ಹಸನಾದ ಮದರಾಸು ನಶ್ಯ ಹೆಂದು ಬೆಳರಿ ಮಾಡಿ ಬರುತ್ತಿರುವರು. ಸಹೋದರರೇ! ಮೋಸಹೋಗಬೇಡಿ. ಇಂಥಾ ಪ್ಲೋಲಿ ನಶ್ಯವನ್ನು ಉಪಯೋಗಿಸಿದರೆ ಮೇಲ್ಕಂಡ ನಶ್ಯದಲ್ಲಿರುವ ಮಣ್ಣು, ಮಸಿ ಮೊದಲಾದವುಗಳು ಮೂಗಿನ ಮೂಲಕ ಹೊಡುಳಿಗೆ ಹೋಗಿ ಮೆದುಳನ್ನು ಬಲೆಯೋಪಾದಿಯಲ್ಲಿ ಮುಚ್ಚಿಕೊಂಡು ಅಜ್ಞಾನವನ್ನುಂಟುಮಾಡುವುದಲ್ಲದೆ ಪಂಚೇಂದ್ರಿಯಗಳ ಶಕ್ತಿಯನ್ನು ಕುಂಠಿಸುವುದು. ಅದುದರಿಂದ ಅಪ್ಪರೇ, ಅನೇಕ ವರ್ಷಗಳಿಂದ ಅನೇಕ ಡಾಕ್ಟರು ಗಳಿಂದಲೂ, ಜಡ್ಜಿಗಳಿಂದಲೂ, ಇನ್ನೂ ಅನೇಕ ಶ್ರೀಮಂತರಿಂದಲೂ ಶ್ಲಾಘಿಸಲ್ಪಟ್ಟಿರುವ ಶ್ರೀ ಅಂಬಾಳ್ ಅಂಡ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ. ೩, ಮದರಾಸು, ಇವರ ಮದರಾಸು ನಶ್ಯ, ಸುಗಂಧ ನಶ್ಯ ಇವನ್ನೇ ಉಪಯೋಗಿಸಿ ಆನಂದಪಡಿರಿ. ಎಲ್ಲಾ ವ್ಯಾಪಾರಸ್ಥರಲ್ಲಿಯೂ ಸಿಗುವುದು.

ನ್ಯೂ ಮೊಡಲ್ ವಾಲ್ ಕ್ಲಾಕ್

3 ವರುಷಗಳ ಗ್ಯಾರಂಟಿ.

(ದಿವಸಕ್ಕೆ ಒಂದಾವರ್ತಿ ಬೀಗ ಕೊಡುವುದು.)

ಈ ಗಡಿಯಾರಗಳು ಹೊಸ ದಾಗಿ ತಯಾರು ಮಾಡಿ ತರಿಸಿದ್ದೇವೆ. ಸೀಮೆಯ ನಿಕ್ಕಲ್ ಲೋಹದ ಸ್ಯಾಂಡಿನಲ್ಲಿ ತಯಾರಿಸಿದ್ದೇವೆ. ಈ ಗಡಿಯಾರವು ಖರಾರು ಗಂಟೆಯನ್ನು ತೋರಿಸುವುದು. ಖಾತ್ರಿಯಾದ 3 ವರುಷಗಳ ಗ್ಯಾರಂಟಿ ಕೊಡುವೆವು. ಈ ಗಡಿಯಾರಗಳನ್ನು ಗುಡಿ, ಸ್ಕೂಲು, ರೀಡಿಂಗ್ ರೂಮ್ ಹಾಲುಗಳಲ್ಲಿ ಮುಂತಾದ ಜಾಗದಲ್ಲಿ ಗೋಡೆಗೆ ತಗಲಿಸಿದರೆ ಅಂದವಾಗಿರುವುದು. ಕ್ರಯ ಗಡಿಯಾರ 1ಕ್ಕೆ ರೂ. 3—0—0.

ಟಪ್ಪಾಲು ಖರ್ಚು ಪ್ರತ್ಯೇಕ.

ವಿ. ಎಸ್. ವಾಚ್ ಕಂಪೆನಿ,

೫, 25—12. ಇರುಳಪ್ಪನ ಬೀದಿ, ಮದ್ರಾಸು.

For your Diamonds enquire at Sowcar SRINIVAS RANGA PAI, Sowcar Mahal, Car Street, MANGALORE.

ನಿಮ್ಮ ಆದೃಷ್ಟವೆಲ್ಲವೂ
ನಿಮ್ಮ ಆರೋಗ್ಯದ ಮೇಲಿದೆ
ಪ್ರಪಂಚಪ್ರಸಿದ್ಧವಾದ ನಮ್ಮ

ಆತಂಕನಿಗ್ರಹ

ಮಾತ್ರೆಗಳನ್ನು ಉಪಯೋಗಿಸಿ
ನಿಮ್ಮ ಶರೀರವನ್ನು ಆರೋಗ್ಯ ಸ್ಥಿತಿಯಲ್ಲಿಡಿ. ಇದರ ಸೇವನೆಯಿಂದ ನೀವು ಆರೋಗ್ಯದೃಢ ಕಾಯರಾಗುವಿರಲ್ಲದೆ, ಬುದ್ಧಿ, ಚಟುವಟಿಕೆ ಹೆಚ್ಚುತ್ತದೆ. ಶಕ್ತಿವರ್ಧಕ ಔಷಧವೆಂದರೆ ಆತಂಕನಿಗ್ರಹ ಮಾತ್ರೆಗಳು. ಲಕ್ಷಾಂತರ ಜನರು ಉಪಯೋಗಿಸಿ ನೋಡಿದ್ದಾರೆ. ಇಂದೇ ಕೊಂಡು ಉಪಯೋಗಿಸಿ ನೋಡಿ. ೫೦ ಮಾತ್ರೆಗಳು ೪ ಡಬ್ಬಿಗೆ ಬೆಲೆ ೧ ರೂ. ಇತರ ವಿಚಾರಗಳಿಗೆ ಮುಫತ್ತಾಗಿ ಸಿಗುವ ನಮ್ಮ ಪುಸ್ತಕವನ್ನು ಓದಿ.

ಆತಂಕನಿಗ್ರಹ ಫಾರ್ಮಸಿ,

೬೪, ಚಿಕ್ಕಪೇಟೆ ಜಾಕ, ಬೆಂಗಳೂರು ಸಿಟಿ.

ಏಜಂಟರು—

ಪೈಲ್ಸ್ ಎಂಡ್ ಸನ್ಸ್, ಮಂಗಳೂರು.

ಪತ್ರವ್ಯವಹಾರ

ಸೂಚನೆ:—[ಬಾತಮಿದಾರರ ಅಭಿಪ್ರಾಯಗಳು ಕಂಠೀರವದ ಅಭಿಪ್ರಾಯಗಳಲ್ಲ. ಎಲ್ಲ ಪತ್ರಗಳನ್ನು ಬರೆಯುವವರು ತಮ್ಮ ಹೆಸರು ವಿಳಾಸ ಕೊಡಬೇಕಾಗಿದೆ— ಸಂ.]

ಪ್ರಿಯ ಸಂಪಾದಕರೇ,

ಇದೇ ಜನವರಿ ತಿಂಗಳ ತಾ. ೫ರಲ್ಲು ಆಚ್ಚಾದ ನಿಮ್ಮ ೭ನೆಯ ಸಂಚಿಕೆಯಲ್ಲಿ ಮರೋಳಿ ಕಥೊಲಿಕ ಶಾಲೆಯ ವಿಷಯವಾಗಿ ಲೇಖನವೊಂದು ಪ್ರಕಟಿಸಲ್ಪಟ್ಟಿರುವುದು. ಈ ಶಾಲೆಯ ಕುರಿತು ನಾವು ತಿಳಿದಿರುವ ಅಲ್ಪ ಸ್ವಲ್ಪ ವಿಷಯಕ್ಕೆ ನಿಮ್ಮ ಪತ್ರಿಕೆಯಲ್ಲೊಂದಿಷ್ಟು ಅವಕಾಶವನ್ನೀಯುವಿರೆಂದು ನಂಬುತ್ತೇವೆ.

ಕಂಕನಾಡಿ ಮರೋಳಿ ಗ್ರಾಮಗಳಲ್ಲಿ ಮಂಜೂರಾತಿ ಹೊಂದಿದ ಮೂರು ಶಾಲೆಗಳಿರುವುದೇನೋ ನಿಜ. ಅವುಗಳಲ್ಲಿ ವಿದ್ಯಾಶಿಕ್ಷಣವನ್ನು ಪಡೆಯುವ ಮಕ್ಕಳ ಸಂಖ್ಯೆಯು ಸುಮಾರು ಮುನ್ನೂರನ್ನು ಮೀರಿಲ್ಲವೆಂಬುದೂ ನಿಜ. ಆದರೆ ೧೯೩೧ನೆಯ ಖಾನೇಸುಮಾರಿ ಪ್ರಕಾರ ಈ ಗ್ರಾಮಗಳ ಜನಸಂಖ್ಯೆಯು ೪೧೬೮ ಆಗಿರುವುದು. ಅದರಂತೆ ಶಾಲೆಗೆ ಹೋಗತಕ್ಕ ಮಕ್ಕಳ ಸಂಖ್ಯೆಯು ೫೮೪ ಎಂದಾಗಲು, ಮೇಲೆ ಹೇಳಿದ ಎರಡು ಗ್ರಾಮಗಳ ಮಕ್ಕಳೆಲ್ಲರಿಗೂ ಈ ಮೂರು ಶಾಲೆಗಳು ಶಿಕ್ಷಣವನ್ನು ಕೊಡುವುದಿಲ್ಲವೆಂಬುದು ಖಚಿತವಾಗುತ್ತದೆ.

ಕ್ರೈಸ್ತಮತಸ್ಥರು ತಮ್ಮ ಮಕ್ಕಳನ್ನು ಕ್ರೈಸ್ತ ಶಾಲೆಗಳಿಗೆನೇ ಕಳುಹಿಸಿಕೊಡಬೇಕೆಂಬ ಮತಾಜ್ಞೆಯಿರುವುದೆಂದು ಎಲ್ಲರಿಗೂ ತಿಳಿದ ಸಂಗತಿಯಾಗಿರುವುದು. ಅದುದರಿಂದಲೇ ಸರಕಾರದವರು ವಿದ್ಯಾಭಿವೃದ್ಧಿಯ ಕುರಿತಾಗಿ ತಮ್ಮ ಅಭಿಪ್ರಾಯವನ್ನೂ ಕಟ್ಟಳೆಯನ್ನೂ (G. O. No. Mis. 104 (Edn.) dated 15—1—1929) ಪ್ರಕಟಿಸಿರುವರು. ಆ ಸರಕಾರಿ ಕಟ್ಟಳೆಯ ಸಾರಾಂಶವು ಎಲ್ಲರಿಗೂ ತಿಳಿದೇ ಇರುವುದು. 'ಎಲ್ಲಿ ಬೇರೆ ಶಾಲೆಗಳಿದ್ದರೂ ಕ್ರೈಸ್ತ ಮಕ್ಕಳಿಗೆ ಪ್ರತ್ಯೇಕ ಶಾಲೆಗೆ ಅನುಕೂಲವಿರುವುದೋ ಅಲ್ಲಿ ಕ್ರೈಸ್ತ ಶಾಲೆಗೆ ಮಂಜೂರಾತಿಯನ್ನೂ ಗ್ರಾಂಟನ್ನೂ ಕೊಡಬೇಕು,' ಎಂದು ಈ ಕಟ್ಟಳೆಯು ಸಾರುತ್ತಿರುವುದು.

ಕಂಕನಾಡಿ ಮರೋಳಿ ಗ್ರಾಮಗಳೆಲ್ಲಿ (೫೬೦+೭೫೮) ಲಜರ ಕಥೋಲಿಕರು ಇರುವರು. ಅಂದರೆ ಶಾಲೆಗೆ ಹೋಗತಕ್ಕ ಮಕ್ಕಳ ಸಂಖ್ಯೆಯು ೧೩೦ ಎಂದ ಮೇಲೆ ಕಥೋಲಿಕ ಶಾಲೆಯ ಆಗತ್ಯತೆಯನ್ನು ನಾವು ಮತ್ತೆ ಬೇರೆ ಹೇಳಬೇಕಾಗಿಲ್ಲ. ಹೊಸತಾಗಿ ಸ್ಥಾಪಿಸಿದ ಮರೋಳಿ ಶಾಲೆಯಲ್ಲಾದರೋ ಮೂರು ತರಗತಿಗಳಿದ್ದು ಮಕ್ಕಳ ಹಾಜರಿಯೂ ೭೦ಕ್ಕೆ ಮಿಕ್ಕಿರುವುದು. ತರಬೇತು ಹೊಂದಿದ ಉಪಾಧ್ಯಾಯಿನಿಯರೂ ಮೂವರಿರುವರು. ಕಟ್ಟಡವೂ ತೃಪ್ತಿಕರವಾಗಿದೆ. ಇಂಥಾ ಆಗತ್ಯತೆಯೂ ಅನುಕೂಲತೆಯೂ ಕೂಡಿಕೊಂಡಲ್ಲಿ ಶಾಲೆಗೆ ಮಂಜೂರಾತಿಯನ್ನು ಕೊಡಲು ಆತಂಕವೇನೆಂದು ಕಾಣಲಾರದು.

ಕ್ರೈಸ್ತ ಶಾಲೆಗೆ ಮಂಜೂರಾತಿಯನ್ನು ಕೊಟ್ಟರೆಂಥಾದರೆ ಕಂಕನಾಡಿ ಹಿಂದೂ ಶಾಲೆಗೆ ಹಾನಿ ತಟ್ಟಬಹುದೆಂದು ಒಂದು ಭಯ. ಈ ಶಾಲೆ ಸ್ಥಾಪನೆಯಾಗಿ ೪೦ ವರ್ಷಗಳಾಗಿವೆ. ಅದರೆ ಈ ಶಾಲೆಯಿಂದ ಕೇವಲ ೧೯ ಮಂದಿ ಹೊಸ ಶಾಲೆಗೆ ಸೇರಿರುವರು. ಕಂಕನಾಡಿ ಮರೋಳಿ ಗ್ರಾಮಗಳಲ್ಲಿ ೩೩೧೦ ಹಿಂದೂ ಮತಸ್ಥರಿದ್ದು ಶಾಲೆಗೆ ಹೋಗೆತಕ್ಕ ಮಕ್ಕಳ ಸಂಖ್ಯೆಯು ೪೬೩ ಆಗಿರುವುದು. ಆದರೆ ಪ್ರಸ್ತುತ ೧೦೦ ಹಿಂದೂ ಮಕ್ಕಳು ಮಾತ್ರ ವಿದ್ಯಾಶಿಕ್ಷಣವನ್ನು ಪಡೆಯುತ್ತಿರುವುದು. ಇನ್ನುಳಿದ ಹಿಂದೂ ಮಕ್ಕಳನ್ನು ಶಾಲೆಗೆ ಸೇರಿಸಿ ಅವರಿಗೆ ಯೋಗ್ಯ ಶಿಕ್ಷಣವನ್ನು ಕೊಟ್ಟು ಶಾಲೆಯನ್ನೂ ನೆರೆಕರೆಯ ಹಿಂದೂ ಮಕ್ಕಳನ್ನೂ ಅಭಿವೃದ್ಧಿಗೊಳಿಸಬಾರದೆ?

ಮಹಮ್ಮದೀಯರು ತಮ್ಮ ಮಕ್ಕಳನ್ನು ಮಹಮ್ಮದೀ ಶಾಲೆಗೆನೇ ಕಳುಹಿಸುತ್ತಿರುವರು. ಸಮೀಪದಲ್ಲಿ ಸಾರ್ವಜನಿಕ ಶಾಲೆಗಳಿದ್ದರೂ ಯೆಡ್ಯುಕೇಶನಲ್ ಕೌನ್ಸಿಲಿನವರು ಪ್ರತ್ಯೇಕ ಮಹಮ್ಮದೀ ಶಾಲೆಗಳಿಗೆ ಮಂಜೂರಾತಿಯನ್ನೂ ಕೊಟ್ಟಿರುವರು. ಅದೇ ಪ್ರಕಾರ ಲೇಬರ್ ಶಾಲೆಗಳೂ ಮಂಜೂರಾತಿಯನ್ನು ಹೊಂದಿರುವುದು. ಹಾಗೆಯೇ ಕ್ರೈಸ್ತಮತಸ್ಥರೂ ತಮ್ಮ ಮಕ್ಕಳಿಗೋಸ್ಕರ ಶಾಲೆಗಳನ್ನು ಸ್ಥಾಪಿಸಿ ನಿರೀಕ್ಷಕರತೆಯನ್ನು ಹೋಗಲಾಡಿಸಲು ದಹಿಯುತ್ತಿರುವಾಗ ಆದೊಂದು ಶ್ಲಾಘನೆಯ ಸಂಗತಿಯೆಂದು ತಿಳಿದು ಅಂಥಾ ಕಾರ್ಯಕ್ಕೆ ಪ್ರೋತ್ಸಾಹವನ್ನೀಯುವುದು ನಮ್ಮೆಲ್ಲರ ಕರ್ತವ್ಯವಲ್ಲವೇ?

ಅದರಂತೆಯೇ ನಾವು ಹೇಳಿರುವ ಎಲ್ಲಾ ವಿಷಯಗಳನ್ನು ಪರ್ಯಾಲೋಚಿಸಿ ಮತಭೇದವನ್ನು ಗಣನೆಗೆ ತಾರದೆ ವಿದ್ಯಾಭಿವೃದ್ಧಿಯ ಕಡೆಗೆ ದೃಷ್ಟಿಯನ್ನಿಟ್ಟು ಈ ಹೊಸತಾಗಿ ಸ್ಥಾಪನೆ ಹೊಂದಿದ ಮರೋಳಿ ಶಾಲೆಗೆ ಜಿಲ್ಲಾ ಯೆಡ್ಯುಕೇಶನಲ್ ಕೌನ್ಸಿಲಿನವರು ಮಂಜೂರಾತಿಯನ್ನು ಕೊಡುವರೆಂದು ನಮ್ಮ ಪೂರ್ಣ ನಂಬಿಕೆಯಾಗಿರುವುದು.

ಇನ್ನೊಬ್ಬ.

ವಿದ್ಯಾಪ್ರೇಮಿಗಳೇ,

ಈ ಮೊದಲೇ ಪ್ರಕಟಿಸಿದಂತೆ, ಇಲ್ಲಿಯ ವಿದ್ಯಾದಾಯಿನೀ ಶಾಲಾ ಸಹಾಯಾರ್ಥವಾಗಿ ಏರ್ಪಡಿಸಿದ ಈ ಸೋಡ್ತಿಯು ಇದೇ ಕಳೆದ ತಾ. ೧೭—೧—೩೭ನೇ ಆದಿತ್ಯವಾರ (ನಿಶ್ಚಿತ ದಿನವೇ) ಅಪರಾಹ್ನ ೪ ಘಂಟೆ ೨ಕ್ಕೆ ಸದರಿ ಶಾಲಾ ಮಂದಿರದಲ್ಲಿ ಶ್ರೀ.ಯುತರುಗಳಾದ (೧) ಡಾ. ಕೆ. ವಿಠಲ ಶೆಟ್ಟಿ, ಚೆಯರ್‌ಮೇನ್, ಮಂಗಳೂರು ಮುನಿಸಿಪಾಲಿಟಿ (೨) ಬಿ. ವ್ಯಾಸರಾಯಾಚಾರ್, ಆಡ್ವಕೇಟ್, ಮಂಗಳೂರು (೩) ಬಿ. ವೆಂಕಟ್ರಾಯ ಬಾಳಿಗ, ಆಡ್ವಕೇಟ್, ಮಂಗಳೂರು (೪) ಟಿ. ಬಿ. ಜೋಗಿ, ಮೆನೇಜರ್, ಮಂಗಳೂರು ಆಟೋ ಮೊಬೈಲ್ಸ್ (೫) ಎಮ್. ಬಾಬುರಾಯ ಪ್ರಭು, ಬಿ. ಎ., ಸಂಪಾದಕ, 'ಶ್ರೀವೇಣಿ' ಮಂಗಳೂರು (೬) ಎಚ್. ಲಕ್ಷ್ಮಣ ರಾವ್, DII ಹೆಲ್ತ್ ಇನ್ಸ್‌ಪೆಕ್ಟರ್, ಪುತ್ತೂರು (೭) ಬಡಕಬೈಲು ಪರಮೇಶ್ವರಯ್ಯ, ಪೊಳಲಿ, ಈ ಮಹನೀಯರುಗಳನ್ನೊಳಗೊಂಡ ಕಮಿಟಿಯವರ ನೇತೃತ್ವದಲ್ಲಿ ನೆರೆದ ಸಭಿಕರ ಮುಂದೆ ಯಶಸ್ವಿಯಾಗಿ ತೆಗೆಯಲಾಯಿತು. ಟಿಕೇಟು ಮಾರಾಟವಾಗಿ ಜಮೆಯಾಡ ಹಣದಲ್ಲಿ ಸೇಕಡ ನಾಲ್ವತ್ತೈದಕ್ಕೆ ಮಿಕ್ಕಿ ಅಂದರೆ ರೂ. ೪೭೫೦ನ್ನು ಟಿಕೇಟಿನಲ್ಲಿ ಸೂಚಿಸಿದ ಮೇರೆಗೆ ಇನಾಮುಗಳಾಗಿ ಹಂಚಲಾಗಿದೆ. ಅವುಗಳಲ್ಲಿ, ೧ನೇ ಇನಾಮು ರೂ. ೨,೦೦೦ (ರಾಮಸ್ವಾಮಿ, ಕೋಣೆ, ತಿನ್ನವೆಲ್ಲಿ), ೨ನೇ ಇನಾಮು ರೂ. ೫೦೦ (ಮಹಮ್ಮದ್ ಹಶೀಮು, ಕರಾಚಿ), ೩ನೇ ಇನಾಮು ರೂ. ೧೨೫ (ಖುಧಾರ), ೪ನೇ ಇನಾಮು ರೂ. ೧೨೫ (ಬೊಂಬ್ಬಾಯಿ), ೫ನೇ ಇನಾಮು ರೂ. ೧೨೫ (ಮೂಡಬಿದ್ರಿ) ಈ ರೀತಿಯಾಗಿ ಸಿಗಲಾಗಿದೆ. ಉಳಿದ ಬಹುಮಾನಗಳ ವಿವರವು ಮುಪ್ರಣವಾಗುವ ಪಟ್ಟಿಯಲ್ಲಿ ಕೊಡಲಾಗುವುದು. ಈ ವಿದ್ಯಾಸಂಸ್ಥೆಯ ಮೇಲಿನ ವಾತ್ಸಲ್ಯದಿಂದ ಈ ಉದ್ಯಮವು ಜಯಶೀಲವಾಗುವಂತೆ ಶ್ರಮವಹಿಸಿ ನಮ್ಮನ್ನು ಪ್ರೋತ್ಸಾಹಿಸಿದ ವಿದ್ಯಾಭಿಮಾನಿಗಳಾದ ಊರ ಪರವೂರ ಮಹನೀಯರಿಗೂ, ಹಣಸಂಗ್ರಹದಲ್ಲಿ ಹೆಚ್ಚಿನ ಪ್ರಯತ್ನ ತೆಗೆದುಕೊಂಡ ಏಜೆಂಟರುಗಳಿಗೂ, ಇತರ ವಿಧಗಳಿಂದ ಸಹಾಯ ಮಾಡಿ ಈ ಕಾರ್ಯದ ಯಶಸ್ಸಿಗೆ ಸಹಭಾಗಿಗಳಾದ ಇ. ವಿ. ಶಾಲಾ ಹಳೆಯ ಮತ್ತು ಈಗಿನ ವಿದ್ಯಾರ್ಥಿವರ್ಗಕ್ಕೂ ಶಾಲಾಧ್ಯಾಪಕರಿಗೂ, ಸೋಡ್ತಿಯನ್ನು ಸುಸೂತ್ರವಾಗಿ ನೆರವೇರಿಸಿದ ಮೇಲ್ಕಾಣಿಸಿದ ಸನ್ಮಾನ್ಯ ಕಮಿಟಿಯವರಿಗೂ, ಶಾಲಾ ಸೋಡ್ತಿ ಕಮಿಟಿಯು ಚಿರಋಣಿಯಾಗಿದೆ. ಅಲ್ಲದೆ, ಈ ಸುರತಕಲ್ಲು ಹೆಚ್ಚಿನ ಸಿಬಂದಿ ಇಲ್ಲದ ಬ್ರಾಂಚ್ ಪೋಸ್ಟ್ ಆಫೀಸ್ ಆಗಿರುವದರಿಂದ ನಮ್ಮಾ ಸೋಡ್ತಿಯ ದೆಸೆಯಿಂದಾದ ಅಧಿಕ ಅಡಚಣೆಯನ್ನೂ ದೈಹಿಕ ಶ್ರಮವನ್ನೂ ಗಮನಿಸದೆ, ನಮಗೆ ಬೇಕಾಗುವ ರೀತಿಯಲ್ಲಿ ಅನುಕೂಲತೆಗಳನ್ನೊದಗಿಸಿ ಕೊಟ್ಟು ನಮ್ಮೊಡನೆ ಸಹಕರಿಸಿದ ಇಲ್ಲಿಯ ಬ್ರಾಂಚ್ ಪೋಸ್ಟ್ ಮಾಸ್ಟರ್ ಶ್ರೀ. ಯಂ. ರಾಮಕೃಷ್ಣರವರಿಗೂ ಟಪ್ಪಾಲು ಇಲಾಖಾ ಮೇಲಾಫೀಸರರಿಗೂ ಈ ಕಮಿಟಿಯು ತನ್ನ ಕೃತಜ್ಞತೆಯನ್ನು ಸೂಚಿಸುತ್ತದೆ ಎಂದು ಕೂಡ ತಿಳಿಸಲು ಅತ್ಯಂತ ಸಂತೋಷಿಸುತ್ತೇನೆ.

ಸುರತ್ಕಲ್,
೧೪—೧—೧೯೩೭. } ಎಚ್. ದಾಮೋದರ ರಾವ್,
ಮೆನೇಜರ್,
ಗ್ರೇಂಡ್ ವಿದ್ಯಾದಾಯಿನೀ ಸೋಡ್ತಿ,
ಪೆ. ಕನ್ನಡ.

(AUTOMATIC ALARM PISTOL)

ಬಹಳ ಕಡಿಮೆಯಾದ ಕ್ರಯ.

ಆಟೋಮಾಟಿಕ್ ಅಲಾರಂ ಪಿಸ್ಟಲ್

(ಬಂದೂಕು)



ಇದು ನೋಡುವುದಕ್ಕೆ ಆಕಾರದಲ್ಲಿಯೂ ಮಜಬೂತದಲ್ಲಿಯೂ ಅಸಲು ಪಿಸ್ಟಲ್‌ದಂತೆ ಇರುವುದು. ಇದರಿಂದ 10 ಸೆಕುಂಡುಗಳಲ್ಲಿ 10 (ಷಾಟ್ಸ್‌ಗಳು) ಗುಂಡುಗಳು ಹಾರಿಸಬಹುದು. ಗುಂಡು ಹಾರುವಾಗ ಅತಿ ಭಯಂಕರವಾದ ಶಬ್ದವನ್ನು ಕೊಡುವುದು. ನಾವು ಆಡವಿಯಲ್ಲಿ ಪ್ರಯಾಣ ಮಾಡುವಾಗಲೂ ವಾಚುಮೇನ್‌ಗಳು ಪಾರಾ ಕೊಡುವಾಗಲೂ ಅವರ ಕೈಯಲ್ಲಿ ಇದ್ದರೆ ತಮ್ಮ ಪ್ರಾಣವನ್ನು ಕಾಪಾಡಿಕೊಳ್ಳುವದಕ್ಕೆ ಸಹಾಯವಾಗಿರುವದು. ಇದನ್ನು ಸಿನಿಮಾ ಆಕ್ಟರ್ಸ್‌ಗಳು ಡ್ರಾಮಾ ಆಕ್ಟರ್ಸ್‌ಗಳು ಸಹ ಉಪಯೋಗಿಸುವದು ನೋಡಿರಬಹುದು. ಇದನ್ನು ಕಳುಹಿಸುವಾಗ ಉಪಯೋಗಿಸುವ ಕ್ರಮದ ಕಾಗದ ಸೇರಿಸಿ ಕಳುಹಿಸುವೆವು. ಇದರ ತೋಟೆಗಳು ಸೇರಿ 3-8-0. ಟಪಾಲು ಖರ್ಚು ಪ್ರತ್ಯೇಕ. ಹೆಚ್ಚಾಗಿ ತೋಟೆಗಳು ಬೇಕಾದರೆ 100ಕ್ಕೆ 2—0—0. ನಿಕ್ಕಲ್ ಪ್ಲೇಟ್ ಮಾಡಿದ್ದು 1—0—0 ಎಕ್ಸಟ್ರಾ.

ಇದಲ್ಲದೆ ನಮ್ಮಲ್ಲಿ ಬೇಕಾದ ಅಮೆರಿಕನ್ ಹೆರ್ (Hair Guns) ಗನ್ನುಗಳು ಇವೆ.

ಒಂದು ಪಿಸ್ಟಲ್ ಆರ್ಡರ್ ಮಾಡುವವರಿಗೆ ಚಿತ್ರದಲ್ಲಿ ಕಂಡ ಎರಡು ಬ್ಯಾಟರಿ ಹಾಕಿದ ಟಾರ್ಚ್ ಲೈಟು ಒಂದು ಇನಾಂ ಸೇರಿಸಿ ಕಳುಹಿಸುವೆವು.

ಟಿ. ಎನ್. ರಾಜನ್ ಅಂಡು ಕಂಪೆನಿ,
ಸಾವುಕಾರ್‌ಪೇಟೆ, ಮದ್ರಾಸು.

3, 22-1.

ಸುಸಂಧಿ! ಕಳೆದುಕೊಳ್ಳಬೇಡಿರಿ!

ಶ್ರೀ ಸರಸ್ವತೀ ಭಂಡಾರ.

ಕೆಳಗೆ ಕಂಡ ಪುಸ್ತಕಗಳ ಪೈಕಿ 3 ಪುಸ್ತಕಗಳನ್ನು ಕೊಂಡುಕೊಳ್ಳತಕ್ಕವರಿಗೆ 'ಸೌಭಾಗ್ಯ ಲಲಿತೆ' ಎಂಬ ರೂ. 0—8—0 ಬೆಲೆಯುಳ್ಳ (ಸ್ವಾರಸ್ಯವಾದ ಕಥೆ) ಪುಸ್ತಕವನ್ನು (ಪುಕ್ಕಟೆ) ಕಳುಹಿಸುತ್ತೇವೆ.

ಕಾದಂಬರಿಗಳು.

ಧರ್ಮಸಾಮ್ರಾಜ್ಯ ರೂ. 1-4-0; ಯುಗಳಾಂಗುರಿಯ ರೂ. 0-6-0; ವಿಮಲಾದೇವಿ ರೂ. 1-12-0; ವಿವೇಕೋದಯ ರೂ. 0-12-0; ಸಂಸಾರ ಚಿತ್ರ ರೂ. 0-12-0; ಜಗನ್ಮೋಹಿನಿ ರೂ. 1—0—0; ಮಿಂಚು ರೂ. 0-12-0; ಅಂತರಂಗ ರೂ. 1-0-0; ಬ್ಯಾ. ರಾಮಚಂದ್ರನ್ ರೂ. 0-6-0; ತುಲಸೀದಾಸ ರಾಮಾಯಣ ರೂ. 2-8-0. (ನಮ್ಮ ಕ್ಯಾಟಲಾಗು ಉಚಿತ.)

ನಮ್ಮ ವಿಳಾಸ:—ಶ್ರೀ ಸರಸ್ವತೀ ಭಂಡಾರ,
ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು,
ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಇನ್ನು ಕೆಲವು ನಾಟಕಗಳು ಮಾತ್ರ

॥ ಶ್ರೀ ರಾಜರಾಜೇಶ್ವರೀ ಪ್ರಸೀದ ॥

ಸಾಂಯಿತ್ಯ ಸಾಮ್ರಾಜ್ಯನಾಟಕ ಮಂಡಲಿ, ಮೈಸೂರು

ಮಂಗಳೂರು ಮೈದಾನದಲ್ಲಿ ನೂತನವಾಗಿ ಕಟ್ಟಿರುವ
ರಾಜರಾಜೇಶ್ವರೀ ಥಿಯೇಟರಿನಲ್ಲಿ
ತಾ. 23-1-37ನೇ ಶನಿವಾರ ರಾತ್ರಿ 9-30 ಘಂಟೆಗೆ

"ವಿರಾಟಪರ್ವ"

ತಾ. 24-1-37ನೇ ಭಾನುವಾರ ಸಾಯಂಕಾಲ 6 ಘಂಟೆಗೆ

"ಭೂ-ಕೈಲಾಸ"

ಈ ನಾಟಕಕ್ಕೆ ಸ್ಥಳ-ವರಸ್ಥಳದ
ಶಾಲಾ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಎಲ್ಲಾ ತರಗತಿಗಳಲ್ಲಿಯೂ ಅರ್ಧ ದರ ಏರ್ಪಡಿಸಿರುತ್ತೆ.

ಮಹಾಜನರು ಪ್ರೋತ್ಸಾಹಿಸಬೇಕಾಗಿ ಸವಿನಯ ಪ್ರಾರ್ಥನೆ.

ಯಂ. ವಿ. ಸುಬ್ಬಯ್ಯ ನಾಯಡು,
ಆರ್. ನಾಗೇಂದ್ರ ರಾವ್, } ಪ್ರೊಪ್ರೈಟರ್ಸ್.

…ನ್ನು ಕಡಿಮೆ
…ರ್ಥಿಕ ದುಃಸ್ಥಿತಿ
…ಳ ಈಗ ಭಾರತೀ
… ರೂಪಾಯಿಗೆ
೧ ಶಿ. ೬ …ನ್ಸು ಬೆ
… ಪೆನ್ಸು
… ನಿವಾರಣೆ
…ರ್ಥಿಕ ಶಾಸ್ತ್ರ
ನಾವು ಕೇಳಿರುತ್ತೇವೆ.
…ಳೆಲ್ಲಾ ನಿಷ್ಪ್ರಯೋಜನ
ಬೆಲೆಯ ಏರಿಳಿತದಿಂದ
…ರ್ಥಿಕ ಸ್ಥಿತಿಯು ಕೇಳು
… ಆರ್ಥಿಕ ಶಾಸ್ತ್ರಜ್ಞರು
…ಈ ಶಾಸ್ತ್ರಜ್ಞರ ವಿವಾದಗಳ
…ರು ಹೇಳುವ ನಿಯಮ, ಸಿದ್ಧಾಂ
… ವಗೈರೆಗಳನ್ನು ಕೇಳಿ, ಕೇಳಿ,
ಎಂಬ ವಿಚಾರಗಳು ನಮ್ಮಲ್ಲಿ
…ಲ್ಲಾಗಿ 'ರೂಪಾಯಿಯ ಬೆಲೆ'
…ಲೆ ತಿರುಗಲಿಕ್ಕೆ

…ಯಿಯ ಬೆಲೆಯ ವಿಷಯ
…ರ್ಥಿಕ ಶಾಸ್ತ್ರಗಳನ್ನು ಓದಿ ತಿಳಿಕೊಳ್ಳ
…ರೂ ಆ ಶಾಸ್ತ್ರಗಳನ್ನೆಲ್ಲಾ ಈಗ
…ಲಿಕ್ಕೆ ಸಾಧ್ಯವಿಲ್ಲದವರು ನಮ್ಮಲ್ಲಿ
…ಕುದು. ವಾರಪತ್ರಿಕೆ, ದೈನಿಕ
… ಹೇಳುವ ಈ ವಿಷಯದ ಚರ್ಚೆ
…ಶವನ್ನು ತಿಳಿಕೊಳ್ಳಲಿಕ್ಕೆ ಅಷ್ಟೊಂ
…ಗತ್ಯವಿರಲಾರದು. ನಾವು
…ವ ಅಲ್ಪಜ್ಞಾನದ ಸಹಾಯದಿಂದಲೇ
…ರ್ಥಿಕ ಸಮರ್ಥರ ಮಾತುಗಳ ಅರ್ಥ
…ಲಿಕೆ ಮಾಡಿಕೊಳ್ಳಬಾರದು, ನೋ

…ಾಯಿಯ ಬೆಲೆಯೆಂದರೇನು?
…ೆಂದರೇನು?

…ಾಯಿಯ ದೊಡ್ಡ ಗಂಟೊಂದನ್ನು
ಕೊಟ್ಟು ನಿರ್ಜನದ್ವೀಪವೊಂದರಲ್ಲಿ
…ಟ್ಟುಬಿಟ್ಟರೆ ಆ ರೂಪಾಯಿಗಳಿಂದ
…ಏನೂ ಪ್ರಯೋಜನವೂ ಸಿಕ್ಕದು.
ರೂಪಾಯಿಗಳಿಗೆ ಬೆಲೆಯೇನೂ
ಹೇಳಬೇಕು. ಮನುಷ್ಯರು
… ವ್ಯವಹಾರ, ವಹಿವಾಟುಗಳ
…ರ್ಮತದಿಂದ ಒಂದು ಬೆಲೆಯನ್ನು
…ಗೆ ಒಪ್ಪಿಕೊಳ್ಳುವುದರಿಂದ ಮಾತ್ರ
… ರೂಪಾಯಿಗೆ ಬೆಲೆಯಿದೆಯೆಂದು
… ಆರಾಧಿಸಬೇಕಲ್ಲದೆ ನಮ್ಮ ಹಸಿವು,
…ನ್ನು ನಿವಾರಿಸುವ ಯಾ ನಮ್ಮನ್ನು
…ತ್ಯುಗಳಿಂದ ರಕ್ಷಿಸುವ ಸ್ವಶಕ್ತಿ ಯಾ
…ದರಲ್ಲಿ. ಆದ್ದರಿಂದ **ರೂಪ್ಯಾಯ**
…ಿ ನಮ್ಮ ಆವಶ್ಯಕತೆಗಳನ್ನು ನಮಗೆ
…ಲಿಕ್ಕೆ ಆದರಲ್ಲಿರುವ ಶಕ್ತಿಯ
…ು ಹೇಳಬಹುದು.

…ಷ್ಯರು ತಮ್ಮ ಆವಶ್ಯಕತೆಗಳನ್ನು
…ಳ್ಳಲಿಕ್ಕೆ ಉಪಯೋಗಿಸುವ ಪದಾ
ಹಣವೆಂದು ಕರೆಯುತ್ತಾರೆ. ಹಣ
… ರೂಪ್ಯಾ ಮಾತ್ರವಲ್ಲ. ಹಣವು
…ದ್ದೇ ಆಗಬೇಕೆಂದಿಲ್ಲ. ಆದರೂ ಭೂ
…ದಲ್ಲಿ ಸರ್ವಸಮ್ಮತವಾಗಿ ಈಗ ಜನ
ಒಪ್ಪುವ ಹಣವು ಲೋಹದ್ದೇ. ಈ
…ಗಳಲ್ಲಿ ಮೊದಲು ಬೆಳ್ಳಿಯೇ ಪ್ರಧಾನ
…ತ್ತು. ಈಗ ಚಿನ್ನವೇ ಪ್ರಧಾನವಾಗಿದೆ.
ಬೆಳ್ಳಿಗಳು ಪ್ರಧಾನವಿರುವ ದೇಶಗಳಲ್ಲಿ
…ಚಿಲ್ಲರೆ ವ್ಯವಹಾರಗಳಿಗೆ ಇತರ ಲೋಹ
… ಮಾಡಿದ ನಾಣ್ಯಗಳನ್ನೇ ಉಪಯೋಗಿ
…ರೆ. ಈ ಲೋಹಗಳು ಎಲ್ಲಾ ದೇಶ
ಒಂದೇಯಾಗಿರುವುದಿಲ್ಲ. ಆಯಾಯ
…ಳಲ್ಲಿ ಅಲ್ಲಲ್ಲಿಯ ಸರಕಾರದವರು ಒಂದು
… ಹೆಚ್ಚಿನ ಲೋಹದ ತುಂಡುಗಳನ್ನು
…ಗಳಾಗಿ ಮಾಡಿ ಅವುಗಳಿಗೆ ಒಂದು ಬೆಲೆ
…ನ್ನು ನಿಶ್ಚಯಿಸುತ್ತಾರೆ. ಆ ಬೆಲೆಗೆ **ನಾಣ್ಯ**
…ಯೆಂದು ಕರೆಯುತ್ತಾರೆ. ನಾಣ್ಯಗಳಿಗೆ.
ನಾಣ್ಯಬೆಲೆಯಲ್ಲದೆ ಅವುಗಳಲ್ಲಿರುವ
…ಹದ ನಿಜವಾದ ಲೋಹಬೆಲೆಯೊಂದೂ
…ದೆ. ನಾಣ್ಯಗಳಲ್ಲಿ ಲೋಹಬೆಲೆಯೂ
ಬೆಲೆಯೂ ಮುಂಚಿನ ಕಾಲದಲ್ಲೆಲ್ಲಾ
…ಯಾಗಿತ್ತು. ಈಗ ನಾಣ್ಯಬೆಲೆಗಿಂತ
…ಲೆ … ನಾಣ್ಯಗಳೇ
…ಾಗಿ

ರೂಪಾಯಿಯ ಬೆಲೆಯ ಏರಿಳಿತ.

ಹೆಚ್ಚಾದರೆ ಜನರು ನಾಣ್ಯಗಳನ್ನು ಕರಗಿಸಿ ಲೋಹವಾಗಿ ಮಾರಬಹುದಾದ್ದರಿಂದ ನಾಣ್ಯ ಬೆಲೆಗಿಂತ ಲೋಹಬೆಲೆ ಹೆಚ್ಚಿದ್ದ ನಾಣ್ಯಗಳು ಚಲಾವಣೆಗೆ ಪ್ರಯೋಜನವಿಲ್ಲ. ದೇಶದಲ್ಲಿಯ ಒಳಚಲಾವಣೆಗೆ ನಾಣ್ಯಗಳ ನಾಣ್ಯ ಬೆಲೆಯೇ ಮುಖ್ಯವಾದದ್ದು, ಹೊರದೇಶಗಳೊಡನೆ ವ್ಯಾಪಾರ ಬೆಳೆಸಲಿಕ್ಕೆ ಮಾತ್ರ ನಾಣ್ಯಗಳ ಬೆಲೆಯು ಆಯಾ ನಾಣ್ಯಗಳಲ್ಲಿರುವ ಲೋಹದ ಬೆಲೆಯೇ ಎಂದೆಣಿಸಬೇಕು. ಆಯಾಯ ದೇಶದೊಳಗೆ ಚಲಾವಣೆ ಬಗ್ಗೆ ನಿಶ್ಚಯಿಸಿದ ಅವುಗಳ ನಾಣ್ಯಬೆಲೆಯು ಹೊರದೇಶಗಳ ಮಟ್ಟಿಗೆ ನಿರರ್ಥಕವಾದದ್ದು.

ಲೋಹಬೆಲೆಯು ಕಡಿಮೆಯಿದ್ದು ನಾಣ್ಯಬೆಲೆಯು ಹೆಚ್ಚಿರುವ ನಾಣ್ಯಗಳಿಗೆ 'ಟೋಕೆನ್' ನಾಣ್ಯಗಳೆಂದು ಕರೆಯುತ್ತಾರೆ. ಈ 'ಟೋಕೆನ್' ನಾಣ್ಯಗಳು ಅವುಗಳಲ್ಲಿ ಬರೆದ ಠಕಾರಿ ಬೆಲೆಗೆ ದೇಶದೊಳಗೆ ನಡೆಯಬಹುದಾದರೂ ದೇಶದ ಹೊರಗೆ ಅವುಗಳಿಗೆ ಆ ಠಕಾರಿ ಬೆಲೆಯನ್ನು ಯಾರೂ ಕೊಡುವುದಿಲ್ಲ; ಅವುಗಳಲ್ಲಿರುವ ಲೋಹಕ್ಕೆ ಭೂಲೋಕದಲ್ಲೆಲ್ಲಾ ನಿಜವಾಗಿ ಅಂಥಾ ಲೋಹಕ್ಕೆ ಎಷ್ಟು ಬೆಲೆ ಇರಬಹುದೋ ಅಷ್ಟು ಬೆಲೆ ಮಾತ್ರ ಸಿಕ್ಕುವದು. ನಮ್ಮ ಹಿಂದೂದೇಶದಲ್ಲಿ ಈಗ ಚಲಾವಣೆಯಲ್ಲಿರುವ ಯಾವತ್ತೂ ತಾಮ್ರ, ನಿಕ್ಕೆಲ್, ಬೆಳ್ಳಿಯ ನಾಣ್ಯಗಳು 'ಟೋಕೆನ್' ನಾಣ್ಯಗಳಾಗಿರುತ್ತವೆ. ಅವುಗಳಿಗೆ ಇಲ್ಲಿರುವ ಬೆಲೆಯು ದೇಶದ ಹೊರಗಿಲ್ಲ; ಸಾಧಾರಣ ಅವುಗಳಿಗೆ ಹೊರಗೆಲ್ಲಾ ಇಲ್ಲಿರುವ ಬೆಲೆಯ ಅರ್ಧಾಂಶದಷ್ಟು ಮಾತ್ರ ಇರಬಹುದು.

ನಾಣ್ಯಗಳಿಗೆ ನಾಣ್ಯಬೆಲೆಯನ್ನು ಲೋಹ ಬೆಲೆಗಿಂತಲೂ ಅಧಿಕವಾಗಿ ನಿಶ್ಚಯಿಸುವುದರಿಂದ ಸರಕಾರಕ್ಕೆ ಬಹಳ ಲಾಭವಿದೆ. ೪ ಆಣೆಯ ಬೆಳ್ಳಿಯನ್ನು ಕ್ರಯಕ್ಕೆ ತಕ್ಕೊಂಡು, ತೂಕದ ಭರ್ತಿಗೆ ಕೀಳುಲೋಹವನ್ನು ಅದರೊಂದಿಗೆ ಮಿಶ್ರಮಾಡಿ, ಹದಿನಾರಾಣೆಯ ರೂಪಾಯಿಯಾಗಿ ಮಾರಿದರೆ ಎಲ್ಲಾ ಖರ್ಚು ಕಳೆದು ರೂಪಾಯಿಗೆ ಸಾಧಾರಣ ೭ ಆಣೆಯಂತೆ ಸರಕಾರಕ್ಕೆ ಉಳಿತಾಯವಿರಬಹುದು. ಕಾಗದದ ತುಂಡುಗಳನ್ನು ನೋಟುಗಳಾಗಿ ಚಲಾವಣೆಯಲ್ಲಿ ಹಾಕುವುದರಿಂದ ಸರಕಾರಕ್ಕೆ ಹೀಗೆಯೇ ಉಳಿತಾಯವಿದೆ. ಈ ಟೋಕೆನ್ ನಾಣ್ಯಗಳೂ, ನೋಟುಗಳೂ ದೇಶದೊಳಗೆ ಎಲ್ಲಾ ಕೆಲಸಗಳಿಗೂ ನಿಜಲೋಹದ ನಾಣ್ಯಗಳಂತೆ ನಡೆಯಲಿಕ್ಕೇನೂ ತೊಂದರೆಯಿಲ್ಲ. ಜನರಲ್ಲಿ ನಂಬಿಕೆ, ವಿಶ್ವಾಸಗಳನ್ನು ಹುಟ್ಟಿಸುವ ಶಕ್ತಿ ಇದ್ದ ಸರಕಾರವು ಹಾಗೆ ಮಾಡಿದ್ದರಿಂದ ಕೇಡಿಲ್ಲ. ಆದರೆ ದೇಶದೊಳಗೆ ಕೂಡ ನಾಣ್ಯಗಳಿಗೆ **ಕೊಂಡುಕೊಳ್ಳುವ ಬೆಲೆ** ಯನ್ನು ಸರಕಾರದವರು ನಿಶ್ಚಯಿಸಲಿಕ್ಕೆ ಸಾಧ್ಯವಿಲ್ಲ. ಹೀಗೆ ನಮ್ಮ ಸರಕಾರದವರು ರೂಪಾಯಿಯಲ್ಲಿ ಎಂಟಾಣೆಯ ಬೆಳ್ಳಿ ಮಾತ್ರ ಹಾಕಿದರೂ ಅದಕ್ಕೆ ಭರ್ತಿ ೧೬ ಆಣೆ ಯಾ ೧೯೨ ಪೈ ಬೆಲೆಯೆಂದು ನಿಶ್ಚಯಿಸಬಹುದು. ಆದರೆ ಆ ರೂಪಾಯಿಗೆ ಇಂತಿಷ್ಟೇ ಸೇರು ಅಕ್ಕಿ ಸಿಕ್ಕಬೇಕು-ಇಲ್ಲವೆ ಸಿಗರೇಟು ಬೀಡಿ ಸಿಕ್ಕಬೇಕು-ಎಂದು ನಿಶ್ಚಯಿಸಲಿಕ್ಕೆ ಅವರಿಂದಲೂ ಸಾಧ್ಯವಿಲ್ಲ. ಆದ್ದರಿಂದ ದೇಶದೊಳಗೇನೇ ಕೂಡ ಸರಕಾರದವರು ನಾಣ್ಯಗಳಿಗೆ ನಿಶ್ಚಯಿಸುವ ಬೆಲೆಯೆಂದರೆ ನಾಣ್ಯ, ನಾಣ್ಯಗಳ ಮಟ್ಟಿಗಿರುವ ಬೆಲೆಯಲ್ಲದೆ ಅವಶ್ಯಕತೆಗಳನ್ನು ಕೊಂಡುಕೊಳ್ಳುವ ಮಟ್ಟಿನ ಬೆಲೆಯಲ್ಲ. ಅವಶ್ಯಕತೆಗಳ ಬೆಲೆಯಾಗಲಿ, ಕೆಲಸದ ಜನರಿಗೆ ಕೊಡುವ ಕೂಲಿಯ ದರವಾಗಲಿ ಹೆಚ್ಚುಕಡಿಮೆಯಾಗಲಿಕ್ಕೆ ಇತರ ಅನೇಕ ಕಾರಣಗಳಿವೆ.

'ಟೋಕೆನ್' ನಾಣ್ಯಗಳನ್ನೂ ನೋಟುಗಳನ್ನೂ ಚಲಾವಣೆಯಲ್ಲಿ ಹಾಕಿ ಸರಕಾರದವರು ಸುಮ್ಮನೆ ಕೂತುಬಿಡಸಾಧ್ಯವಿಲ್ಲ. ಹೊರಗಣ ವ್ಯಾಪಾರಕ್ಕೆ ಅನಶ್ಯವಿರುವ ಲೋಹಯಾ ನಾಣ್ಯಗಳನ್ನು—ಈ ಟೋಕೆನ್ ನಾಣ್ಯ ಮತ್ತು ನೋಟುಗಳನ್ನು ಕೊಟ್ಟವರಿಗೆ ವದಗಿಸಿಕೊಡುವ ಕೆಲಸವನ್ನು ಸರಕಾರದವರು ಮಾಡಲೇ ಬೇಕಾಗಿರುತ್ತದೆ. ಹಾಗೆ ಮಾಡದಿದ್ದರೆ ಸರಕಾರದ ಟೋಕೆ… ಮೇಲ್ಲೂ ನೋಟುಗಳ… ಅನರ್ಥಗಳು ಶೀಘ್ರದಿಂದ ಬಂದೊದಗುವವು. ಹೊರಗಣ ವ್ಯಾಪಾರದ ಬಗ್ಗೆ ಈಗ ಹಿಂದೂ ದೇಶದವರಿಗೆ ಬೇಕಾದದ್ದೆಂದರೆ ಭಂಗಾರವೇ. ಆದ್ದರಿಂದ ನೋಟುಗಳನ್ನೂ ರೂಪಾಯಿಗಳನ್ನೂ ಕೊಟ್ಟವರಿಗೆ ಹೊರ ವ್ಯಾಪಾರದ ಬಗ್ಗೆ ಬೇಕಾಗುವ ಭಂಗಾರವನ್ನು ಯಾ ಭಂಗಾರದ ಪವನನ್ನು ಸರಕಾರದವರು ರೂಪಾಯಿಗೆ ೧ ಶಿ. ೬ ಪೆನ್ಸು ದರ ಪ್ರಕಾರ ವದಗಿಸಿಕೊಡಬೇಕೆಂದು ಕಾನೂನಿದೆ.

೧೯೨೭ನೇ ವರ್ಷದ ತನಕ ರೂಪಾಯಿ, ನೋಟುಗಳನ್ನು ಕೊಟ್ಟರೆ ನಮಗೆ ಹಿಂದೂ ದೇಶದ ಎಲ್ಲಾ ಬೇಂಕುಗಳಲ್ಲಿಯೂ ಪವನುಗಳನ್ನು ಕೊಡಬೇಕಿತ್ತು. ಈಗ ಯಾರೂ ಹಾಗೆ ಕೊಡಬೇಕಾದ್ದಿಲ್ಲ. ೧,೦೬೫ ತೊಲೆಗೆ ಕಡಿಮೆಯಾಗದ ಭಂಗಾರದ ಪವನು ಪಡೆಯಲಪೇಕ್ಷಿಸುವವರಿಗೆ ಮಾತ್ರ ಈಗ ಮುಂಬಾಯಿಯಲ್ಲಿ ಸರಕಾರದವರು ಅವರಿಂದ ಸ್ಟರ್ಲಿಂಗ್ ತೂಕದ ಪವನಿಗೆ ೧ ಶಿ. ೬ ಪೆನ್ಸು ದರ ಪ್ರಕಾರ, ರೂಪ್ಯಾ ಯಾ ನೋಟುಗಳನ್ನು ಪಡಕೊಂಡು, ಸ್ಟರ್ಲಿಂಗ್ ಪವನುಗಳನ್ನು ಕೊಡುತ್ತಾರೆ. ಇದರಿಂದ ಇನ್ನು ಹೊರಗಣ ವ್ಯಾಪಾರದ ಬಗ್ಗೆ ಮಾತ್ರ ನಮಗೆ ಪವನು ಸಿಕ್ಕಬಹುದಲ್ಲದೆ ಆಭರಣಗಳನ್ನು ಮಾಡಿಸಲಿಕ್ಕೆ ಯಾ ಹೂಳಿಡಲಿಕ್ಕೆ ಪವನುಗಳು ಸಿಕ್ಕವು. ಹಿಂದೂದೇಶದಲ್ಲಿ ಭಂಗಾರದ ನಾಣ್ಯಗಳ ಚಲಾವಣೆಯನ್ನು ನಿಲ್ಲಿಸಿದ್ದಾರೆ. ಆಂಗ್ಲೇಯರ ಈ ಸ್ಟರ್ಲಿಂಗ್ ಪವನು ೧೯೩೧ನೇ ವರ್ಷದ ತನಕ ನಾಣ್ಯಬೆಲೆಯಷ್ಟೇ ಲೋಹಬೆಲೆಯಿದ್ದ ನಾಣ್ಯವಾಗಿತ್ತು. ಈಗ ಅದೂ 'ಟೋಕೆನ್' ನಾಣ್ಯವಾಗಿದೆ. ಆದರೆ ಈಗ ಚೀನಾದೇಶವಲ್ಲದೆ ಇತರ ದೇಶಗಳಲ್ಲೆಲಾ ಭಂಗಾರದ ನಾಣ್ಯಗಳ ಚಲಾವಣೆಯಿರುವುದರಿಂದ ಪವನಿನ ಬೆಲೆಯನ್ನು ಬೇರೆ ದೇಶಗಳ ನಾಣ್ಯಗಳ ಬೆಲೆಗೆ ಹೋಲಿಸಿ, ಲೆಕ್ಕ ಮಾಡಿ, ವ್ಯಾಪಾರವನ್ನು ನಡೆಸಸಾಧ್ಯವಿದೆ. ನಮ್ಮ ದೇಶದಲ್ಲಿ ಈಗಿನ ಕ್ರಮ ಪ್ರಕಾರ ಒಂದು ಸ್ಟರ್ಲಿಂಗ್ ಪವನನ್ನು ಪಡಕೊಳ್ಳಬೇಕಾದರೆ ರೂ. ೧೩-೪-೦ ರಷ್ಟು ಕೊಟ್ಟರೆ ಸಾಕು, ಸಿಕ್ಕಲಿಕ್ಕೆ ಮಾತ್ರ ನಿರ್ಬಂಧನೆಗಳಿವೆ. ಹಾಗೆಯೇ ನಮಗೆ ಬೇರೆ ದೇಶದ ವ್ಯಾಪಾರ ಮೂಲಕ ಒಂದು ಪವನು ಸಿಕ್ಕಿದರೆ ಇಲ್ಲಿ ಅದನ್ನು ಮಾರಿ ರೂ. ೧೩-೪ನ್ನು ಪಡೆಯಬಹುದು. ಆದರೆ ಸ್ಟರ್ಲಿಂಗ್ ಪವನಿನ ಮಧ್ಯಸ್ತಿಕೆಯಿಂದಲೇ ನಮ್ಮ ಹೊರ ವ್ಯಾಪಾರ ನಡೆಯಬೇಕಲ್ಲದೆ ರೂಪಾಯಿಯಲ್ಲಿರಬಹುದಾದ ಬೆಳ್ಳಿಯ ಬೆಲೆಯ ಲೆಕ್ಕದಿಂದ ಪರದೇಶಗಳೊಡನೆ ನಮಗೆ ವ್ಯಾಪಾರ ಮಾಡಲು ಸಾಧ್ಯವಿಲ್ಲ; ನಮಗೆ ಈಗ ರೂಪ್ಯಾ ಕೊಟ್ಟು ವ್ಯಾಪಾರದ ಬಗ್ಗೆ ಶುದ್ಧ ಭಂಗಾರದ ಗಟ್ಟಿಗಳನ್ನು ಪಡಕೊಳ್ಳಲಿಕ್ಕೂ ಕಷ್ಟವಿದೆ. ಹಾಗಾಗಿ ನಾವು ನಮ್ಮ ಹೊರಗಣ ವ್ಯಾಪಾರದ ಮಟ್ಟಿಗೆ ಆಂಗ್ಲೇಯರ ಪವನಿನ ದಾಸರಾಗಬೇಕಾಗಿದೆ. ಅದನ್ನು ಬಿಟ್ಟು ನಾವು ನಮ್ಮ ಹೊರಗಣ ವ್ಯಾಪಾರದ ಉಳಿತಾಯ, ನಷ್ಟಗಳನ್ನು ಸರಿಪಡಿಸಿಕೊಳ್ಳ ಸಾಧ್ಯವಿಲ್ಲ.

ಹೀಗಾಗಿ ಈಗ ಹಿಂದೂದೇಶದ ಹೊರ ವ್ಯಾಪಾರಕ್ಕೆ ಸಂಪೂರ್ಣ ಸ್ವಾತಂತ್ರ್ಯವಿಲ್ಲದಂತಾಗಿದೆ. ಸ್ಟರ್ಲಿಂಗ್ ಪವನೆಂದರೆ ಆಂಗ್ಲ ದೇಶದ ಚಲಾವಣೆಯ ನಾಣ್ಯ. ಬೇರೆ ದೇಶಗಳಲ್ಲಿ ಅದು ಚಲಾವಣೆಯಲ್ಲಿಲ್ಲ. ನನಗೆ ನಮ್ಮ ರೂಪಾಯಿಯೊಳಗಿನ ಲೋಹದ ಬೆಲೆಯ ಆಧಾರದಿಂದಲೇ ಬೇರೆ ದೇಶಗಳೊಡನೆ ವ್ಯಾಪಾರಸಂಬಂಧದ ಲೆಕ್ಕಗಳನ್ನಿಡಲಿಕ್ಕೆ ಸಾಧ್ಯವಿಲ್ಲ. ಶುದ್ಧಭಂಗಾರದ ಬೆಲೆಯ ಆಧಾರದಿಂದಲೂ ಸಾಧ್ಯವಿಲ್ಲ. ನಾವು ಜಪಾನಿನೊಡನೆ ಯಾ ಅಮೇರಿಕದವರೊಡನೆ ವ್ಯಾಪಾರ ಬೆಳೆಸಬೇಕಾದರೂ ನಮ್ಮ ಕ್ರಯಗಳ ರೂಪಾಯಿ ಲೆಕ್ಕವನ್ನು ಸ್ಟರ್ಲಿಂಗ್ ಪವನುಗಳಲ್ಲಿ ಎಣಿಸಿ, ಆ ಸ್ಟರ್ಲಿಂಗ್ ಪವನುಗಳಿಗೂ ಅಮೇರಿಕ, ಜಪಾನಿನ ನಾಣ್ಯಗಳಿಗೂ ಇರುವ ಪರಸ್ಪರ ಸಂಬಂಧದ ಮೇಲೆ ಎರಡನೇ ಲೆಕ್ಕ ಮಾಡಿಕೊಂಡು ಮುಂದರಿಸಬೇಕು. ಪರದೇಶದ ನಾಣ್ಯಗಳು ನಮಗೆ ನಮ್ಮ ನಾಣ್ಯಗಳ ಗಂಡನಾದ ಸ್ಟರ್ಲಿಂಗ್ ಪವನಿನ ಮೂಲಕವೇ ಗೊತ್ತಾಗಬೇಕು.

ಹೀಗಾಗಿ ರೂಪಾಯಿ-ಸ್ಟರ್ಲಿಂಗ್ ಪವನಿನ ವಿನಿಮಯದರವು … ಮಟ್ಟ…

ಪಿತ್ತಕೋಶವನ್ನು ಕಲೋಮಲ್ ಇಲ್ಲದೆ-ಎಚ್ಚರಿಸಿರಿ.

ಮೋಟಾರು ಗಾಡಿಯನ್ನು ನೂಕುವಷ್ಟು ಉತ್ಸಾಹ ಉಂಟಾಗುವುದು.

ಪ್ರತಿ ದಿನವೂ ಎರಡು ಪೈಂಟಿನಷ್ಟು ಪಿತ್ತರಸವು ಪಿತ್ತಕೋಶದಿಂದ ಜೀರ್ಣಕೋಶಕ್ಕೆ ಹರಿಯಬೇಕು. ಹೀಗೆ ಹರಿಯದಿದ್ದರೆ, ನಿಮ್ಮ ಆಹಾರವು ಜೀರ್ಣವಾಗದೆ ಮಲಕೋಶದಲ್ಲಿ ಕೊಳೆಯುತ್ತದೆ ಇದರಿಂದ ಹೊಟ್ಟೆಯಲ್ಲಿ ವಾಯು ಉತ್ಪತ್ತಿಯಾಗಿ ಮಲಬದ್ಧತೆಯುಂಟಾಗುತ್ತದೆ. ನಿಮ್ಮ ಶರೀರ ಯಂತ್ರವೆಲ್ಲಾ ವಿಷಮಯವಾಗಿ, ಪ್ರಪಂಚವೇ ಬೇಡವೆಂಬ ಮನೋ ಜಿಗುಪ್ಸೆಯುಂಟಾಗುತ್ತದೆ.

ಲವಣಗಳು, ರುಚಿಕರವಾದ ಸೌಮ್ಯ ಮತ್ತು ಕಠಿನತರ ಜುಲಾಬುಗಳು, ಇವೆಲ್ಲಾ ತಾತ್ಕಾಲಿಕ ಕ್ಕೆಮಾತ್ರ ಉಪಯೋಗವಾದವುಗಳಲ್ಲದೆ ಮೂಲ ಕಾರಣವನ್ನು ತಾಕುವುದಿಲ್ಲ. ಆರೀತಿ ಮಾಡಬೇಕಾದರೆ ಜಗತ್ಪ್ರಸಿದ್ಧವಾದ "ಕಾರ್ಟರ್ಸ್ ಲಿಟಲ್ ಲಿವರ್ ಪಿಲ್ಸ್"ಗಳು ಮೇಲೆ ಹೇಳಿದ ೨ ಪೈಂಟು ಪಿತ್ತವನ್ನು ತಪ್ಪದೆ ಸಲೀಸಾಗಿ ಉತ್ಪತ್ತಿಮಾಡುತ್ತದೆ. ನಿರಪಾಯ, ಸೌಮ್ಯ ಮತ್ತು ಪೂರ್ಣಗುಣಕಾರಿಯಿದೆ. ಥಾವಾಗಲೂ ಕಾರ್ಟರ್ಸ್ ಲಿಟಲ್ ಲಿವರ್ ಪಿಲ್ಸ್‌ಗಳನ್ನೇ ಕೇಳಿರಿ. ಪ್ರತಿಯೊಂದು ಕೆಂಪು ಪೊಟ್ಟಣದ ಮೇಲೆ ಕಾರ್ಟರರ ಹೆಸರನ್ನು ನೋಡಿರಿ ಬೆಲೆ ೧೦ ಆಣೆ.

ಸಂಗತಿಯಾಗಿದೆ. ಈ ವಿನಿಮಯದರವನ್ನು ನಮ್ಮ ಸರಕಾರದವರು ನಿಶ್ಚಯಿಸುವದು. ಈ ವಿನಿಮಯದರವನ್ನು ಹೆಚ್ಚು ಕಡಿಮೆ ಮಾಡುವದರಿಂದ ಹೊರ ವ್ಯಾಪಾರವನ್ನು ಸ್ವಲ್ಪ ಹೆಚ್ಚು ಕಡಿಮೆ ಮಾಡಸಾಧ್ಯವಿದೆ. ಈ ವಿನಿಮಯದರದಿಂದಲೇ ನಮ್ಮ ರೂಪಾಯಿಗೆ ಭೂಲೋಕದಲ್ಲಿ ಎಲ್ಲಾ ಕಡೆ ಬೆಲೆಯನ್ನು ನಿಶ್ಚಯಿಸುವುದರಿಂದ ಈ ವಿನಿಮಯದರಕ್ಕೇನೇ **ರೂಪಾಯಿಯ ಬೆಲೆ** ಎಂದು ಕರೆಯುವ ರೂಢಿಯಿದೆ.

ನಮ್ಮೊಡನೆ ರೂ. 1000 ಬಾಳುವ ಏಲಕ್ಕಿ ಇದೆಯೆಂದು ಹೇಳೋಣ. ಏಲಕ್ಕಿಯನ್ನು ಪರದೇಶಕ್ಕೆ ಕಳುಹಿಸಬೇಕು. 1 ಶಿ. 4 ಪೆನ್ಸು ವಿನಿಮಯದರವಾದರೆ ಪರದೇಶದವರು ನಮಗೆ ಆ ಏಲಕ್ಕಿಗೆ 66⅔ ಪವನು ಕೊಟ್ಟರೆ ಸಾಕಾಗುವದು; 1 ಶಿ. 6 ಪೆನ್ಸು ದರದಲ್ಲಿ ಅವರು ೭೫ ಪವನು ನಮಗೆ ಕೊಡಬೇಕಾಗುತ್ತದೆ. ಏಲಕ್ಕಿಯಲ್ಲಿಯೂ ನಮಗೆ ಸಿಕ್ಕುವ ಹಣದಲ್ಲಾಗಲಿ ವ್ಯತ್ಯಾಸವಿಲ್ಲದೆ ನಮ್ಮ ಗಿರಾಕಿಗಳಿಗೆ ನಮ್ಮ ಏಲಕ್ಕಿಯು ಅಗ್ಗದಲ್ಲಿ ಸಿಕ್ಕಿದರೆ ಅವರು ನಮ್ಮಿಂದ ಹೆಚ್ಚು ಏಲಕ್ಕಿಯನ್ನು ತರಿಸಿಕೊಳ್ಳುವರು; ಆದ್ದರಿಂದ ಏಲಕ್ಕಿ ಕೃಷಿ, ಏಲಕ್ಕಿ ವ್ಯಾಪಾರ ಮಾಡುವ ಭಾರತೀಯರಿಗೆ ಜೀವನೋಪಾಯಗಳು ಹೆಚ್ಚುತ್ತವೆ. 1 ಶಿ. 4 ಪೆನ್ಸು ದರದಿಂದ ಹಾಗೆಯೇ ಹೊರದೇಶದಿಂದ ಬರುವ ಸರಕುಗಳಿಗೆ ಬೆಲೆ ನಮಗೆ ಹೆಚ್ಚುವದರಿಂದ ನಾವು ಅಂಥಾ ಸರಕುಗಳನ್ನು ಇಲ್ಲಿಯೇ ಪಡಕೊಳ್ಳ ಸಾಧ್ಯವಿದ್ದರೆ ಪಡಕೊಳ್ಳುತ್ತೇವೆ; ಹೀಗಾಗಿ ದೇಶೀಯ ಕೈಗಾರಿಕೆಗಳಿಗೆಲ್ಲಾ ದೇಶದಲ್ಲಿ ಪ್ರೋತ್ಸಾಹವು ಸಿಕ್ಕುತ್ತದೆ. ಹೀಗೆ ರೂಪಾಯಿಯ ಬೆಲೆಯನ್ನು 1 ಶಿ. 6 ಪೆನ್ಸಿನಿಂದ 1ಶಿ. 4 ಪೆನ್ಸಿಗೆ ಕಡಿಮೆ ಮಾಡುವುದರಿಂದ ದೇಶದ ಆರ್ಥಿಕ ಸ್ಥಿತಿಯು ಮೇಲಾಗುವದೆಂದು ಅನೇಕರು ಹೇಳುವುದಾಗಿರುತ್ತದೆ.

ಸರಕಾರದವರು ಮಾತ್ರ ಇದಕ್ಕೆ ಒಪ್ಪುವುದಿಲ್ಲ. 1 ಶಿ. 6 ಪೆನ್ಸು ದರ ತೆಗೆದರೆ ದೇಶಕ್ಕೆ ಇತರ ತರದ ಹಾನಿ ಇದೆಯೆಂದು ಅವರ ಅಭಿಪ್ರಾಯವಾಗಿರುತ್ತದೆ. ಇದೂ ಕೀರ ತಪ್ಪಲ್ಲ. ಹಿಂದೂದೇಶದಿಂದ ವರ್ಷಂಪ್ರತಿ ಸಾಧಾರಣ 35 ಮಿಲಿಯ ಪವನಿನಷ್ಟು ಹಣವನ್ನು ಆಂಗ್ಲ ದೇಶಕ್ಕೆ ಕಳುಹಿಸುವ ಜವಾಬ್ದಾರಿಯು ಸರಕಾರದ ಮೇಲಿದೆ. 1 ಶಿ. 6 ಪೆನ್ಸಿನ ದರದಲ್ಲಿ ಇದನ್ನು ಕಳುಹಿಸಲಿಕ್ಕೆ ಅವರಿಗೆ ರೂಪಾಯಿಗಳು ಕಡಿಮೆ ಇದ್ದರೆ ಸಾಕು. 1 ಶಿ. 4 ಪೆನ್ಸಿನ ದರದಲ್ಲಿ ರೂಪಾಯಿಗಳು ಹೆಚ್ಚು ಬೇಕಾಗು…

(೧೩ನೇ ಪುಟ ನೋಡಿ)

To

M. R. Ry. Dewan Bahadur
B. Mahabala Hegde, Avl.,
B. A., B. L.,
President, District Board,
South Kanara.

Sir,

Ref:-Notice of the urgent meeting of the District Board for the 20th January 1937 at 1 P. M.

With reference to the notice dated 15—1—1937 calling for an urgent meeting of the Board on the 20th instant, I find that you have stated in the said notice that the meeting convened for the 15th instant 'was adjourned by a resolution of the Board on the ground that the notice of the business was not given within the time prescribed by rules on account of a bonafide mistake.'

I am constrained to point out to you, that the said notice contains two incorrect statements, because (1) there was no bonafide mistake at all and (2) there was no resolution of the Board to the above effect.

You are aware, that at the meeting of the 15th instant the first thing that transpired was, that Mr. Molahalli Shiva Rao got up and stated that the said ordinary meeting was illegal and not valid as it contravened the provisions of the Act since 10 days clear notice of the business was not given of the said meeting. Immediately I stood up and endorsed the statement of Mr. M. Shiva Rao and specifically referred to Schedule II Rule 3 (1) of the Act. Then Mr. B. Vaikunta Baliga also read out the commentary on the point and stated, that the whole proceedings would be null and void if the meeting was proceeded with, for want of prescribed notice. You plainly admitted that in such a case, no proceedings should take place and you dissolved the meeting. You will, therefore, see that there was absolutely no explanation on your part for failure to give the prescribed notice in time nor was it expressed that the said failure was due to any mistake—bonafide or not. If it was really a bonafide mistake, you would have certainly openly expressed it and requested the Board to condone it. This was never done and it is a matter of surprise to me, how that explanation should for the first time appear in the notice referred to above.

Secondly, from what has transpired as stated above, there was no resolution of the Board for adjourning the meeting on that ground. As such, it is really inexcusable on your part to issue such a notice containing such incorrect statements. The facts, that you have long experience as President of the District Board and as such ought to have known the rule regarding the ten days clear notice of the business for ordinary meetings and also that there was absolutely no explanation or justification for failure to give the said timely notice, and that the Board did not condone or excuse your failure and there was no resolution of the Board to adjourn the said meeting on that ground—all these go to
bonafide
part but
lure on your
election cam
legitimate d
the District
thereof, you
Board liable f
members and othe
curred for holding
ing and you yourself
sonally held respon
the expenses and
respect of the same.

Mangalore,
18-1-1937.
Member, District

ನೋಟೀಸು

ಜಯಲಕ್ಷ್ಮೀ ಬೆಂಕ್, ಲಿಮಿಟೆಡ್,
ಪುತ್ತೂರು ಬ್ರೆಂಚ್.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೆಂಕಿನಿಂದ ನಗ ಈಡಿನ ಮೇಲೆ ಸಾಲ ಪಡೆಕೊಂಡ ನಂತರ ಸದರಿ ಸಾಲವನ್ನು ಬರಮಾಡಿಕೊಳ್ಳುವರೆ ಅವರಿಗೆ ಬಿಟ್ಟ ರಿಜಿಸ್ತ್ರಿ ನೋಟೀಸುಗಳು ವಾಪಸು ಬಂದಿರುವದರಿಂದ ಸದರಿಯವರು ಈಡಿಟ್ಟ ನಗಗಳು ತಾ. 23-1-'37ನೇ ಶನಿವಾರ ದಿವಸ ಯಾ ನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ಈ ಬೆಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುವವು ಎಂಬದನ್ನು ಈ ಮೂಲಕ ತಿಳಿಸಿರುತ್ತದೆ.

ಜೆ. ಎಲ್. ನಂಬ್ರ	ಸಾಲ ಪಡಕೊಂಡವರ ಹೆಸರು	ಅಸ್ಲು ಹಣ ರೂ.ಆ-ಪೈ
479 / 34-35	ಕಲ್ಪಡ ನಾರಾಯಣ ಉಪಾಧ್ಯಾಯ, ಶ್ರೀನಿವಾಸ ಉಪಾಧ್ಯಾಯರ ಮಗ, ಕೊಡಿಯಾಲ ಗ್ರಾಮ.	15 0 0
2950 / 34-35	ಬರೆಕೆರಿ ರಾಮಚಂದ್ರ ಭಟ್ಟ, ವಾಸುದೇವ ಶಾಸ್ತ್ರಿಗಳ ಮಗ, ವರ್ಗದಾರ, ಪುತ್ತೂರು ಕಸಬಾ.	35 0 0
4196 / 34-35	ನೆಕ್ಕಾಜೆ ಅಬ್ಬುಂಞ ಬ್ಯಾರಿ, ಬಾವುಂಞ ಬ್ಯಾರಿಗಳ ಮಗ, ವ್ಯಾಪಾರಿ, ಕನ್ಯಾನ ಗ್ರಾಮ.	18 0 0
4090 / 35-36	ಕೋಟೆ ಕೊರಗ ಗೌಡ, ದುಗ್ಗಣ್ಣ ಗೌಡರ ಮಗ, ಬೇಸಾಯಗಾರ, ಪೆರ್ನೆ ಗ್ರಾಮ.	10 0 0
	ಜುಮ್ಲಾ	78 0 0

Jaya Laxmi Bank, Puttur, South Kanara. 20th Jan. 1937.
P. Sanjiva Rao,
Agent.

MYSORE & COORG PRODUCE AGENCY

MANGALORE. TELE: MYCO

ಮೈಸೂರ್ ಎಂಡ್ ಕೂರ್ಗ್ ಪ್ರೊಡ್ಯೂಸ್ ಏಜೆನ್ಸಿ

ಮಂಗಳೂರು.

ಆಫೀಸು:—ಬಂದ್ರದ ಮೆಸ್ಸರ್ಸ್. ಎಸ್ಟಿನ್‌ವಾಲ್ ಎಂಡ್ ಕಂಪೆನಿ, ಲಿಮಿಟೆಡ್ ಇವರ ಆಫೀಸು ಬಳಿ.

No. 11. ತಾ. 22—1—

ಮಾಡುವ ನಮಸ್ಕಾರ.

ಹಾಲಿ ಮಂಗಳೂರು ಬಜಾರು ಧಾರಣೆ.

Plantation Coffee. ಪ್ಲೇಂಟೇಶನ್ ಕಾಫಿ.

Assortment ಎಸೊರ್ಟ್‌ಮೆಂಟು. ರೂ. 35-12-0ರಿಂದ ರೂ. 38-5-0ರ ವರೇಗೆ.	A. Size ಎ. ಸೈಜು. ರೂ. 36-8-0.	B. Size ರೂ. 34-
C. Size ಸಿ. ಸೈಜು. ರೂ. 33—4—0.	P. B. ಪೀಬ್ರಿ. ರೂ. 52—5—0.	Triage ಟ್ರೈ ರೂ. 30—4-

Native Coffee. ನೇಟಿವ್ ಕಾಫಿ.

Cherry ಚೆರಿ ಗಾರ್ಬಲ್. ರೂ. 176-9-0ರಿಂದ ರೂ. 190-5-0ರ ವರೇಗೆ.	Peaberry ಪೀಬ್ರಿ. ರೂ. 217—4—0.	Cherry Triage ಚೆರಿ ಟ್ರೈಯೆ. ರೂ. 130—0—0.

Pounded ಕುಟ್ಟಿದ ಕಾಫಿ. 5% ರೂ. 165-0-0ರಿಂದ 175-5-0ರ ವರೇಗೆ.	Mixed ಮಿಶ್ರ ಕಾಫಿ. ರೂ. —	Black ಕಪ್ಪು ಕಾಫಿ. ರೂ. 80-0-0.	Black Brown. ಬ್ಲೇಕ್ ಬ್ರೌನ್. ರೂ. 107-8-0.	Refuse ಸುಚ್ಚು ರೂ. 50ರಿಂದ ರೂ. 75ರ

Robusta ರೊಬಸ್ಟಾ. ರೂ. 130ರಿಂದ—135.	Robusta P. B. ರೊಬಸ್ಟಾ ಪೀಬ್ರಿ. ರೂ. —	Robusta Black ರೊಬಸ್ಟಾ ಬ್ಲ ರೂ. —
Coorg Cardamoms ಕೊಡಗು ಯಲಕ್ಕಿ. ರೂ. 62-0-0ರಿಂದ ರೂ. 67-0-0ರ ವರೇಗೆ.		Saklaspur Cardamom ಮಂಜರಾಬಾದ್ ಯೆ ರೂ. 68—0—0ರಿಂದ ರೂ. 72—8—0ರ ವರೇಗೆ.

ಈ ವಾರದಲ್ಲಿ ವ್ಯಾಪಾರವಾದ ಪ್ಲೇಂಟೇಶನ್ ಕಾಫಿ:—

ರೂ. 35-12—0ರಂತೆ	138	ಹಂಡ್ರಡ್‌ವೇಟ್ಸು.
ರೂ. 35—9—0 ,,	313	A size ,,
ರೂ. 36-12—0 ,,	211	,,
ರೂ. 37—8—0 ,,	118	,,
ರೂ. 37—3—0 ,,	250	,,
ರೂ. 37-11—0 ,,	154	,,
ರೂ. 37—5—0 ,,	143	,,
ರೂ. 36-15—0 ,,	40	,,
ರೂ. 37—9—0 ,,	177	,,
ರೂ. 51—9—0 ,,	65	,,
ರೂ. 37-12—0 ,,	73	,,
ರೂ. 38—5—0 ,,	84	,,
ರೂ. 52—5—0 ,,	70	,,
ರೂ. 36—8—0 ,,	50	,,
ರೂ. 37—1—0 ,,	206	,,
ರೂ. 51-14—0 ,,	50	,,

ನೇಟಿವ್ ಕಾಫಿ:—

ರೂ. 175— 5—0ರಂತೆ	17¼	ಖಂಡಿ.
ರೂ. 168—12—0 ,,	17	,,
ರೂ. 165— 0—0 ,,	5	,,
ರೂ. 176— 9—0 ,,	13¾	,,
ರೂ. 180— 5—0 ,,	19	,,
ರೂ. 182— 5—0 ,,	8¾	,,
ರೂ. 183— 5—0 ,,	18	,,
ರೂ. 170— 0—0 ,,	4	,,
ರೂ. 181— 6—0 ,,	4	,,
ರೂ. 187— 0—0 ,,	10¼	,,
ರೂ. 180— 4—0 ,,	6½	,,
ರೂ. 190— 5—0 ,,	12¼	,,
ರೂ. 178— 0—0 ,,	15¾	,,
ರೂ. 172— 8—0 ,,	11	,,
ರೂ. 185—13—0 ,,	5	,,
ರೂ. 182— 8—0 ,,	33	,,
ರೂ. 186— 5—0 ,,	17½	,,
ರೂ. 183—12—0 ,,	8	,,

ಕಾಫಿಯ ಮಾರ್ಕೆಟ್ಟು:—ಈ ವಾರದಲ್ಲಿ ಹೆಚ್ಚಿನ ತೇಜಿಯಿಂದ ವ್ಯಾಪಾರ ನಡಿಯಲಾಯ್ತು. ಖಂಡಿ 1ರ ರೂ. 15ರಂತೆ ನೇಟೀವ್ ಕಾಫಿಗೂ, ಹಂಡ್ರಡ್‌ವೇಟು 1ರ ರೂ. 2—0—0ರಂತೆ ಪ್ಲೇಂಟೇಶನ್ ಕಾಫಿಗೂ ಧಾರಣೆ ತೇಜಿಯಾಯ್ತು. ಪರ ಬಂದ್ರದ ಡಿಮಾಂಡ್ ಇದ್ದುದರಿಂದಲೂ, ದಕ್ಷಿಣ ಹಿಂದುಸ್ಥಾನದ ಗಿರಾಖಿಗಳ ಕುತೂಹಲದಿಂದಲೂ ಈ ರೀತಿ ತೇಜಿ ಬಹುವರೆ ಕಾರಣ. ಮುಂದೆ ಕೂಡಾ ತೇಜಿಯಾಗುವ ಸಂಭವ ಕಾಣುತ್ತೆ. ಮುಂದಿನ ತೇಜಿ ಮುಂದಿ ಹಿಂದಿನಿಂದ.

ಎಲ್ಲಾ ಪ್ಲೇಂಟರುಗಳಿಂ ಮತ್ತು ಸಾಹುಕಾರರಲ್ಲಿ ವಿಜ್ಞಾಪನೆ:—ಪೂರ್ಣ ಅಭಿಮಾನವಿಟ್ಟು ಮಹಲು ರವಾನಿಸಿಕೊಡ ಬೇಕಾಗಿಯೂ, ಬಂಡಿ ಮಹಲಿಗೆ ಆಪೇಕ್ಷೆ ಪ್ರಕಾರ ಇತ್ತಟ್ಟಿನವರ ಸ್ನೇಹೋಪಾರದ ಯಾವತ್ತು ಅನುಕೂಲತೆಯನ್ನೂ, ಒದಗಿಸಿಕೊಟ್ಟು ಬಜಾರು ಧಾರಣೆಯಲ್ಲಿ ಆದಷ್ಟು ಜಾಕ್ರತೆಯಿಂದ ವಿಕ್ರಿತಪಡಿಸಿ ಕೊಡುತ್ತೇನೆ.

ತಂತಿ ನಮಸ್ಕಾರ.

BANKER
SHA DHANJI BHAGAW

N. SUBBA P

ಪ್ರಶ್ನೆಯೂ ಜಾತಕವೂ.

ನಮ್ಮಲ್ಲಿ ಕೆಲವರಿಗೆ ಜಾತಕವಿದೆ. ಉಳಿದವರಿಗಂತೂ ಇಲ್ಲ. ಪ್ರಶ್ನೆಯಿಂದರೆ ಆರೂಢವನ್ನು ಪ್ರಮಾಣವಾಗಿರಿಸಿ ಫಲವನ್ನು ಹೇಳುವುದು. ಜಾತಕವೆಂದರೆ ಜನನಸಮಯದ ಲಗ್ನವನ್ನು ತಿಳಿದು ಅದರಿಂದ ಫಲೋಪದೇಶವನ್ನು ಗೈಯುವುದು. ಇಂತಹ ಪರಸ್ಪರ ಭೇದಗಳಿಂದ ಕೂಡಿದವುಗಳು ಜಾತಕ ಮತ್ತು ಪ್ರಶ್ನೆ ಇವೆರಡು. ಇಂತಿರುವುದಾದರೂ ಜಾತಕವಿರುವ ಮತ್ತು ಇಲ್ಲದಿರುವ ಜನರು ಜೋಯಿಸನ ಬಳಿಗೆ ಹೋಗುತ್ತಾರೆ; ಪ್ರಶ್ನೆಯನ್ನು ಕೇಳುತ್ತಾರೆ. ಹೀಗಿರಲು ಜಾತಕವು ಏಕೆ? ಪ್ರಶ್ನೆಯೊಂದು ಸಾಲದೇ? ಜಾತಕವುಳ್ಳವನಿಗೆ ಜಾತಕವೊಂದು ಸಾಲದೇ? ಅವನಿಗೆ ಪ್ರಶ್ನೆಯು ಏಕೆ? ಎಂಬಿತ್ಯಾದಿ ವಿಚಾರಗಳು ಈ ಲೇಖನದ ಶಿರೋನಾಮೆಯನ್ನು ನೋಡಿದೊಡನೆಯೇ ಜನಿಸುವುದು. ಜನಿಸಲು ಕಾರಣವುಳ್ಳುದು. ಇದೇ ವಿಚಾರವು ಒಂದಾನೊಮ್ಮೆ ನನ್ನ ತಲೆಯನ್ನೂ ಬಲವಾಗಿ ಪ್ರವೇಶಿಸಿ ತನ್ನ ಅಧಿಕಾರವನ್ನು ನೆಲೆಗೊಳಿಸಿತು; ತಲ್ಲಣವನ್ನೂ ಗೊಳಿಸಿತು. ಅದುವೇ ನನ್ನನ್ನು ಇಂದಿನ ಈ ಲೇಖನಕ್ಕೆ ಎಡೆಯನ್ನು ಕೊಟ್ಟಿತು.

ಪ್ರತಿಯೊಂದು ಜಂತುವು ಇಹ ಕರ್ಮ ಫಲಾನುಭವವನ್ನು ಅನುಭವಿಸಲು ಜನ್ಮವನ್ನು ತಳೆಯುತ್ತಿದೆ. ಆ ಜನ್ಮದಲ್ಲಿ ಅನುಭವಿಸಿ ಕರ್ಮಫಲವು ಕ್ಷಯಿಸಿದರೆ ಆ ಶರೀರವನ್ನು ತೊರೆದು ಮತ್ತೊಂದು ಶರೀರವನ್ನು ಲಭಿಸುವುದು. ಇಂತಿರಲು ಪೂರ್ವಜನ್ಮದಲ್ಲಿ ಕೃತವಾದ ಶುಭಾಶುಭ ಕರ್ಮದ ಫಲವನ್ನು ಅನುಭವಿಸುವೆವು ಎಂದು ಸಿದ್ಧವಾಯಿತು. ಕತ್ತಲೆಯಲ್ಲಿರುವ ವಸ್ತುವನ್ನು ದೀಪದ ಮೂಲಕ ಕಾಣುವೆವು. ಅಂತೆಯೇ ಜೋಯಿಸನು ಗ್ರಹಗಳ ಮೂಲಕ ಜನ್ಮಕುಂಡಲಿಯಿಂದ ಈ ಫಲವನ್ನು ತಿಳಿಯುವನು. ಇದರಿಂದ ಜ್ಯೋತಿಷದ ಮೇಲ್ಮೆಯು ಉಕ್ತವಾಯಿತು. ಆದರೂ ನಾವು ಶುಭವೋ ಅಶುಭವೋ ಎಂದು ತಿಳಿಯಬಯಸುವ ಕರ್ಮದ ಫಲವನ್ನು ಗ್ರಹರು ಸೂಚಿಸುವರು ಎಂಬ ಒಂದು ಭಾವವು ಈ ಮೊದಲ ವಾಕ್ಯದಿಂದ ತಿಳಿಯಲು ಅಪ್ರಕೃತವಾದರೂ ಯೋಜಿಸಬೇಕಾಯಿತು. ಪ್ರಕೃತವಾಗಿಯೂ ಪರಿಣಮಿಸಿತು.

ಶುಭಮುಹೂರ್ತದಲ್ಲಿ ಮಾಡಿದ ಕರ್ಮದಿಂದ ಸುಖವು ಪರಿಣಮಿಸುವುದು. ಅಶುಭ ಮುಹೂರ್ತದಲ್ಲಿ ಮಾಡಿದ ಕರ್ಮದಿಂದ ದುಃಖವು ಪರಿಣಮಿಸುವುದು. ಈ ಫಲವನ್ನು ಕರ್ತೃವು ಇಹಜನ್ಮದಲ್ಲಲ್ಲದೆ ಭಾವಿಜನ್ಮದಲ್ಲೂ ಅನುಭವಿಸುವನು. ಅದೂ ಅಲ್ಲದೆ ಅವನ ವಂಶೀಯರೂ ಕೂಡ ಅನುಭವಿಸುವರು. ಸುಖ ದುಃಖಗಳು ಬರೇ ಮಾಡುವ ಕರ್ಮದಿಂದ ಮಾತ್ರವಲ್ಲ, ಪ್ರವೃತ್ತಿಕಾಲದಿಂದಲೂ ಸಂಭವಿಸುವವು. ಕಾಲದ ಶುಭಾಶುಭತ್ವದಿಂದ ಸುಖ ದುಃಖಗಳು ಕರ್ತೃವಿಗೂ ಕರ್ತೃವಿನ ವಂಶದವರಿಗೂ ಉಂಟಾಗುವವು. ಆದ್ದರಿಂದ ತಾನು ಅನುಭವಿಸುವ ಸುಖದುಃಖಗಳು ಪೂರ್ವಜನ್ಮಕೃತ ಶುಭಾಶುಭಕರ್ಮಗಳಿಂದಲೂ ಶುಭಾಶುಭಕಾಲಗಳಿಂದಲೂ ಸಂಭವಿಸುವವು. ಅದೂ ಅಲ್ಲದೆ ಆತ್ಮವಂಶೀಯನಿಂದ ಮಾಡಿದ ಕಾಲ ಮತ್ತು ಕರ್ಮಗಳ ಶುಭಾಶುಭತ್ವದಿಂದ ಸುಖವನ್ನೂ ದುಃಖವನ್ನೂ ಅನುಭವಿಸಬಹುದು. ಇಲ್ಲಿ ಇಂತು ಕಾಲವಿಷಯವನ್ನು ನಿರೂಪಿಸಿದ್ದರಿಂದ ಕರ್ಮಗಳ ಶುಭಾಶುಭತ್ವದಿಂದ ಸುಖದುಃಖಾನುಭವವು ಜನಿಸಬಹುದೆಂಬುದು ಕೈಮುತಿಕ ನ್ಯಾಯ ಸಿದ್ಧವು.

ಇಂತು ವಿಚಾರಿಸಲು ಪೂರ್ವಜನ್ಮಕೃತವಾದ ಪುಣ್ಯಪಾಪಗಳ ಪ್ರಾಬಲ್ಯಾತಿಶಯದಿಂದ ಉಂಟಾಗುವ ಮನುಷ್ಯಜನ್ಮದಲ್ಲಿ ಗುಣದೋಷನಿರೂಪಣೆಯೆಂಬುದು ಪ್ರಾಪ್ತಬ್ಧವೆಂದು ಹೇಳಬೇಕಾಗುತ್ತದೆ. ಅದನ್ನು ನಿರೂಪಿಸುವ ಗ್ರಂಥವೇ ಜಾತಕವೆಂದು ಹೇಳಬೇಕಾಗುತ್ತದೆ. ಈ ಎಡೆಯಲ್ಲಿ ಪ್ರಶ್ನೆಯು ನಾವು ಉಣ್ಣುವ ಫಲವು ಪೂರ್ವಜನ್ಮಕೃತಶುಭಕರ್ಮಫಲವೋ ಅಲ್ಲವೇ ಅಶುಭಕರ್ಮಫಲವೋ ಎಂಬುದನ್ನು ತಿಳಿಯಲು ಉಪಯೋಗಿಸಲ್ಪಡುತ್ತದೆ. ಅದೂ ಅಲ್ಲದೆ ಪ್ರಶ್ನೆಯಿಂದ ಈ ಜನ್ಮದಲ್ಲಿ ನಾವು ಯಾವ ಕರ್ಮವನ್ನು ಮಾಡಿರುವೆವು ಎಂಬುದನ್ನು ತಿಳಿಯಲು ಸಾಧ್ಯವಾಗುತ್ತದೆ. ಈಗ ನಾವು ಅನುಭವಿಸುವ ಫಲವು ಪೂರ್ವಕರ್ಮಫಲವೋ ಎಂಬುದು ಎಂತೆಂಬುದನ್ನು ಈ ಎಡೆಯಲ್ಲಿ ಇನ್ನು ವಿವರಿಸಲಿದೆ. ಆದರೆ ಈ ಜನ್ಮದಲ್ಲಿ ಮಾಡಿದ ಕರ್ಮಫಲವು ಭಾವಿ ಜನ್ಮದಲ್ಲಿ ಅನುಭವಿಸುವುದೆಂದು ಪೂರ್ವೋಕ್ತವಾಗಿದ್ದರೂ 'ಅಶ್ಯುತ್ಕಟೈಃ ಪುಣ್ಯಪಾಪೈರಿಹೈವ ಫಲಸುಶ್ನುತೇ' ಎಂಬೀ ನ್ಯಾಯದಿಂದ ವಿರೋಧಪರಿಹಾರವನ್ನು ಮಾಡತಕ್ಕದ್ದು. ಮಾತ್ರವಲ್ಲ ಈ ವಿಷಯದಲ್ಲಿ ವಿಶ್ವಾಮಿತ್ರನ ಬ್ರಾಹ್ಮಣ್ಯಸಿದ್ಧಿ ಮೊದಲಾದುವುಗಳನ್ನು ವಿಚಾರಿಸಿದಲ್ಲಿ ಪೂರ್ವೋಕ್ತ ವಿರೋಧಪರಿಹಾರವೂ ತನ್ನಿಂದ ತಾನೇ ಆಗುವುದು.

ಜಾತಕದಿಂದ ಫಲವನ್ನು ವಿಚಾರಿಸುವಾಗ ಗುಣಫಲಕಾಲವಾಗಿಯೂ ಪ್ರಶ್ನೆಯಿಂದ ದೋಷಕಾಲವಾಗಿಯೂ ತಿಳಿದು ಬಂದರೆ ಈ ಜನ್ಮದಲ್ಲಿ ಮಾಡಿದ ಅಶುಭಕರ್ಮಫಲವೆಂದೂ ಅದಲ್ಲದೆ ಇದಕ್ಕೆ ಸಂಪೂರ್ಣ ವಿರುದ್ಧವಾಗಿ ಜಾತಕದಿಂದ ಫಲವನ್ನು ವಿಚಾರಿಸುವಾಗ ದೋಷಕಾಲವಾಗಿಯೂ ಪ್ರಶ್ನೆಯಿಂದ ಶುಭಕಾಲವಾಗಿಯೂ ತಿಳಿದು ಬಂದರೆ ಇಹ ಜನ್ಮಫಲಾನುಭವವೆಂದೂ ಜೋಯಿಸನು ನಮಗೆ ತಿಳಿಸುವನು. ಮತ್ತು ನಾವು ಅಂತೆಯೇ ತಿಳಿಯತಕ್ಕದ್ದು. ಆರೂಢ, ಉದಯ ಲಗ್ನ, ಚಂದ್ರರಾಶಿ, ಗ್ರಹಭಾವಸ್ಥಿತಿ ಇವುಗಳಿಂದ ಪ್ರಶ್ನೆಯು ಜಾತಕಸಾಮ್ಯವನ್ನು ಹೊಂದಿದರೆ ಪೂರ್ವಜನ್ಮಕೃತವಾದ ಶುಭಾಶುಭಕರ್ಮಗಳ ಫಲವೆಂದೂ ಅರಿಯತಕ್ಕದ್ದು. ಅದಲ್ಲದೆ ಜೋಯಿಸನು ಪ್ರಶ್ನೆಗೂ ಜಾತಕಕ್ಕೂ ಒಂದೇ ರೀತಿಯಿಂದ ಫಲೋಪದೇಶವನ್ನು ಮಾಡತಕ್ಕದ್ದು. ಈ ವಿಷಯವಾಗಿ ನಮ್ಮ ಪೂರ್ವಾಚಾರ್ಯರುಗಳು

'ಯಥೋಕ್ತಂ ಜಾತಕೇ ಸರ್ವಂ
ತದ್ವತ್ ಪ್ರಶ್ನೇಪಿ ಚಿಂತಯೇತ್'

ಎಂಬುದಾಗಿ ಹೇಳಿರುವರು. ಇದಲ್ಲದೆ ಇನ್ನೊಬ್ಬ ಪೂರ್ವಾಚಾರ್ಯನು ಪ್ರಶ್ನೆಯ ವಿಷಯದಲ್ಲಿ ಜನ್ಮಸಾಮ್ಯತೆಯನ್ನು ಹೇಳಿರುವನು. ಅದನ್ನೇ ಈ ಕೆಳಗೆ ಉದ್ಧರಿಸುವೆನು.

ಸಂಪ್ರೇರ್ಯಮಾಣಸ್ತ್ವವಶಃ ಶರೀರೀ
ಪ್ರಸಹ್ಯ ದೈವೇನ ಶುಭಾಶುಭೇನ ।
ಜ್ಯೋತಿರ್ವಿದಃ ಸನ್ನಿಧಿಮೇತಿ ಯಸ್ಮಾತ್
ಪ್ರಶ್ನೋಪ್ಯತೋ ಜನ್ಮಸಮಃ ಫಲೇಷು ॥

(ಸಾರ:—ಶುಭವೋ ಅಶುಭವೋ ಅನುಭವಿಸುವ ಕಾರಣ ದೈವಪ್ರೇರಣೆಯಿಂದ ಪೃಚ್ಛಕನು ಜ್ಯೋತಿಷಿಕನ ಬಳಿಕ ಹೋಗುವನು. ಈ ಕಾರಣದಿಂದ ಪ್ರಶ್ನೆಯು ಜಾತಕಕ್ಕೆ ತುಲ್ಯವಾದುದೇ ಸರಿ. ಏಕೆಂದರೆ ದೈವಪ್ರೇರಣೆಯಿಂದ ಕರ್ಮಫಲಾನುಸಾರವಾಗಿ ಮನುಷ್ಯನು ಜನಿಸುವಂತೆಯೇ ಜ್ಯೋತಿಷಿಕನ ಸವಿಾಪಕ್ಕೆ ಪೃಚ್ಛಕನು ದೈವಪ್ರೇರಣೆಯಿಂದ ಶುಭಾಶುಭವನ್ನು ತಿಳಿಯಲು ಬರುವನು. ಆದ್ದರಿಂದ ಪ್ರಶ್ನೆಯು ಜಾತಕತುಲ್ಯವಾದ್ದು ಎಂಬುದು ಸಿದ್ಧ.)

ಇದುವರೆಗೆ ಇಲ್ಲಿ ಬರೆದ ವಿಷಯಗಳಿಂದ ಜಾತಕ ಮತ್ತು ಪ್ರಶ್ನೆಗೆ ಭೇದವಿದೆಯೋ ಇಲ್ಲವೇ ಎಂಬುದು ಇನ್ನು ವಾಚಕರೇ ಊಹಿಸಲಿ. ಎಂದು ಇಲ್ಲಿಗೆ ಈ ವಿಷಯವನ್ನು ಮುಗಿಸುವೆನು.

ಎಮ್. ಸುಬ್ರಾಯನ್.

(೧೧ನೇ ಪುಟದಿಂದ)

ವವು. ಈ 35 ಮೈಲಿಯ ಪಯಣಿನಲ್ಲಿ ಇಲ್ಲಿನಮಗೋಸ್ಕರ ಕಷ್ಟಪಟ್ಟು ಇಲ್ಲಿಂದ ಪೆನ್ಶೆನು ಯಾ ರಜೆ ಪಡಕೊಂಡು ಹೋದ ಆಂಗ್ಲೇಯರ ವೇತನಪೆನ್ಶನುಗಳು, ರೈಲ್ವೆ ಜಲಾಶ್ರಯಗಳ ಬಗ್ಗೆ ಆಂಗ್ಲದೇಶದಿಂದ ಇಲ್ಲಿಯವರು ಸಾಲವಾಗಿ ಪಡಕೊಂಡ ಬಂಡವಾಳದ ಪಾವತಿಗಳು, ನಮ್ಮ ಹ್ಯಾ ಕಮ್ಮಿಶನರ್ ವಗೈರೆ ಅಧಿಕಾರಿಗಳ ಸಂಬಳಗಳು ಎಲ್ಲಾ ಸೇರಿಕೊಂಡಿವೆ.

1 ಶಿ. 4 ಪೆನ್ಸ್ ದರವನ್ನು ನಿಶ್ಚಯಿಸಿದೊಡನೆ ಸರಕಾರದವರು ಹೆಚ್ಚಿನ ರೂಪಾಯಿ ಉತ್ಪನ್ನವನ್ನು ಸಂಪಾದಿಸಿಕೊಳ್ಳುವ ಬಗ್ಗೆ ನಮ್ಮ ಮೇಲೆ ತೆರಿಗೆಗಳನ್ನು ಹೆಚ್ಚಿಸಬೇಕಾಗಬಹುದು. ಹೊರಗಣ ಸರಕುಗಳು ಇಲ್ಲಿಗೆ ಬರಲಿಕ್ಕೂ ಸ್ವಲ್ಪ ತೊಂದರೆಯಾಗುವುದರಿಂದ ಇಲ್ಲಿಯ ಬಡಜನರಿಗೆ ಇನ್ನೂ ಕಷ್ಟಗಳು ಹೆಚ್ಚಬಹುದೆಂದೂ ಸರಕಾರದವರ ಅಭಿಪ್ರಾಯವಾಗಿದೆ. ಇಕ್ಕಡೆಯ ಚರ್ಚೆಗಳನ್ನೆಲ್ಲಾ ಆಗಿಂದಾಗ್ಗೆ ಪತ್ರಿಕೆಗಳಲ್ಲಿ ಓದಬಹುದಾದ್ದರಿಂದ ವಾಚಕರಿಗೆ ಅವುಗಳ ಯಥಾರ್ಥವನ್ನು ಕಂಡುಹಿಡಿಯಲಿಕ್ಕೆ

ದುಃಖೀ ಭಾರತ ನಿವಾಸಿ

ಭರತಖಂಡದ ಪ್ರಸಿದ್ಧ ಯೋಗಿರಾಜರಾದ ಮುಂಗಲಗಿರಿ
ಉಪದೇಶ

ಪ್ರಿಯ ಭಾರತವಾಸಿಗಳೆ!

ಈ ಕಾಲದಲ್ಲಿ ಹಾಲು, ತುಪ್ಪ ಮೊದಲಾದ ಪೌಷ್ಟಿಕ ಭರತಖಂಡದ ಜನರು ಬಹಳ ದುರ್ಬಲರಾಗಿದ್ದಾರೆ. ಮತ್ತು ರೋಗಿಗಳಾಗಿದ್ದಾರೆ. ಇವೇ ಕಾರಣಗಳಿಂದ ಅವರು ಆಡು ಕುರಿಗಳಂತೆ ತುತ್ತಾಗುತ್ತಿರುವರು. ಆದ್ದರಿಂದ ಇಂದು ನಾನು ಆ ರೋಗ ರಕ್ಷೆಯನ್ನು ಬೋಧಿಸುತ್ತೇನೆ. ಗಮನವಿಟ್ಟು ಕೇಳಿರಿ: ಮತ್ತು ನನ್ನ ಉಪದೇಶವನ್ನು ತಂದುಕೊಳ್ಳಿರಿ: ಸೇಮುಲ್ ಕಾಮೂಸ್ಲಾ, ಸೂಖಸಿಂಘೂಡ, ಶೀತಲ್‌ಜಿ ಬಹ್ಮನ್‌ಸುರ್ಖ್, ಬೀಜ್‌ಬಂದ್, ಈಸಬ್‌ಗೋಲಿನ ಹೊಟ್ಟು, ರೂವಿಾವ ಸಫೇದ್ ಇವುಗಳನ್ನು ಎರಡೆರಡು ತೊಲಾ ತೂಕಿಸಿಕೊಂಡು ಕುಟ್ಟಿ ನುಣ್ಣಗೆ ಬ್ರಾಹ್ಮಿ ಹಸಿ ಶಂಖ ಪುಷ್ಪಿ ಮತ್ತು ಹಸಿಜೌಮುಖ ಗೋಖರೂವಿನ ರಸದಲ್ಲಿ 'ಭಾವನಾ'ಗಳನ್ನಾಗಿ ವಿಂಗಡಿಸಿ ನೆರಳಿನಲ್ಲಿ ಒಣಗಿಸಬೇಕು. ಇದನ್ನು ಬಿಳಿ ಪೌತಯಾರಿಸಿದ ವಸಂತ ಕುಸುಮಾಕರ ರಸ ಇಪ್ಪತ್ತು ರತ್ತಿ ಮತ್ತು ಇಪ್ಪತ್ತು ತೊಲೆ ಮಿಸೇರಿಸಿ ಹಸುವಿನ ಧಾರೋಷ್ಣ ಹಾಲಿನಲ್ಲಿ ಪ್ರಾತಃಕಾಲ ಮತ್ತು ಸಾಯಂಕಾಲ ಮಾಡತಕ್ಕದ್ದು. ಈ ಅದ್ವಿತೀಯ ಸಿದ್ಧೌಷಧವನ್ನು ಎಷ್ಟು ಕೊಂಡಾಡಿದರೂ ಮೊದಲನೆಯ ಮಾತ್ರೆಯು ಗಂಟಲಿನೊಳಕ್ಕೆ ಇಳಿಯುತ್ತಲೇ ನರನಾಡಿಗಳಿಗೆಲ್ಲಾ ವೇಗದಿಂದ ಉತ್ತಮವಾದ ಪರಿಣಾಮವನ್ನು ಕೊಡುತ್ತದೆ. ಏಳು ದಿನಸಗಳಲ್ಲಿ ಶುದ್ಧ ರಕ್ತವು ಸಂಚರಿಸತೊಡಗುವುದು; ೨೧ ದಿನಸಗಳಲ್ಲಿ ಕೆನ್ನೆಯು ತಾ ಮತ್ತು ೪೨ ದಿನಸಗಳ ಸೇವನೆಯಿಂದ ಎಂತಹ ನಿರ್ಬಲತೆ ನಪುಂಸಕತ್ವ ಶರೀರಕ್ಕೆ ಅಪಾರವಾದ ಬಲವು ಲಭಿಸುವುದು. ಸ್ತ್ರೀಯರ ಪ್ರದರ ಮೊದಲಾದ ಇದರ ಸೇವನೆಯಿಂದ ಮಾಯವಾಗಿ ಹೋಗುತ್ತವೆ. ಇಂಥಾ ರಾಮಬಾಣ ದಿವ್ಯ ಔಷಧಿಯ ಆಯುರ್ವೇದಾಚಾರ್ಯ ಪಂಡಿತ ಬಾಲದತ್ತ ತ್ರಿಪಾಠಿಯವರು ಮುಕ್ತಕಂಠದಿಂದ ಪ್ರಶಂತಾವು ೨೦೭ ರೋಗಿಗಳನ್ನು ಈ ಔಷಧಿಯಿಂದ ಆಶಾತೀತವಾಗಿ ಗುಣಪಡಿಸಿರುತ್ತಾ ಸಂತೋಷ ವಾರ್ತೆಯನ್ನು ಸೂಚಿಸಿದ್ದಾರೆ. ಪ್ರಸಿದ್ಧ ಸ್ಯಾತಕರಾದ ಭಿಷಗಾಚಾರ್ಯ ಪುರುಷೋತ್ತಮ ವೈದ್ಯ ಶಾಸ್ತ್ರಿಯವರು ವೀರ್ಯ ಸಂಬಂಧವಾದ ರೋಗಿಗಳಿಗೆ ಶೀಘ್ರ ಕಾರಿಯಾದ ಔಷಧಿಯು ಇದೊಂದೇ ಎಂಬುದಾಗಿ ಹೇಳಿರುವರು. ಫಿದಾಯಿತಿಬ್ ಫನಫಿಲ್ಲಾ ಶಾರವರು ೧೨೯ ರೋಗಿಗಳಿಗೆ ಇದು ಅದ್ವಿತೀಯ ಗುಣಲಾಭವನ್ನು ಕೊಡಲಾಗಿ ತಿಳಿಸುತ್ತಾರೆ. ಡಾಕ್ಟರ್ ಹರಿಹರಸಿಂಹರು ತಮ್ಮ ರೋಗಿಗಳಿಗೆ ಈ ಔಷಧಿ ಕೊಡುತ್ತಾರೆ. ಮತ್ತು ಶ್ರೀ. ದೇವೀದೀನರಿಗೆ ವೃದ್ಧಾಪ್ಯದಲ್ಲಿ ಸಂತಾನ ಲಾಭವಾಗಿದೆ. ಓ ಭಾರತ ನಿವಾಸಿಗಳೇ, ನೀವು ಈ ಔಷಧಿಯನ್ನೇ ಯಾವ ಋತುವಿನಲ್ಲಿಯೇ ತಯಾರಿಸಿಕೊಂಡು ಸೇವನೆ ಮಾಡಿರಿ. ಇದರ ಸೇವನೆಯಿಂದ ಅದ್ಭುತವಾದ ಬಲವೀರ್ಯವೃದ್ಧಿಯಾಗಿ ನೀವು ಆಶ್ಚರ್ಯಚಕಿತರಾಗುವಿರಿ. ನೀವು ಇದನ್ನು ಭರತಖಂಡದ ಮೂಲೆಗಳಲ್ಲಿ ಪ್ರಚಾರಪಡಿಸಿರಿ—ಇದೇ ನನ್ನ ವಿನಂತಿ. ಓಂ ಶಾಂತಿ ಶಾಂತಿ.

ಟಿಪ್ಪಣಿ:—ಸನ್ ೧೮೯೦ನೆಯ ವರ್ಷ ಯೋಗಿರಾಜ ಮುಂಗಲಗಿರಿಯವರು ಭರತ್‌ಸಾ ಎಂಬ ದಲ್ಲಿ ಆರೋಗ್ಯ ರಕ್ಷಣೆಗಾಗಿ ಕೊಟ್ಟ ಒಂದು ಉಪದೇಶದ ಸಾರಾಂಶವನ್ನೇ ಮೇಲೆ ಸಮಾಪ್ತ ಅದರಿ ಅಂದು ಹೇಳಿದ ಅವರ ಪ್ರಶಂಸೆಯು ಇಂದಿಗೂ ಅನ್ವಯಿಸುತ್ತದೆ. ಈ ಔಷಧವನ್ನು ಮಾಡಲು ಸಾಧ್ಯವಿಲ್ಲದವರಿಗೆ ಒದಗಿಸಿಕೊಡುವ ನಿಮಿತ್ತ ಈ ಔಷಧಿಯು ನಮ್ಮ ಹತ್ತಿರ ಸಿದ್ಧ ಸಂಪೂರ್ಣ ಅನುಪಾನ ಚಿಕಿತ್ಸೆಗೆ ಅಂಚೆ ವೆಚ್ಚ ಸಹಿತ ರೂ. ೫—೨—೦. ಹೆಚ್ಚಿನ ವಿವರಗಳಿಗೆ ವ್ಯವಹಾರ (ಇಂಗ್ಲೀಷಿನಲ್ಲಿ) ಮುಖಾಂತರ ತಿಳಿದುಕೊಳ್ಳುವುದು.

ಇತಿ ಸೇವಕ:—

Thakur Prathuvir Singh,
Post Chattarsa, No. 97,
CAWNPORE.

ಠಾಕೂರ್ ಪೃಥುವೀರ ಸಿಂ
ಪೋಸ್ಟ್ ಭರತ್‌ಸಾ, ನಂ. ೯೭
ಜಿಲ್ಲಾ ಕಾನಪುರ.

ಜಿಲ್ಲಾ ಉಪಾಧ್ಯಾಯರ ಸಂಘದ ವಾರ್ಷಿಕ ಮಹಾಸಭೆ.

ತಾ. ೧೫—೧—೩೬ನೇ ಬೆಳಿಗ್ಗೆ ಗಂಟೆ ೪ಕ್ಕೆ ಡಾ. ವಿಟ್ಟಲ ಶೆಟ್ಟರ ಅಧ್ಯಕ್ಷತೆಯಲ್ಲಿ ಈ ಸಭೆಯು ಸೇರಿತು. ಕಾರ್ಯದರ್ಶಿಯರು ತಮ್ಮ ವರದಿಯನ್ನು ಓದಿ ಅದು ಮುಂಜೂರು ಮಾಡಲ್ಪಟ್ಟಿತು. ಸಂಘದ ಕಾರ್ಯವನ್ನು ತಮ್ಮ ಡ್ಯೂಟಿಯನ್ನಾಗಿ ಲೆಕ್ಕಕ್ಕೆ ಹಿಡಿಯಬೇಕಾಗಿ ಕಾರ್ಯದರ್ಶಿಯವರು ಜಿಲ್ಲಾ ಬೋರ್ಡು ಅಧ್ಯಕ್ಷರಿಗೆ ಬರೆದುಕೊಂಡಾಗ ಅದು ನಿರಾಕರಿಸಲ್ಪಟ್ಟರೂ, ಈಗ ಫಳಿಮಾರಿನಲ್ಲಿ ಸೇರಲಿಕ್ಕಿರುವ ಸಭೆಗೆ ಉಪಾಧ್ಯಾಯರು ಹಾಜರಾಗುವುದು ಡ್ಯೂಟಿಯಾಗಿ ಭಾವಿಸಲ್ಪಡುವುದೆಂದೂ ಹುಕುಂ ಹೊರಟ ಬಗ್ಗೆ ವರದಿಯಲ್ಲಿ ತೃಪ್ತಿಯು ಸೂಚಿಸಲ್ಪಟ್ಟಿತು. ಅನಂತರ ಬೆಸಿಲಿನಿಂದಾಗಿ ಸಭೆಯು ಮೂರನೆಯ ದಿನ ಬೆಳಿಗ್ಗೆ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಸೇರಬೇಕಾಗಿ ಮುಂದರಿಸಲಾಯಿತು.

ತಾ. ೧೭—೧—೩೬ರ ಬೆಳಿಗ್ಗೆ ವಿದ್ಯಾರ್ಥಿ ಭವನದಲ್ಲಿ ಸಭೆಯು ಪುನಃ ಸೇರಿತು. ಸುಮಾರು ೫೦ ಮಂದಿ ಉಪಾಧ್ಯಾಯ-ಉಪಾಧ್ಯಾಯಿನಿಯರು ಹಾಜರಿದ್ದರು. ಶ್ರೀ. ಕಟಪಾಡಿ ಶ್ರೀನಿವಾಸ ಶಿಣ್ಯೆಯವರು ಈ ಕೆಳಗಿನ ಠರಾವನ್ನು ಸಭೆಯ ಮುಂದಿರಿಸಿದರು. 'ಪ್ರಾಥಮಿಕ ಶಿಕ್ಷಣಾಭಿವೃದ್ಧಿಯನ್ನು ಸಾಧಿಸುವುದಕ್ಕೋಸ್ಕರ ಈಗಿನಕ್ಕಿಂತಲೂ ನೂರಾರು ಪಾಲು ಹೆಚ್ಚು ಹಣದ ಅವಶ್ಯಕತೆ ಇದ್ದು ಅದಕ್ಕೋಸ್ಕರ ಸರಕಾರದ ಧೋರಣೆಯು ಬದಲಾಗುವುದು ಅಗತ್ಯವಾಗಿದೆಯೆಂದು ಪ್ರಾಥಮಿಕ ಶಾಲಾ ಉಪಾಧ್ಯಾಯರ ಈ ಮಹಾಸಭೆಯು ಸೂಚಿಸುತ್ತದೆ. ಮತ್ತು ಆ ಸಂಬಂಧ ಉಪಾಧ್ಯಾಯರು ತಮ್ಮ ಜವಾಬ್ದಾರಿಯನ್ನೂ ದೇಶದ ಭಾವೀ ಕಲ್ಯಾಣವನ್ನೂ ಲಕ್ಷ್ಯದಲ್ಲಿಟ್ಟುಕೊಂಡು ಉಚಿತ ರೀತಿಯಿಂದ ವರ್ತಿಸಬೇಕಾಗಿ ಅವರನ್ನು ಈ ಸಭೆಯು ವಿನಂತಿ ಮಾಡಿಕೊಳ್ಳುತ್ತದೆ.' ಠರಾವನ್ನು ಸಭೆಯ ಮುಂದಿಡುವಾಗ ಶ್ರೀ. ಶ್ರೀನಿವಾಸ ಶಿಣ್ಯೆಯವರು ಅರ್ಥಗರ್ಭಿತವಾದ ಭಾಷಣ ಮಾಡಿದರು. ಉಪಾಧ್ಯಾಯರ ಸಂಬಂಧದ ಹಲವು ನಿರ್ಣಯಗಳು ಮುಂಜೂರಾದ ಬಳಿಕ ಅಧ್ಯಕ್ಷರಾದ ಡಾ. ವಿಟ್ಟಲ ಶೆಟ್ಟರ ಧೋರಣೆಯಲ್ಲಿ ಉಪಾಧ್ಯಾಯರು ಸಂಘವನ್ನು ಬಲಪಡಿಸಿ ತಮ್ಮ ಅಭ್ಯುದಯಕ್ಕೆ ಕೆಲಸ ಮಾಡಬೇಕು; ಕಾಂಗ್ರೆಸ್ ಪಕ್ಷದವರಿಗೆ ಬೇಕಾದ ಸಹಾಯ ಮಾಡಲು ಸಿದ್ಧ ಇತ್ಯಾದಿ ಅಧ್ಯಕ್ಷರ ಭಾಷಣವಾದ ಬಳಿಕ ಧನ್ಯವಾದನೆ ಸಭೆಯು ಮುಕ್ತಾಯವಾಯಿತು.

ವಾಗಿ ತೆಗೆದುಹಾಕಬೇಕು. ಬೋರ್ಡಿನ ಗಳು ಸರಿಯಾಗಿ ಕೆಲಸ ಮಾಡಿದರೆ ಇದು ಟು. ಹಿಂದೆ ಸಿಕ್ಕುತ್ತಿದ್ದ ಕಂಪೆನ್ಸೇಷನ್ ಗ್ರಾಪುನಃ ಪಡೆಯುವಂತೆ ಯತ್ನಿಸಬೇಕು. ಪ್ರಗಾ ಯಾಗುವಾಗ ಉಪಾಧ್ಯಾಯರಿಗೆ ಭತ್ತೆ ಕೊಡಿಸು ಮಧುರಾ ಬೋರ್ಡಿನವರು ಡಿಪಾರ್ಟ್‌ಮೆಂ ಖರ್ಚಿನ ಬಗ್ಗೆ ಎರಡು ಲಕ್ಷದ ಸಾಲವನ್ನು ದಿಂದ ಪಡೆದರು. ನಮ್ಮ ಬೋರ್ಡಿನಲ್ಲಿ ಯರು ಬೋರ್ಡಿಗೆ ಬರಕೊಳ್ಳುವ ಮನಸ್ಸಿ ಸ್ಸರಿಂದಲೇ ತೀರ್ಮಾನಿಸಲ್ಪಟ್ಟು ಬೋರ್ಡಿ ಬಾರದಿರುವುದು ಸರಿಯಲ್ಲ, ಉಪಾಧ್ಯಾಯ ಸಂಘವನ್ನು ಬಲಪಡಿಸಿ ತಮ್ಮ ಅಭ್ಯುದಯ ಕೆಲಸ ಮಾಡಬೇಕು; ಕಾಂಗ್ರೆಸ್ ಪಕ್ಷದ ರಿಗೆ ಬೇಕಾದ ಸಹಾಯ ಮಾಡಲು ಸಿದ್ಧ ಇತ್ಯಾದಿ ಅಧ್ಯಕ್ಷರ ಭಾಷಣವಾದ ಬಳಿಕ ಧನ್ಯವಾದನೆ ಸಭೆಯು ಮುಕ್ತಾಯವಾಯಿತು.

ATTENTION HOBBYISTS

Join Lanka Stamp Leag Members worldwide. All hob exchanges. A boon to Philateli Exceptional facilities for excha and correspondence. Yearly Re. Sample journal 2 as.

One SCARCE JUBILEE fre those sending 6 as. for 50 d stamps. Stamps: 25 diff. Persia as., 6 Charkhari 4 as., 20 Coc 8 as., 15 Hyderabad 6 as., Travancore 6 as., 20 Patiala 10 a 20 Gwalior 10 as., 3 Jaipur 3 a 7 Nepal Re. 1/4, 5 Bijawar 3 a 3 Soruth 2½ as., 6 Indore 8 4 Bhopal 4 as. COMPLETE SE India Jubilee at Re. 1/5, New I at Re. 1/6, Ceylon Jubilee Set Rs Hongkong Jubilee Set Rs. 2/ Britain Jubilee Set 6 as., C Jubilee Se all used withr oder.

INGS

spirit of the coming season
epest appreciation of the
confidence and goodwill
d our bank, we extend to all our
ers and other friends our sincer-
hes for a HAPPY NEW YEAR.
days be filled for YOU and
n cheer and happiness.

Estd: 1906

ANARA BANK
LIMITED.

ಕಂಠೀರವ

(ವಸಂತತಿಲಕವೃತ್ತಮ್) (ಚೌಪದಿ)

ೀತಿನಿಪುಣಾ ಯದಿ ವಾ ಸ್ತುವಂತು । ನಿಂದಿಸಲಿ ವಂದಿಸಲಿ, ಸಂದ ಧೀರರು ತಾ- ।
ನಾವಿಶತು ಗೆಚ್ಛತು ವಾ ಯಥೇಷ್ಟಮ್ ॥ ವಿಂಧಿರೆಯು ಹೊಂದಿರಲಿ ನಂದಿರಲಿ, ಮತ್ತಾ ॥
ಮರಣಮಸ್ತು ಯುಗಾಂತರೇ ವಾ । ಇಂದಿಗೊ ಯುಗಾಂತರಕೊ ಬಂದಿರಲಿ ಮರಣಂ, ।
ಧೀ ಪ್ರವಿಚಲಂತಿ ಪದಂ ನ ಧೀರಾಃ ॥ ಹಿಂದಿಡರು ನ್ಯಾಯಪಥದಿಂದೊಂದು ಚರಣಂ। ॥
[ಭರ್ತೃಹರಿ. M. N.

ಮಂಗಳೂರು, ತಾರೀಕು ೨೨—೧—೧೯೫೭ [ಲಳ
ಲಜಿಲ ಧಾತು ಸಂವತ್ಸರದ ಪುಷ್ಯ ಶು। ೧೦ ಶುಕ್ರವಾರ

ಚುನಾವಣೆಯ ತಯಾರಿ.

ಸಮೀಪಿಸುತ್ತ ಬಂದಿತು. ಉಮೇದುವಾರರು, ನೊಮಿನೇಶನ್ ಪತ್ರಗಳನ್ನು ತು. ಉಮೇದುವಾರರಲ್ಲಿ ಹೊಸ ಮುಖಗಳು ಯಾವುದೂ ಇದ್ದ ಹಾಗಿಲ್ಲ. ನ್ನು ಅಂದಿನಿಂದಲೂ ನಾವು ಕೇಳುತ್ತಿದ್ದೆವೋ, ಸಾಮಾನ್ಯ ಅವರೇ ಈಗ, ಈ ೇತ್ರದಲ್ಲಿ ಕಾಲಿಟ್ಟಿರುವರು. ಹೋರಾಡಲು ಸೊಂಟ ಕಟ್ಟಿರುವರು.

ನಾವಣೆಯ ಕಾರ್ಯಕಲಾಪಗಳು ನಮ್ಮ ಜಿಲ್ಲೆಯಲ್ಲಿ ಆರಂಭವಾದುದು ಈಗಲ್ಲ; ಿಂದಲೇ ಚುನಾವಣೆಯ ಗಡಿಬಿಡಿಯು ಅಲ್ಲಲ್ಲಿ ಕೇಳಬರುತ್ತಿದ್ದಿತು. ಅದರಲ್ಲಿಯೂ ು ತಿಂಗಳಿಂದಂತೂ ಈ ಕೆಲಸವು ಬಹಳ ಜೋರಿನಿಂದ ನಡೆಯುತ್ತಿದೆ. ಉಮೇದು ವರು ತಮ್ಮ ಛರ್ಕದ ಗ್ರಾಮಗ್ರಾಮಗಳಿಗೆ ನುಗ್ಗಿದ್ದಾರೆ. ಅಲ್ಲಿನ ಮತದಾರರನ್ನು ಡಿಸಿದ್ದಾರೆ. ಮಹಾಸಭೆಗಳನ್ನು ಏರ್ಪಡಿಸಿ ಭಾಷಣಗಳನ್ನು ಕೊಟ್ಟಿದ್ದಾರೆ. ಪಾರ್ಟಿಯನ್ನು, ತಾವೇ ಸಾಕಾದಷ್ಟೂ ಬೇಕಾದಷ್ಟೂ ಹೊಗಳಿಕೊಂಡಿದ್ದಾರೆ; ೀದುವಾರರ ಮೇಲೂ ಅವರ ಪಾರ್ಟಿಯ ಮೇಲೂ ತಕ್ಕಷ್ಟು ಕೆಸರೆರಚಲೂ ಪ್ರಯ ; ಈ ಕಾರ್ಯಗಳಲ್ಲೆಲ್ಲ ಉಮೇದುವಾರರು ತಾವೇ ಅಲ್ಲದೆ, ತಮ್ಮ ಕಡೆಯ ನ್ನೂ, ದಲ್ಲಾಲರನ್ನೂ ನಾನಾ ರೀತಿಯಿಂದ ಉಪಯೋಗಮಾಡಿಕೊಂಡಿದ್ದಾರೆ. ಈ ಶ–ಭೂಷಣೆಯ ಪ್ರಚಾರ್ಯಕಾರ್ಯದಲ್ಲಿ ಯಾರು ಹೆಚ್ಚು, ಯಾರು ಕಡಿಮೆ ಎಂದು ದಾರರು ತಿಳಿಯುವುದು ಕಷ್ಟವಾಗಿದೆ. ಕಾರಣ, ವಾಗ್ಜಾಲವೂ, ಶಬ್ದಾಡಂಬರವೂ ಮತ ರ ಮನಸ್ಸನ್ನು ಅಲ್ಲೋಲಕಲ್ಲೋಲ ಮಾಡಿದಂತಿದೆ. ಯಾರ ಮಾತು ಎಷ್ಟು ಮಟ್ಟಿಗೆ ಜ ಎಂದು ತಿಳಿಯುವುದೇ ಸಂದಿಗ್ಧವಾಗಿದೆ, ಹೀಗಿದೆ ನಮ್ಮ ಇಂದಿನ ಮತದಾರರ ಸ್ಥಿತಿ; ವರ ಮನಸ್ಸಿನ ಗತಿ!

ಚುನಾವಣೆ ಎಂಬುದು ಮತದಾರರ ಭಾಗಕ್ಕೆ ಅದೊಂದು ದೊಡ್ಡ ಪೀಡೆಯಾಗಿ ಪರಿಣಮಿ ಥೆ. ಇರುವ ಒಂದೇ ಒಂದು ಓಟಿನ ಭಿಕ್ಷೆಗಾಗಿ ಕೇಳಲು ಬರುವವರೆಷ್ಟು ಮಂದಿ! ಇರುವ ೀ ಓಟನ್ನು ಅದೆಷ್ಟು ಮಂದಿಗಾದರೂ ಕೊಡಬಹುದು? ಕೊಡಲು ವಾಗ್ದಾನ ಮಾಡ ದು? ಒಂದೇ ಡಿವಿಜನಿನ ಇಬ್ಬರೋ, ಮೂವರೋ ಉಮೇದುವಾರರಲ್ಲಿ ಎಲ್ಲರೂ ಬಂದು ವಾಗ, ಕೇಳಿಸುವಾಗ, ಮತದಾರರು ಯಾರಿಗೆ ಓಟ್ ಕೊಡುವೆವೆನ್ನಬೇಕು? ಯಾರಿಗೆ ಾಡುವುದಿಲ್ಲವೆನ್ನಬೇಕು? ಅದೇ ಮತದಾರರೂ, ಸ್ವಲ್ಪ ಬುದ್ಧಿಯನ್ನು ಉಪಯೋಗಿಸಿಕೊಂಡು, ಂದವರಿಗೆಲ್ಲರಿಗೂ 'ನಿಮಗೇ ನಮ್ಮ ಓಟ್' ಎಂದು ಸಮಾಧಾನ ಹೇಳಿ ಕಳುಹಿಸಿದ ನಿದರ್ಶನ ಳಾಪರೂ ಅಲ್ಪಸ್ವಲ್ಪವಿರಲಿಕ್ಕಿಲ್ಲ. ಹೀಗೆ ವಾಗ್ದಾನವಾದ ಓಟುಗಳ ಸಂಖ್ಯೆಯನ್ನು ಪ್ರತಿ ಬ್ಬ ಉಮೇದುವಾರನೂ ತನಗೆಂದೇ ಲೆಕ್ಕಹಾಕಿದರೆ, ಆ ಸಂಖ್ಯೆ ಆ ಡಿವಿಜನಿನ ಮತದಾರರ ಒಟ್ಟು ಸಂಖ್ಯೆಯಿಂದಲೂ ಹೆಚ್ಚಾಗಿಯೇ ತೋರಬಹುದೇನೋ! ಪ್ರತಿಯೊಬ್ಬ ಉಮೇದುವಾ ಸಿ ಜಯಿಸುವೆನೆಂದು ಧೈರ್ಯಗೊಳ್ಳಬಹುದೇನೋ! ಆದರಿದು ಶ್ರೀಮತಿಪರಿಣಯದ ಾರದ–ತುಂಬುರರ ಮುಖಗಳ ಸಾದೃಶ್ಯವಾದೀತೆಂದು ಅವರಿಗೀಗಲೇ ಹೇಗೆ ತಿಳಿಯಬೇಕು? ಶಾಪ!

ಚುನಾವಣೆಯ ಕಾರ್ಯದಲ್ಲಿ ಆಯಾ ಉಮೇದುವಾರರಿಗೆ ತಮ್ಮ ಯೋಗ್ಯತೆ, ದೇಶಸೇವೆ, ುಂದಿನ ಕಾರ್ಯಕ್ರಮ ಇವುಗಳ ಕುರಿತು ಇದ್ದಂತೆ ಮತದಾರರಿಗೆ ತಿಳಿಯಪಡಿಸಿ, ಅವರನ್ನು ತಮ್ಮ ರ್ಥವಾಗಿ ಒಲಿಸಿಕೊಂಡು ತನ್ಮೂಲಕ ಅವರ ಮತವನ್ನು ಸಂಪಾದಿಸುವ ನ್ಯಾಯವಾದ ಹಕ್ಕಿದೆ. ದಾರರನ್ನು ಒತ್ತಾಯಪಡಿಸಿ, ಬಲಾತ್ಕರಿಸಿ, ಹಿಂಸಿಸಿ, ಚತುರೋಪಾಯಗಳನ್ನು ಹೂಡಿ ಮೇದುವಾರರು ಓಟ್ ಪಡೆಯಲು ಯತ್ನಿಸುವುದು ಎಂದೂ ನ್ಯಾಯಸಮ್ಮತವಲ್ಲ. ಅದು ಲಿಕ್ಕೆ ಬರುವ ಇಲ್ಲ. ನ್ಯಾಯವಿರೋಧವಾದ ಮಾರ್ಗಗಳಿಂದ ಓಟ್ ಪಡೆಯಲು ಯತ್ನಿ ನಿಷ್ಕೂರದಿಂದ ತಪ್ಪಲು, ಉಮೇದು ಲು ಮ

ನೆಯ ಮಾರ್ಗವನ್ನು ಮತದಾರರಿಗೆ ಕಲಿಸಲು ಪ್ರಯತ್ನಿಸಿದರೆ, ಮತದಾರರಾದರೂ ಅದನ್ನು ಕಲಿಯದೆ, ಕಲಿತು ಕೊನೆಗೆ ಗುರುಗಳಿಗೇ ತಿರು ನಾಮ ಹಾಕದೆ ಇದ್ದಾರು ಹೇಗೆ?

ಪ್ರಕೃತಪರಿಸ್ಥಿತಿಯಲ್ಲಿ ನನ್ಮ ಜಿಲ್ಲೆಯ ಮೂರು ಡಿವಿಜನುಗಳಲ್ಲಿಯೂ ಚುನಾವಣೆಯ ತಯಾರಿಯ ಸದ್ದು ಎಲ್ಲೆಲ್ಲಿಯೂ ಕೆವಿ ಕೆವ್ವು ಡಾಗುವಂತೆ ಕೇಳಿಬರುತ್ತಿದೆ. ಇದರ ಪರಿ ಣಾಮವಾಗಿ ಜಿಲ್ಲೆಯ ಜಾತಿ-ಜಾತಿಗಳಿಗೆಷ್ಟು ಮತವೈಷಮ್ಯವೋ! ಮನೆಮನೆಯಲ್ಲಿಯೂ ಎಷ್ಟು ಮನಸ್ತಾಪವೋ! ಯಾರು ಯಾರಿಗೆ ಮಿತ್ರರೋ! ಯಾರು ಯಾರಿಗೆ ಶತ್ರುಗಳೋ! ಮತ್ತೀ ಚುನಾವಣೆಯ ಹೆಸರಲ್ಲಿ ಪುಡಿಯಾ ಗುವ ದುಡ್ಡಾದರೂ ಎಷ್ಟು ಸಾವಿರ! ಮನೆಯ ಬಾಗಿಲಿಗೆ ಬಂದ ಬಡ ಭಿಕ್ಷುಕನಿಗೆ ಚಿಕ್ಕಾಸನ್ನೂ ನೀಡದ ಕಲಿಯುಗದ ಧರ್ಮರಾಯರು ಕೆಲವರು, ಈಗ ಚುನಾವಣೆಯ ತಮ್ಮ ಉ ಮೇದುವಾರಿಕೆಗಾಗಿ ಹೇಗೆ ಧರ್ಮಬುದ್ಧಿಯಿಂ ದ, ಮಹಾ ಔದಾರ್ಯದಿಂದ ತಮ್ಮ ನಾಣ್ಯದ ಚೀಲವನ್ನು ಬಿಚ್ಚಿ, ಎಡಗೈಯಿಂದಲೂ, ಬಲ ಗೈಯಿಂದಲೂ ದುಡ್ಡನ್ನು ಬೀಸಿ ಚೆಲ್ಲುತ್ತಿದ್ದಾ ರೆ! ಇದರಿಂದ ಪ್ರಯೋಜನವೇನು? ಪುರುಷಾ ರ್ಥವೇನು? ನಮ್ಮ ಜಿಲ್ಲೆಯ ಮುಸ್ಲಿಂ ಉ" ಮೇದುವಾರರು ತಮ್ಮೊಳಗೆ ಸಮಾಲೋಚಿಸಿ, ಜಗಳ ಬೇಡವೆಂದು, ವಿವೇಕದಿಂದ ಮಾಡಿ ಕೊಂಡ ಆ ತೀರ್ಮಾನವು ಅಭಿನಂದನೀಯ ವಾಗಿದೆ ಮಾತ್ರವಲ್ಲ ಅದು ಇತರರಿಗೂ ಅನು ಸರಣೀಯವೂ ಆಗಿದೆ ಎಂದರೆ ತಪ್ಪಾದೀತೇ?

ಒಂದು ವೇಳೆ, ಇತರ ಉಮೇದುವಾರ ರೂ, ಎಷ್ಟಕ್ಕೂ ತಮ್ಮೊಳಗೊಂದು ವಿವೇಕದ ತೀರ್ಮಾನಕ್ಕೆ ಬಾರದೆ, ಕಾದಾಟಕ್ಕೇ ಸಿದ್ಧ ನೆಂದು ಹಟಸಾಧಿಸುವುದಾದರೆ, ಮತದಾರರ ಕರ್ತವ್ಯವೂ ಸ್ಪಷ್ಟವಾಗಿಯೇ ಇದೆ. ಅವರು ತಮ್ಮ ಹಿತರಕ್ಷಣೆಗಾಗಿ ಪ್ರತಿನಿಧಿಗಳನ್ನಾರಿಸಬೇ ಕಾಗಿರುವಲ್ಲಿ ಅವರು ಯಾರ ಹಂಗಿಗೂ, ಬೆದ ರಿಕೆಗೂ ಭಯಪಡಬೇಕಾಗಿಲ್ಲ. ಯಾರ ಹಿತ ಬೋಧೆಗೂ, ಪ್ರೇರೇಪಣೆಗೂ ಕಿವಿಕೊಡಬೇಕಾ ಗಿಲ್ಲ. ಯಾರು ಎಲ್ಲಿಂದ ಬಂದು, ಯಾವ ಪಾರ್ಟಿಯ ಪರವಾಗಿ, ವಿರೋಧವಾಗಿ ಎಷ್ಟು ಲೆಕ್ಚರ್ ಕೊಟ್ಟರೇನು? ಸಾರ್ವಜನಿಕ ಸಭೆಗ ಳನ್ನು ನಡೆಯಿಸಿದರೇನು? ಚುನಾವಣೆಯಲ್ಲಿ ಸ್ವಾರ್ಥವನ್ನು ತೋರದ, ಪರಾರ್ಥವನ್ನು ಬಚ್ಚಿ ಡದ ಉಮೇದುವಾರರಾಗಲೀ, ಪಂಗಡವಾಗಲೀ ಇದ್ದೀತೇ? ಆದುದರಿಂದ ಆ ಪಾರ್ಟಿ, ಈ ಪಾರ್ಟಿ ಎನ್ನದೆ, ತಮ್ಮ ಸ್ವತಂತ್ರ ತೀರ್ಮಾನ ದಂತೆ, ಯೋಗ್ಯರೆಂದು ತನುಗೆ ತೋರುವ, ವಿ ಶ್ವಾಸವಿರುವ ಪ್ರತಿನಿಧಿಗಳನ್ನೇ, ನಿರ್ಧಾರಮನ ಸ್ಸಿನಿಂದ ಮತದಾರರು ಆರಿಸಲು ಎಂದೂ ಹಿಂ ಜರಿಯಬಾರದು. ಈ ಸಂದರ್ಭದಲ್ಲಿ, ಇಂ ದು ಸಭಾಸದನಗಳನ್ನು ಪ್ರವೇಶಿಸಿ ನಾಳೆ ಕಾ ರಣಾಂತರಗಳಿಂದ ಅಲ್ಲಿಂದ ಜಾರುವ ಪ್ರತಿನಿಧಿ ಗಳಿಂದಾಗಲೀ, ಒಮ್ಮೆ ಆರಿಸಿ, ಅದರ ಅನು ಭವವನ್ನು ಸಾಕಷ್ಟು ಕಾಲ ನಮಗೆ ಮಾಡಿಸಿ ಕೊಟ್ಟ ಪ್ರತಿನಿಧಿಗಳನ್ನೇ ಪುನಃ ಆರಿಸುವುದರಿಂ ದಲೇ ಆಗಲಿ ವಿಶೇಷ ಪ್ರಯೋಜನವಾಗಲಾರ ದೆಂದುನಾವು ಮತದಾರರಲ್ಲಿ ಅಭಿನೂತನ ಪೂರ್ವಕವಾಗಿ ಸೂಚಿಸಬೇಕಾಗಿದೆ.

ಕ್ಯಾಲಿಕಟ್ ಹೊಸಿಯರೀಸ್ ಲಿಮಿಟೆಡ್.

ಈ ಸಂಸ್ಥೆಯ ಸಂಪೂರ್ಣ ಮಾಹಿತಿಯ ನ್ನೊಳಗೊಂಡ ಪ್ರೊಸ್ಪೆಕ್ಟಸ್ ಈ ಸಂಚಿಕೆಯ ಬೇರೊಂದೆಡೆಯಲ್ಲಿ ಪ್ರಕಟವಾಗಿರುವದನ್ನು ವಾಚಕರು ಇಷ್ಟರಲ್ಲೆ ಓದಿರಬಹುದು. ಇಂದು ಕೈಗಾರಿಕೆಗಳ ಅಭ್ಯುದಯಕ್ಕೆ ತುಂಬಾ ಅವ ಕಾಶವಿದ್ದು ಇವನ್ನು ಯೋಗ್ಯ ರೀತಿಯಲ್ಲಿ ಸ ಮರ್ಥತೆಯಿಂದ ನಡೆಯಿಸಿದಲ್ಲಿ ಹೆಚ್ಚು ಪ್ರಯೋಜನವಿದೆಯೆಂದು ಬೇರೆ ಹೇಳಬೇಕಾಗಿ ಲ್ಲ. ನೇಯಿಗೆಯ ಕಾರ್ಖಾನೆಯೂ ಈ ಕೈಗಾ ರಿಕೆಗಳಲ್ಲಿ ಒಂದಾಗಿದ್ದು, ಇವುಗಳಲ್ಲಿ ತಯಾ ರಾಗುವ ಬನಿಯನುಗಳು ಪ್ರತಿಯೊಬ್ಬನಿಗೂ ಅ ನುನಿತ್ಯದ ಉಪಯೋಗಕ್ಕೆ ಅತ್ಯಗತ್ಯವಾದುವು. ಪಶ್ಚಿಮ ಕರಾವಳಿಯು ಈ ಬನಿಯನುಗಳಿಗೆ ಪ್ರ ಖ್ಯಾತವಾಗಿದ್ದು ಈ ಪ್ರಾಂತದಲ್ಲಿ ಈ ಕಸುಬಿ ನಲ್ಲಿ ತಲಾಂತರಗಳಿಂದ ಅನುಭವ ಪಡೆದಿರುವ ಕುಶಲ ಕೆಲಸಗಾರರು ತುಂಬಾ ಇವ್ವಾರೆ. ಅತ್ಯಾಧುನಿಕ ಯಂತ್ರಸಾಮಗ್ರಿಗಳ ಸಹಕಾರ

ಮಂಗಳೂರು

ಇದೇ ತಿಂಗಳ ತಾ. ೧೭ನೇ ಆದಿತ್ಯವಾರ ಪ್ರಾತಃಕಾಲ ಗಂಟೆ ೮-೩೦ಕ್ಕೆ ಇಲ್ಲಿಯ ಶ್ರೀ ಗೋಕರ್ಣ ನಾಥ ದೇವಸ್ಥಾನದಲ್ಲಿ ಮ. ರಾ. ರಾ. ಜೆ. ಎಂ. ಸಿ ಕೇರ, ಎಂ. ಎ., ಎಂ. ಎಲ್. ಇವರು ಅಸ್ಸಿಸ್ಸಿಯ ಸಂತ ಫ್ರೆನ್ಸಿಸ್‌ರವರ ಜೀವನಚರಿತ್ರೆ ಮತ್ತು ಅವರು ಜನತೆಗೆ ಮಾಡಿದ ಮಹದುಪಕಾರಗಳನ್ನು ವಿವರಿಸಿ ಭಾಷಣ ಮಾಡಿರುವರು. ಭಾಷಣವು ಬಹಳ ಶ್ಲಾಘನೀಯವಾಗಿತ್ತು. ಇದೇ ಬರುವ ಆದಿತ್ಯವಾರ ತಾ. ೨೪—೧—೫೭ ಪ್ರಾತಃ ಗಂಟೆ ೮-೩೦ಕ್ಕೆ ಗವರ್ನ ಮೆಂಟ್ ಕೊಲೇಜಿನ ಕಿರಿಯ ಕನ್ನಡ ಪಂಡಿತ ಶ್ರೀ ಮಾನ್ ಕೆ. ವಿ. ಕೃಷ್ಣ ಭಟ್ಟರವರು ರಾಮಾಯಣ ಮತ್ತು ಅದರ ಸರಿಯಾದ ಅರ್ಥದ ಕುರಿತು ಭಾಷಣ ಮಾಡುವರು. ಎಲ್ಲರಿಗೂ ಸ್ವಾಗತವಿದೆ.

(೯ನೇ ಪುಟ ನೋಡಿ)

ದಿಂದ ಈ ಕೈಗಾರಿಕೆಯನ್ನು ಅಭಿವೃದ್ಧಿಪಡಿಸ ಲು ಸಾಕಷ್ಟು ಅನುಕೂಲತೆಗಳಿದ್ದು ಸರಕಾ ರದ ಕೈಗಾರಿಕೆಯ ಶಾಖೆಯು ವರದಿಯ ಮೇ ರೆಗೂ ಈ ನೇಯಿಗೆಯ ಕಾರ್ಖಾನೆಯನ್ನು ತಕ್ಕ ರೀತಿಯಲ್ಲಿ ವಿಚಕ್ಷಣರು ಸಮರ್ಪಕವಾಗಿ ನಡೆಸಿದಲ್ಲಿ ಮೂಲಧನಕ್ಕೆ ಯೋಗ್ಯ ಪ್ರತಿಫಲ ವು ದೊರಕುವುದು ನಿಸ್ಸಂದೇಹವೆಂದು ತಿಳಿದು ಬರುತ್ತದೆ. ಈ ನಿಯಮಿತ ಸಂಸ್ಥೆಯ ಆಡಳಿ ತೆಗಾರರಾದ ರಾಮಚಂದ್ರ ಕಂಪೆನಿಯವರಾದ ರೂ ಈ ಕೈಗಾರಿಕೆಯಲ್ಲಿ ಅನುಭವಶಾಲಿಗಳಾ ದವರೆ. ಇವರೀಗ ಅಪೇಕ್ಷಿಸುವದು ಈ ಸಂ ಸ್ಥೆಯನ್ನು ಇನ್ನಷ್ಟೂ ಪುಷ್ಕೀಕರಿಸಲು ಮೂಲ ಧನ. ಲಾಭದಾಯಕವಾದ ಸಂಸ್ಥೆಗಳಿಗೆ ಮೂಲಧನವು ಈಗಿನ ದಿನಗಳಲ್ಲಿ ಸುಲಭವಾಗಿ ಸಿಗುವದರಿಂದ ಇವರ ಇಷ್ಟಾರ್ಥಗಳು ಈಡೇ ರಿ ಈ ಕೈಗಾರಿಕೆಯ ಸಂಸ್ಥೆಯು ಸರ್ವತೋ ಮುಖವಾದ ಅಭಿವೃದ್ಧಿಯನ್ನು ಪಡೆಯುವಂತಾ ಗಲಿ.

ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಲಿ.

ಕರ್ಣಾಟಕದಲ್ಲಿಯೂ, ಇತರ ನಾಡು ಗಳಲ್ಲಿಯೂ ತಮ್ಮ ಅಪೂರ್ವ ನಾಟಕಪ್ರಯೋ ಗಗಳಿಂದ ಕೀರ್ತಿಯನ್ನು ಸಂಪಾದಿಸಿರುವ ಮೇಲ್ಕಂಡ ನಾಟಕ ಮಂಡಲಿಯವರು, ಇಲ್ಲಿಗೆ ಬಂದು, ತಮ್ಮ ಪ್ರಯೋಗಗಳಿಂದ ಜನಮನೋ ರಂಜನೆಯನ್ನುಂಟುಮಾಡುತ್ತ ಸ್ವಲ್ಪ ಸಮಯ ಕಳೆಯಿತು. ಇವರು ಇದಿಷ್ಟರಲ್ಲಿಯೇ, ಸದ್ಯ ದಲ್ಲಿಯೇ ಮುಂದಕ್ಕೆ ಪ್ರಯಾಣ ಬೆಳೆಸುವುದ ರಲ್ಲಿರುವರೆಂದು ತಿಳಿದ ಕಾರಣ, ಆ ಕುರಿತು ಎರಡು ಮಾತುಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾವಿಸಲೆಳಸುತ್ತೇವೆ.

ಮಂಗಳೂರು ಮೊದಲಿಂದಲೂ ನಾಟಕ ಕಲೆಗೆ ತಕ್ಕುದಾದ ಪ್ರೋತ್ಸಾಹವನ್ನೀಯುವ, ಈಯುತ್ತಿರುವ ಕರ್ಣಾಟಕದ ಒಂದು ಮುಖ್ಯ ಕೇಂದ್ರ. ಮೈಸೂರಿನ ಪ್ರಸಿದ್ಧವಾದ ಎಷ್ಟೋ ನಾಟಕ ಕಂಪೆನಿಗಳು, ಹಿಂದೆ, ಇಲಿಗೆ ಬಂದು ಜನಾದರವನ್ನು ಸಂಪಾದಿಸಿ, ತಿಂಗಳುಗಟ್ಟಲೆ ಯಾಗಿ ನಾಟಕಗಳನ್ನಾಡಿ ಕೀರ್ತಿಯೊಡನೆ ಹಿಂ ದಿರುಗಿವೆ. ಈಗಳಿನ ಈ ಕಂಪೆನಿಯಾದರೂ ಅವುಗಳಂತೆಯೇ ಜನಾದರವನ್ನು ಪಡೆದಿದೆ ಎಂಬುದು ಇದುವರೆಗೆ ಈ ಕಂಪೆನಿಗೆ ದೊರಕಿದ ಜನರ ಪ್ರೋತ್ಸಾಹದಿಂದ ಸ್ವಯಂವೇದ್ಯವಾಗು ತ್ತಿದೆ. ಹಾಗಿರುವಲ್ಲಿ ಈ ಸಂಸ್ಥೆಯವರು ಇಷ್ಟರಲ್ಲಿಯೇ—ಹೆಣ್ಣು ಸಿಕ್ಕುವಾಗ ಕಣ್ಣು ಮುಚ್ಚಿಕೊಂಡಂತೆ—ಏತಕ್ಕೆ ಇಲ್ಲಿಂದ ಹೊರ ಡಲು ಮನಸ್ಸು ಮಾಡಿರುವರೋ ತಿಳಿಯದು. ವಸ್ತುತಃ ನೋಡಿದರೆ, ಇದೇ ಈಗ ನಾಟಕಾದಿ ವಿನೋದಗಳಿಗೆ ಇಲ್ಲಿ ತಾರುಣ್ಯದ ಸಮಯ ವಾಗಿದೆ. ವ್ಯಾಪಾರದ ಚಲಾವಣೆಗೂ, ವ್ಯವ ಹಾರದ ಚಟುವಟಿಕೆಗೂ, ರಥಸಪ್ತಮಿಯಾ ಉತ್ಸ ವಾದಿಗಳಿಗೂ, ಚುನಾವಣೆಗಳ ಸಮಾರಂಭಕ್ಕೂ ಶುಭಮುಹೂರ್ತವು ಈಗಲೇ, ಇಂದು ನಾಳೆ ಯೇ ಎಂಬಂತಿರುವಾಗ, ಈ ಮಂಡಲಿಯವರು ಸದ್ಯಃ ಮುಂದೆ ಪ್ರಯಾಣಮಾಡಬೇಕೆನ್ನುವ ಈ ಕಾರ್ಯಕ್ರಮವು ಸೂಕ್ತವಾಗಿ ನಮಗಂತೂ ತೋರದು. ಮಂಡಲಿಯವರು ಈ ವಿಷಯ ದಲ್ಲಿ ಪುನರ್ವಿಮರ್ಶೆ ಮಾಡುವಂತಾಗಿ ನಂಬ ಲಾಗಿದೆ. ಇನ್ನೂ ಕೆಲವು ಕಾಲವಿಲ್ಲಿದ್ದು ಇನ್ನೂ ಕೆಲವು ನಾಟಕಗಳನ್ನಾಡಲು ವರ್ಧಿ ಸುವುದು ಸಮಯೋಚಿತವೆನಿಸಿದೆ.

ವಿದೇಶ

ಚಕ್ರವರ್ತಿಗಳ ಕಾರನೇಶನಿನ ಸಂಬಂಧವಾಗಿ ಪ್ರತ್ಯೇಕವಾದ ಸ್ಟ್ಯಾಂಪುಗಳು ತಯಾರಾಗುತ್ತಿದ್ದು ಅವು ೧೨ನೇ ಮೇಯಿಂದ ದಶಂಬರ ತಾ. ೩೧ರ ವರೆಗೆ ಮಾರಾಟಕ್ಕೆ ದೊರೆಯುವುವು.

ಸ್ಪೈನಿನಲ್ಲಿ ೪೦ ಸಾವಿರ ವಿದೇಶೀ ವಾಲಂಟಿಯರುಗಳು ಯುದ್ಧರಂಗದಲ್ಲಿ ಭಾಗವಹಿಸಿದ್ದಾರೆ.

ಮೆಡಿಟರೇನಿಯನ್ ಸಮುದ್ರದಲ್ಲಿ ಫ್ರೆಂಚರ ಒಂದು ಯುದ್ಧನೌಕೆಗೆ ಯಾರೋ ವಿಮಾನದಿಂದ ಬಾಂಬು ಬಿಸಾಡಿದ್ದಾರೆ. ಗಾಸಿಯಾಗಿಲ್ಲ.

ಮಲಗದ ಮಾರ್ಗದಲ್ಲಿರುವ ಮೊರ್ಬಿಲ್ಲ ನಗರವನ್ನು ದಂಗೆಗಾರರು ಸ್ವಾಧೀನಪಡಿಸಿಕೊಂಡಿದ್ದಾರೆ.

ಮೆಲ್ಬೋರ್ನ್ ನಗರದ ವಿಕ್ಟೋರಿಯಾ ಡಾಕಿನ ಸರಕಾರಿ ಸ್ಟೋರ್ಸಿಗೆ ಬೆಂಕಿ ಹತ್ತಿ ೫ ಲಕ್ಷ ಪೌಂಡು ಗಳಷ್ಟು ನಷ್ಟ. ಸಾವಿರಾರು ಟನ್ ಬೆಣ್ಣೆ, ಮಾಂಸ ಗಳೂ ನಾಶವಾಗಿವೆ.

ಚೀನದ ಗಲಭೆ ಒಮ್ಮೆ ಆಣಗಿದರೂ ಪುನಃ ತಲೆ ಎತ್ತಿದೆ. ದಂಗೆಗಾರರು ಪುನಃ ತಮ್ಮ ಹಟವನ್ನು ಸಾಧಿಸಲು ಹೊರಟು ತಿರುಗಿ ಗಲಭೆಯನ್ನುಂಟುಮಾಡಿದ್ದಾರೆ.

ಅಂತೋಲಿಯಾ ಪ್ರಾಂತದಲ್ಲಿ ಚಳಿಯಿಂದ ೬೦ ಮಂದಿ ಒಕ್ಕಲಿಗರು ಮರಕಟ್ಟಿ ಮೃತಪಟ್ಟರು.

ಒಂಟೇರಿಯೋ ಜೈಲಿನಲ್ಲಿ ೭೦೦ ಮಂದಿ ಖೈದಿಗಳು ದಂಗೆ ಎದ್ದು, ಅಲ್ಲಿನ ದೇವಾಲಯ, ಆಸ್ಪತ್ರೆ, ಅಡಿಗೆಮನೆಗಳನ್ನು ನಾಶಮಾಡಿ ೪೦ ಸಾವಿರ ಪೌಂಡು ಗಳಷ್ಟು ನಷ್ಟ ಮಾಡಿದುದಲ್ಲದೆ, ೧೫೦ ಮಂದಿ ತಪ್ಪಿಸಿಕೊಂಡೂ ಹೋದರು. ಅವರಲ್ಲಿನ್ನೂ ೪೦ ಮಂದಿ ಸಿಕ್ಕಿಲ್ಲ.

ಮಾತೂಶ್ರೀ ಮಹಾರಾಣಿ ಮೇರಿಯವರು ವೆಸ್ಟ್ ಮಿನಿಸ್ಟರ್ ಎಬಿಯಲ್ಲಿನ ತಮ್ಮ ಪುತ್ರರ ಕಾರನೇಶನ್ ಮಹೋತ್ಸವವನ್ನು ನಿರೀಕ್ಷಿಸುವರು. ಈ ಘಟನೆಯು ಇಂಗ್ಲಿಷ್ ಚರಿತ್ರೆಯಲ್ಲಿ ಮೊದಲನೆಯದು.

ತುರ್ಕಿಯ ಶಾಲೆಗಳ ಪಾಠದ ಪಟ್ಟಿಯಲ್ಲಿ ಹುಡುಗಿಯರಿಗೆ ಮಿಲಿಟರಿಯ ಶಿಕ್ಷಣವು ಕಡ್ಡಾಯವಾಗಿರುವಂತೆ ಸೇರಿಸಲ್ಪಟ್ಟಿದೆ.

ಇತಿಯೋಪಿಯದಲ್ಲಿ ಇನ್ನೂ ನಾಲ್ಕಾರು ಮಂದಿ ಅಬಿಸೀನಿಯಾ ಸೇನಾನಿಗಳು ತಮ್ಮ ಸೈನಿಕರೊಡನೆ ಇಟೆಲಿಯವರೊಡನೆ ಯುದ್ಧ ಮಾಡುತ್ತಲೇ ಇದ್ದಾರೆಂದು ಪ್ರಕಟವಾಗಿದೆ.

ಫ್ರೆಂಚ್ ಸರಕಾರದವರು ಸ್ಪೈನ್ ಸರಕಾರದ ಸೈನ್ಯಗಳಿಗೆ ೨೦ ಸಾವಿರ ಟನ್ ಗೋಧಿಯನ್ನು ಕಳುಹಿಸಿದ್ದಾರೆ.

ಶಂಘಾಯಿಯಲ್ಲಿ ಒಂದು ಟ್ರೈನಿಗೆ ಬೆಂಕಿ ಹತ್ತಿ ಸುಮಾರು ೧೦೦ ಮಂದಿ ಚೀನೀಯರು ಮೃತರಾದರೆಂದು ಸುದ್ದಿ.

ಕರ್ನಾಟಕ

ಮೈಸೂರಲ್ಲಿ ಶ್ರೀಮತಿ ಕಮಲಾದೇವಿ, ಶ್ರೀ.ಗಳಾದ ಕೆ. ಟಿ. ಭಾಷ್ಯಂ, ಕರ್‌ಮಾರ್‌ಕರ್ ಮೊದಲಾದವರು ಸಾರ್ವಜನಿಕ ಭಾಷಣಗಳನ್ನು ಮಾಡಿದಂತೆ ಅಲ್ಲಿನ ಪ್ರಭುತ್ವದವರಿಂದ ನಿರ್ಬಂಧಿಸಲ್ಪಟ್ಟಿದ್ದಾರೆ.

ಮೈಸೂರಲ್ಲಿ ಹಿಂದೀ ಪದವೀದಾನ ಸಮಾರಂಭವು, ನಿವೃತ್ತ ಎಕ್ಸೈಜ್ ಕಮಿಶನರಾದ ಶ್ರೀ. ಅಂಬಳೆ ಸುಬ್ರಹ್ಮಣ್ಯ ಅಯ್ಯರರ ಅಧ್ಯಕ್ಷತೆಯಲ್ಲಿ ಜರುಗಿತು.

ಚಿಕ್ಕಮಗಳೂರಿಗೆ ಮೈಸೂರಿನ ವ್ಯಾಪಾರ ಕೈಗಾರಿಕೆಗಳ ಡೈರೆಕ್ಟರರಾದ ಶ್ರೀ. ಎಸ್. ಜಿ. ಶಾಸ್ತ್ರಿಗಳು ಹೋಗಿಬಂದು ಅಲ್ಲೊಂದು ಕಾಫಿ ಕ್ಯೂರಿಂಗ್ ವರ್ಕ್ಸ್‌ನ್ನು ಆರಂಭಿಸುವ ಪ್ರಸ್ತಾವ ಮಡೆಯಿತು.

ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ೨೮ ಮಂದಿ ನಾಮಕರಣ (೨೦ ಮಂದಿ ಆಫೀಸರರು ೮ ಮಂದಿ ಇತರರು) ಹೊಂದಿದ ಮೆಂಬರರೂ, ೨೨ ಮಂದಿ ಚುನಾಯಿಸಲ್ಪಟ್ಟ ಮೆಂಬರರೂ ಇರತಕ್ಕ ದೆಂದು ಅಲ್ಲಿನ ಪ್ರಭುತ್ವದ ಆಜ್ಞೆ.

ಉಚಿತ

ಚೀನಾ ಜಪಾನ್ ಮತ್ತೂ ಬೊಂಬಯಿಯ ಕೆಲವು ಯುವತಿಯರೂ, ಸುಂದರಿಯರೂ ಅಪ ನಟಿಯರ ಭಾವಚಿತ್ರಗಳನ್ನು 1937ನೇ ಇಸ್ವಿಯ ಸಮ್ಮ ತ್ಯಾಲೆಂಡರುಗಳ ಮೇಲೆ ಪ್ರಕಟಿಸಿದ್ದೇವೆ. ಎರಡಾಣೆ ಸ್ಟ್ಯಾಂಪುಗಳನ್ನು ಮತ್ತೂ ನಾಲ್ಕಾಣೆಯ ಸ್ಟ್ಯಾಂಪುಗಳನ್ನು ಕಳುಹಿಸುವವರಿಗೆ ಅನುಕ್ರಮವಾಗಿ ಒಂದು ಮತ್ತೂ ಮೂರು ಭಾವಚಿತ್ರಗಳನ್ನು ನಾವು ಕಳುಹಿಸುತ್ತೇವೆ. ಕೆಲವು ಪ್ರತಿಗಳು ಮಾತ್ರವೇ ಉಳಿದಿವೆ. ಈ ಸಂಪರ್ಧವನ್ನು ಕಳೆದುಕೊಳ್ಳಬೇಡಿ.

ಬರೆಯುವ ವಿಳಾಸ:—

Netar Sanjivan Karyalaya,
Juma Musjid, No. 6,
BOMBAY.

ಹಿಂದೂದೇಶ

ಚಿತ್ತೂರು ಪ್ರಾಂತದ ಯಡ್ಮೂರ್ ಎಂಬಲ್ಲಿ ಕಾಂಗ್ರೆಸ್ ಉಮೇದುವಾರರ ಕಡೆಯಿಂದ ಭಾಷಣವಾಗುತ್ತಿರಲು ಯಾರೋ ತುಂಟರು ಧೋಲುಗಳನ್ನು ಬಜಾಯಿಸಿ, ಆ ಸಭೆಯನ್ನು ವಿಸರ್ಜಿಸುವಂತೆ ಮಾಡಿದರು.

ನೋಕಾಲಿಯ ಬಳಿಯಲ್ಲಿ ಮೇಘನಾ ನದಿಯಲ್ಲಿ ಒಂದು ದೋಣಿ ಮಗುಚಿ ೧೦ ಮಂದಿ ಮುಳುಗಿ ಮೃತರಾದಂತೆ ವಾರ್ತೆ.

ಲಾಹೋರಿನಲ್ಲಿ ಪೋಲಿಂಗಿನ ಸಮಯದಲ್ಲಿ ಇಬ್ಬರು ಉಮೇದುವಾರರ ತಂಡಗಳಿಗೆ ಜಗಳವುಂಟಾಗಿ, ಜನ ಸೇರಿ, ಪೋಲೀಸರು ಬಂದು ಎರಡು ಸಲ ಲಾಠೀ ಚಾರ್ಜು ಮಾಡಬೇಕಾಯಿತು. ಸುಮಾರು ೧೨ ಮಂದಿಗೆ ಏಟುಗಳಾಗಿವೆ.

ಸಿಲೋನಿನ ಹೊಸ ಗವರ್ನರರಾಗಿ ಸರ್ ಎಂಡ್ರ್ಯೂ ಕೆಲ್ಡಿಕೋಟ್‌ರವರು ನೇಮಿಸಲ್ಪಟ್ಟಿದ್ದಾರೆ.

ಪಂಡಿತ ಮಾಳವ್ಯರು ಚುನಾವಣೆಯ ಪ್ರಚಾರ ಕಾರ್ಯಕ್ಕಾಗಿ ಕಾಶಿಯಿಂದ ಲಾಹೋರಿಗೆ ದಯೆ ಮಾಡಿಸಿದ್ದಾರೆ.

ಬಂಗಾಳ ಪ್ರಾಂತದಲ್ಲಿ ಈಗ ಚಳಿ ವಿಪರೀತವಾಗಿ, ಬಡವರು ಬಹಳ ಸಂಕಷ್ಟದಲ್ಲಿದ್ದಾರೆ.

ಕಲ್ಕತ್ತಾ ಪ್ರಾಂತದಲ್ಲಿ ಕಾಂಗ್ರೆಸ್ ಕೆಲಸಗಾರರಲ್ಲಿ ಪ್ರಸಿದ್ಧಳಾದ ಶ್ರೀಮತಿ ಮಿಸ್ ಜ್ಯೋತಿರ್ಮಯಿ ಗಂಗುಲಿ ಎಂಬಾಕೆ ಕಾಂಗ್ರೆಸಿನಿಂದ ಉಮೇದುವಾರಳಾಗಿ ಅರಿಸಲ್ಪಡದ ಕಾರಣ ಅಕೆ ಆಹಾರತ್ಯಾಗವನ್ನು ಆರಂಭಿಸಿದ್ದಾಳೆ.

ಮದ್ರಾಸಿನ ಚುನಾವಣೆಯ ಕವಿಶನರಾಗಿ ಮಿ. ಜಿ. ಟಿ. ಜೋಗ್‌ರವರು ನೇಮಿಸಲ್ಪಟ್ಟಿದ್ದಾರೆ.

ಬಿ. ಎನ್. ಆರ್. ರೈಲ್ವೆ ಮುಷ್ಕರವು ಮುಗಿಯುವಂತೆ ತೀವ್ರ ಪ್ರಯತ್ನಗಳಾಗುತ್ತಿವೆ.

ಗ್ವಾಲಿಯರಿನ ಘನವನ್ನೆದಿದ ಮಹಾರಾಜ ಸಿಂಧ್ಯರವರಿಗೂ, ತ್ರಿಪುರ ಮಹಾರಾಜರವರ ಸಹೋದರಿ ರಾಜಕುಮಾರಿ ಕಮಲಪ್ರಭಾದೇವಿಗೂ ವಿವಾಹವು ನಿಶ್ಚಯವಾಗಿದೆ.

ಸಂಯುಕ್ತ ಪ್ರಾಂತದ ಹಿಂದುಸ್ಥಾನೀ ಪಂಡಿತ ಮಂಡಲದ ೫ನೇ ವಾರ್ಷಿಕ ಸಾಹಿತ್ಯ ಸಮ್ಮೇಳನದಲ್ಲಿ ಸರ್ ತೇಜ್ ಬಹದೂರ್ ಸಪ್ರೂಗಳು ದೇಶದ ಶಿಕ್ಷಣವು ದೇಶಭಾಷೆಯಲ್ಲಿಯೇ ನಡೆಯತಕ್ಕುದೆಂದು ಒತ್ತಾಯಪಡಿಸಿದರು.

ದ. ಕನ್ನಡ

ಮೂಡಬಿದ್ರಿ:—ಇಲ್ಲಿಯ ಉಪಾಧ್ಯಾಯರ ಸಂಘದ ೬ನೇ ಸಾಮಾನ್ಯ ಸಭೆಯು ಇದೇ ೧೯೪೨ನೇ ಜನವರಿ ತಾ. ೯ರಲ್ಲು ದಿಗಂಬರ ಜೈನ ಹಾಯರ ಎಲಿಮೆಂಟರಿ ಶಾಲೆಯಲ್ಲಿ ದೇರೆಗುಡ್ಡೆ ಶಾಲಾ ಹೆಡ್ಮಾಸ್ಟರ ರಾದ ಮ. ರಾ. ರಾ. ಕೆ. ಪಿ. ನೇಮಿರಾಜ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಸಾಂಗ್ಯವಾಗಿ ಜರುಗಿತು. ಸಂಘದ ೭೬ ಮೆಂಬರರ ಪ್ರತಿ ೫೫ ಮಂದಿ ಅಧ್ಯಾಪಕರು ಹಾಜರಿದ್ದರು. ಪೂರ್ವಾಹ್ನ ಬಿ. ಇ. ಎಂ. ಶಾಲಾ ಹೆಡ್ಮಾಸ್ಟರರಾದ ಮ. ರಾ. ರಾ. ಆರ ಕಲ್ಯಾಣರವರು ನಾಲ್ಕನೇ ಕ್ಲಾಸಿನ ಮಕ್ಕಳಿಗೆ ಲೆಕ್ಕ ಭಿನ್ನರಾಶಿಯಲ್ಲಿ ಮಾದರಿ ಪಾಠವನ್ನು ಬಹು ಸೊಗಸಾಗಿ ಕೊಟ್ಟರು.

ಬರುವ ಸಭೆಯು ಫೆಬ್ರವರಿ ೧೩ಕ್ಕೆ ಮೂಡಬಿದ್ರೆ ಲೇಬರ ಶಾಲೆಯಲ್ಲಿ ಜರಗಿಸಲ್ಪಡುವುದೆಂದು ಈ ಮೂಲಕ ತಿಳಿಸೋಣಾಗಿಯದೆ.

ಕಾಸರಗೋಡು:—ಮದ್ರಾಸು ನ್ಯಾಯವಿಧಾಯಕ ಸಭೆಯ ಮುಸ್ಲಿಂ ಸೀಟಿಗೆ ಈ ಡಿವಿಜನಿನಿಂದ ಉಮೇದ್ವಾರರಾಗಿದ್ದ ಖಾನ್ ಬಹದೂರ್ ಮಹಮ್ಮದ್ ಶಮ್ಮಾಡ್ ಮತ್ತು ಜನಾಬ್ ಮಹಮ್ಮದ್ ಶೆರೂಲರು ರಾಜಿ ಮಾಡಿಕೊಂಡು ಮೊದಲಿನವರೇ ಪ್ರತಿಸ್ಪರ್ಧಿಗಳಿಲ್ಲದೆ ಉಮೇದ್ವಾರರಾಗಿರುವರೆಂದು ತಿಳಿದುಬರುತ್ತದೆ.



ಸ್ವಸ್ತಿಕಾ
ಸುಪರ್‌ಫೈನ್ ಸೋಪ್.

ದಿ ಸ್ವಸ್ತಿಕಾ ಓಯಿಲ್ ಮಿಲ್ಸ್ ಲಿಮಿಟೆಡ್
ವಡಾಲಾ, ಬೊಂಬಾಯಿ 15.

ಸ್ಥಳೀಯ ಬಿ. ಇ. ಎಂ. ಸೆಕೆಂಡರಿ ಶಾಲೆಯ ಹೊಸ ಕಟ್ಟಡದ ಪ್ರವೇಶ ಉತ್ಸವವು ಡಿಸ್ಟ್ರಿಕ್ಟ್ ಮುನ್ಸೀಫರಾದ ಮಿ. ಪಿ. ಎ. ನಜರೇತ್, ಬಿ. ಎ., ಎಂ. ಎಲ್.,ರವರ ಅಧ್ಯಕ್ಷತೆಯಲ್ಲಿ ತಾ. ೧೪ನೇ ಸಾಯಂಕಾಲ ನಡೆಯಿತು. ಕೆಲವು ಮಹನೀಯರ ಭಾಷಣಗಳೊಡನೆ ಅಧ್ಯಕ್ಷರ ಆರಂಭದ ಹಾಗೂ ಉಪಸಂಹಾರಭಾಷಣ ಮುಂತಾದ ಕಾರ್ಯಕ್ರಮಗಳಿಂದ ಈ ಸಮಾರಂಭವು ಯಶಸ್ವಿಯಾಗಿ ಜರಗಿತು. ಈ ಶಾಲೆಯ ಕಟ್ಟಡವೊಂದು ೧೯೩೩ರಲ್ಲಿ ಅಗ್ನಿಗೆ ಆಹುತಿಯಾದಾನಂತರ ಹೊಸ ಕಟ್ಟಡಕ್ಕೆಂದು ಊರವರು ಸುಮಾರು ೩೫೦ ರೂಪ್ಯಾಗಳನ್ನು ವಂತಿಗೆಯಾಗಿ ವಸೂಲು ಮಾಡಿರುತ್ತಾರೆ. ಆದರೂ ಮಿಶನಿನವರು ಯೋಗ್ಯವಾದ ಕಟ್ಟಡವನ್ನು ತಾವೇ ಕಟ್ಟಿಸಿರುವುದು ಸ್ತುತ್ಯ. ಊರವರ ವಂತಿಗೆಯ ಹಣವನ್ನು ಶಾಲೆಗೆ ಬೇಕಾದ ಇತರ ಉಪಕರಣಗಳಿಗೆ ವಿನಿಯೋಗಿಸಲಾಗುವುದೆಂದು ತಿಳಿದುಬರುತ್ತದೆ.

ಚುನಾವಣೆಯ ಸಂಬಂಧವಾಗಿ ಕಾರುಗಳ ಓಡಾಟವು ವಿಪರೀತವಾಗಿದೆ. ತಾ. ೧೭ನೇ ಸಾಯಂಕಾಲ ಬಿಲ್ಲವರ ಜಾತಿಯ ಒಂದು ಮುದುಕಿಯು ಒಂದು ಕಾರಿನ ಅಡಿಗೆ ಬಿದ್ದು ಕಾಲು ಮುರಿಸುಹೋಗಿ ಮರುದಿನ ಮೃತಳಾಗಿರುತ್ತಾಳೆ. ಈ ಗಲಾಟೆ ಮುಗಿಯುವ ವರೆಗಾದರೂ ಡಾರಿಗರೂ ವೋಟುರು ಚಾಲಕರೂ ಜಾಗ್ರತೆಯಲ್ಲಿರುವುದು ಅಗತ್ಯ.

ಮಂಗಲಪಾಡಿ:—ಇಲ್ಲಿಯ ಜೋಡ್ಗುಹೆಯರ್ ಎಲಿಮೆಂಟರಿ ಶಾಲೆಯು ಮಹಿಷವರ್ಮನೀ ಸ್ಕೌಟು ಗ್ರೂಪಿನವರು ತಾ. ೧೫ಕ್ಕೆ ಮಂಗಳೂರಿಗೆ ಹೋಗಿ ಅಲ್ಲಿ ನಡೆದ 'ಸ್ಕೌಟು ರೆಲ್ಲಿ'ಯಲ್ಲಿ ಭಾಗವಹಿಸಿ ತಾ. ೧೬ಕ್ಕೆ ಮರಳಿರುವರು. ಈ ಶಾಲೆಯ ಮುಖ್ಯೋಪಾಧ್ಯಾಯರಾದ ಮಃ ಕೆ. ಬಿ. ದೇವದಾಸ ರಾಯರು ಜಿಲ್ಲಾ ಕಬ್ ಉಪಾಧ್ಯಾಯರಾಗಿ ಚುನಾಯಿತರಾಗಿರುವರು.

ಎಡನೀರು:—ಇಲ್ಲಿಯ ಮಠದಲ್ಲಿ ಕೇರಳದಿಂದ ಬಂದ ವಳ್ಳತ್ತೋಳರ 'ಕಥಕ್ಕಳಿ' ಸಂಘದವರು ಒಂದು ನಾಟಕವನ್ನು ಆಡಿದರು.

ಮಡಪಾಡಿ:—ಇಲ್ಲಿಯ ಎಲಿಮೆಂಟರಿ ಶಾಲಾ ಆಪ್ತಮ ವಾರ್ಷಿಕ ವರ್ಧಂತಿ ಉತ್ಸವವು ಇಲ್ಲಿನ ನಿವಾಸಿಗಳ ಸೇರಿಕೆಯಿಂದ, ಉತ್ಸಾಹ ಪೂರ್ಣವಾಗಿ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲಾ ಮುಖ್ಯೋಪಾಧ್ಯಾಯರಾದ ಮ. ರಾ. ಕೆ. ಗೋಪಾಲ ರಾವ್ (ಬಿ. ಎ., ಎಲ್. ಟಿ.)ಯವರ ಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು.

ಮರುದಿನ ರಾತ್ರಿ ಶ್ರೀ ಮಂಡರ್ತಿ ಮೇಳದ ವತಾರ ಆಟವು ಅಧ್ಯಕ್ಷರ ನೇತೃತ್ವದಲ್ಲಿ ನಡೆಯಿ

(೧ನೇ ಪುಟದಿಂದ)

ಇದೇ ಜನವರಿ ತಾ. ೨೬ರಲ್ಲಿ ಪ ಗಂಟೆ ೯ಕ್ಕೆ ಸರಿಯಾಗಿ, ನಮ್ಮ ಜಿಲ್ಲಾ ರಾಪ ಎ. ಡಿ. ಕ್ರಾಂಬಿ ಎಸ್ಕ್ವಾಯರ್, ಐ. ಸಿ. ಎಸ್., ಇವರು, ನಮ್ಮ ಬ್ರ ರ್ 'ಗುರುಪುರ'ನ್ನು ನೀರಿಗೆ ಇಳಿಪ ಮೂರಂಭವನ್ನು ನೆರವೇರಿಸುವವರಾಗಿ

ನಿನ್ನೆ ಸಂಜೆ ಗಂಟೆ ೫-೩೦ಕ್ಕೆ ಸ್ಕೂಲಿನ ಸುಬ್ರಾಯ ಪೈ ಮೆಮೋರಿಯ ಸಲ್ಲಿ 'ಪುದ್ಧಣ ತಿನಾಚರಣೆ'ಯು ಕವಾಗಿ ನೆರವೇರಿಸಲ್ಪಟ್ಟಿತು. ಭಾಷಾಭಿಮ ವಿದ್ವಾನರೂ ಇತರ ಹಲವು ಮಹಾಶಯರು ನ ಈ ಸಭೆಗೆ ದಯೆಮಾಡಿಸಿದ್ದರು. ಅಂದ ಕ್ಷಸ್ಥಾನವನ್ನು ನಿರ್ವಹಿಸಲು ಒಪ್ಪಿಕೊಂಡಿ ಸೂರಿನ ಶ್ರೀ. ಜಿ. ಪಿ. ರಾಜರತ್ನಂ, ಎ ಇವರು ದೇಹಾಲಸ್ಯದ ನಿಮಿತ್ತ ಬರಲಾ ೫, ಸೈಂಟ್ ಅಲೋಷಿ ಕಾಲೇಜಿನ ಹಿರಿ ಟಕ ಪಂಡಿತರಾದ ಶ್ರೀ. ಮು. ತಿಮ್ಮಪ್ಪ ಅಧ್ಯಕ್ಷತೆ ವಹಿಸಿದ್ದರು. ಭಾಷಣಕರ್ತರ ಬಿ. ಭಗವಾನರಾವ್, ಬಿ. ಎ., ಎಲ್. ಟಿ., 'ರಾಮಾಶ್ವಮೇಧ'ದ ಕುರಿತೂ ಶ್ರೀ. ಮುಂಬಳಿ ರಾಯರು ನಂದಳಿಕೆಯವರ ಜೀವನದ ಕೆಲವು ತಿಗಳ ಕುರಿತೂ, ಶ್ರೀ.ಗಳಾದ ಕೆ. ನಾರಾಯಣರು 'ರಸಿಕ ಮುದ್ಧಣ', ಎಂ. ಬಾಬು ಶೆಟ್ಟಿರಿ 'ಮುದ್ಧಣನ ಹೊಸ ರೀತಿ', ಎನ್. ಮಂಗೇಶ ಇವರು 'ಮುದ್ಧಣನ ಶೈಲಿ' ಇವುಗಳ ಕುರಿತೂ ಪ್ರ ಶಂಸಾಪರವಾದ, ವಿಮರ್ಶಾತ್ಮಕವಾದ ಸಮಯೋಚಿತ ಭಾಷಣಗಳನ್ನು ಮಾಡಿದ ಬಳಿಕ, ಅಧ್ಯಕ್ಷರು ನಂದಳಿಕೆಯವರ ರಾಮಾಶ್ವಮೇಧದ ಆರ್ಷಗರ್ಭವಾದ ಸ್ವಾರಸ್ಯವಾದ ಕೆಲವು ಭಾಗಗಳನ್ನು ವಿವರಿಸಿ ವೈದರೊಡನೆ ಶ್ರೀ. ಕಡೆಂಗೋಡ್ಲು ಶಂಕರ ಭಟ್ಟರು ನಂದಳಿಕೆಯವರ ಗ್ರಂಥರಚನೆಯು ಚಾತುರ್ಯ ವಿಷಯಕವಾದ ಸಯುಕ್ತಿಕವಾದ ಭಾಷಣ ಮಾಡಿ ಧನ್ಯವಾದಗಳೊಂದಿಗೆ ಸಭೆ ಮುಕ್ತಾಯವಾಯಿತು.

The Deccan Assurance Co., Ltd.,
BEZWADA.

COMPANY'S PROGRESS (4 YEARS).

Business in force	..	Rs. 14,00,000.
Premium Income	..	Rs. 55,000.
Assets	..	Over One Lakh.
Government Securities	..	Rs. 81,200.
Life Fund	..	Rs. 61,000.
Expense Ratio	..	50%.

VALUATION YEAR 1937.

The Company has already deposited Government Securities for the amount covered issued by the Government of India.

ಪ್ರಸರಣಕ್ಕಾಗಿ
ಾರಿಗಳಿಗೆ
ಾಲಡುವ ಸಹಾಯ.

ತರಗಳಿಲ್ಲದಿರುವ ಎಲ್ಲಾ
ಥಮಿಕ ಶಿಕ್ಷಣವನ್ನು ಬೋ
ುಲ್ಲಕವೇ ವಿಸ್ತರಿಸಬೇಕೆಂ
ವರು ನಿಶ್ಚಯಿಸಿದ್ದು ಆ
ಕ್ಕೆಕೊಂಡ ಅವರ ವಿದ್ಯಾ
ುಕ್ತವಾಗುತ್ತದೆ. ಈ ಧೋ
ಸರಕಾರದವರು ಈ ಅಧಿ
ುವ ಸ್ಥಳೀಯ ಅಧಿಕಾರಿಗಳಿಗೆಲ್ಲ
ಚ್ಚಿನ ಬಾಲ ಬಾಲಿಕಾ ಪಾಠಶಾಲೆಗಳ
ಶಾಲೆಗಳಲ್ಲಿ ಶಿಬಂದಿ
ಗಳಲ್ಲಿಯ ಅಧ್ಯಾಪಕರ
ಹೆಚ್ಚಿಸಲಿಕ್ಕೂ ಹೆಚ್ಚು ಹಣಸ
ಷ್ಟ ಮಾಡಿರುತ್ತಾರೆ. ಪ್ರಾಥಮಿಕ
ವಿಸ್ತರಣೆಗೆ ಹೆಚ್ಚಿನ ಅನುಕೂಲತೆಗಳ
ಗಿಸುವುದಕ್ಕಾಗಿ ೧೯೨೦ರಲ್ಲಿ ಮದ್ರಾಸ್
ಥಮಿಕ ಶಿಕ್ಷಣದ ಆಕ್ಟೆಂಬ ಹೆಸರಿನ ಶಾಸ
ನ್ನು ಮಾಡಿದರು. ಈ ಆಕ್ಟಿನ ಮೇರೆಗೆ ಸರ
ರದ ಅನುಮತಿಯನ್ನು ಪಡೆದು ಅಲ್ಲಲ್ಲಿಯ
ೀಯ ಅಧಿಕಾರಿಗಳು ವಿದ್ಯಾ ತೆರಿಗೆಯೊಂದ
ಹೊರಿಸಿ ಪ್ರಾಥಮಿಕಶಿಕ್ಷಣಪ್ರಸರಣ
ಸ್ಕರ ತಮಗೆ ಬೇಕಾಗುವ ಹೆಚ್ಚಿನ ಹಣ
ನ್ನು ಸಂಪಾದಿಸಿಕೊಳ್ಳಬಹುದು. ಈ ತೆರಿಗೆ
ಂದ ಒಟ್ಟಾಗುವ ಪ್ರತಿಯೊಂದು ರೂಪಾಯಿಗೆ
ಕಾರದವರು ತಮ್ಮ ಪ್ರಾಂತಿಕ ಫಂಡಿನಿಂದ
ಂ ರೂಪಾಯಿ ಕೂಡಿಸಿ ಸ್ಥಳೀಯ ಅಧಿ
ಗಳಿಗೆ ಕೊಡುತ್ತಾರೆ. ಈ ತೆರಿಗೆಯನ್ನು
ತಪಲ್ಲಿ ಎಲ್ಲಾ ಜಿಲ್ಲಾ ಬೋರ್ಡುಗಳೂ
ಲಿ (ಮ್ಯುನಿಸಿಪಾಲಿಟಿಗಳು) ಪೌರ
ಳಿ ೪೫ ಪೌರ ಸಭೆಗಳೂ ವಸೂಲು
ುತ್ತಾರೆ. ಈ ತೆರಿಗೆಯಿಂದ ಒಟ್ಟಾರೆ ವ
ಂದಾಯಗೆಲ್ಲ ಕೂಡಿ ೨೧,೯೯ ಲಕ್ಷ ರೂ
ು ಬಿಡ ಒಟ್ಟಾರೆ ಅವರಿಗೆಲ್ಲ ಹಂಚ
ಸಲ್ಪಟ್ಟಗದವರೂ ವರ್ಷಂಪ್ರತಿ ೨೧,೯೯

ಲಕ್ಷ ರೂಪಾಯಿ ಕೊಡುತ್ತಾರೆ. ಇದಲ್ಲದೆ, ಸರಕಾರದವರಿಂದ ವ್ಯತ್ಯೇಕ ಅನುಮತಿಯನ್ನು ಸ್ಪಷ್ಟವಾಗಿ ಪಡೆದು ಸ್ಥಳೀಯ ಅಧಿಕಾರಿಗಳು ಸ್ಥಾಪಿಸಿರುವ ಇತರ ಕೆಲವು ಶಾಲೆಗಳನ್ನು ನಡೆಸುವುದಕ್ಕೆ ವರ್ಷಂಪ್ರತಿ ೬೪.೬೫ ಲಕ್ಷದಷ್ಟು ಗ್ರಾಂಟುಗಳನ್ನು ಸರಕಾರದವರು ಅವರಿಗೆ ಕೊಡುತ್ತಾರೆ. ಹೀಗೆ ಪ್ರಾಥಮಿಕ ಶಿಕ್ಷಣಕ್ಕಾಗಿ ಸರಕಾರದವರು ಸ್ಥಳೀಯ ಅಧಿಕಾರಿಗಳಿಗೆ ಒಟ್ಟಾರೆ ೮೫.೫೪ ಲಕ್ಷ ರೂಪಾಯಿಯ ಸಹಾಯವನ್ನು ವರ್ಷಂಪ್ರತಿ ಮಾಡುತ್ತಾರೆ. ಇದು ಸ್ಥಳೀಯ ಅಧಿಕಾರಿಗಳು ಪ್ರಾಥಮಿಕ ಶಿಕ್ಷಣಕ್ಕೆ ಖರ್ಚುಮಾಡುವ ಜುಮ್ಲಾ ಖರ್ಚಿನ ಶೇಕಡ ೭೦ ಆಗುತ್ತದೆ.

೨. ಸ್ಥಳೀಯ ಅಧಿಕಾರಿಗಳ ಕಾರ್ಯಕ್ಷೇತ್ರಗಳೊಳಗೆ ನಿಶ್ಚಿತ ಕೆಲವು ಕಡೆಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಶಿಕ್ಷಣವಾಗಿ ಕಾರ್ಯರೂಪಕ್ಕೆ ತರಲಿಕ್ಕೆ ಮೇಲೆ ಹೇಳಿದ ಪ್ರಾಥಮಿಕ ಶಿಕ್ಷಣದ ಆಕ್ಟಿನಲ್ಲಿ ಎಡೆಯಿದೆ. ಈ ತನಕ ಒಟ್ಟಾರೆ ೨೭ ಪೌರ ಸಭೆಯವರು ಈ ಕಡ್ಡಾಯ ಶಿಕ್ಷಣದ ನಿಯಮಗಳಿಂದ ಪ್ರಯೋಜನವನ್ನು ಹೊಂದಿರುತ್ತಾರೆ. ಸರಕಾರದ ಅನುಮತಿಯನ್ನು ಪಡೆದು ಮಲಬಾರು, ಉತ್ತರ ಆರ್ಕಾಡು, ರಾಮನಾಡು, ಚೆಂಗಲ್ಪಟ್ಟು ಮತ್ತು ಪಶ್ಚಿಮ ತಂಜಾವೂರಿನ ಜಿಲ್ಲಾ ಬೋರ್ಡಿನವರು ತಮ್ಮ ತಮ್ಮ ಜಿಲ್ಲೆಗಳೊಳಗೆ ಕೆಲವು ಪ್ರದೇಶಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ರೂಪದಿಂದ ಜಾರಿಗೆ ತಂದಿರುತ್ತಾರೆ.

೩. ಶಾಲೆಗಳನ್ನು ನಡೆಸುವುದಕ್ಕೆ ಕೊಡುವ ಗ್ರಾಂಟುಗಳನ್ನಲ್ಲದೆ ಪ್ರಾಥಮಿಕ ಶಾಲೆಗಳ ಬಗ್ಗೆ ಕಟ್ಟೋಣಗಳನ್ನು ಕಟ್ಟಿಸುವ ಖರ್ಚಿನ ಸಲುವಾಗಿಯೂ ಸರಕಾರದವರು ಸ್ಥಳೀಯ ಅಧಿಕಾರಿಗಳಿಗೆ ಗ್ರಾಂಟುಗಳನ್ನು ಕೊಡುತ್ತಾರೆ. ಸಾಧಾರಣವಾಗಿ ಅಂಥಾ ಕಟ್ಟೋಣಗಳಿಗೆ ಬೇಕಾಗುವ ಖರ್ಚಿನ ಅರ್ಧಾಂಶದಷ್ಟು ಗ್ರಾಂಟುಗಳನ್ನು ಕೊಡುತ್ತಾರೆ.

೪. ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಕೆಳಗೆ ೬೫೬ ಪ್ರಾಥಮಿಕ ಶಾಲೆಗಳಿವೆ. ಅವುಗಳಲ್ಲಿ ೫೦೬ ಶಾಲೆಗಳನ್ನು ಪ್ರಾಂತಿಕ ಫಂಡಿನಿಂದಲೇ ನಡೆಸುವುದಾಗಿರುತ್ತದೆ. ಕಳೆದ ವರ್ಷದಲ್ಲಿ ಈ ಶಾಲೆಗಳನ್ನು ನಡೆಸುವ ಬಗ್ಗೆ ಜಿಲ್ಲಾ ಬೋರ್ಡಿನವರು ೫೦,೫೩೭ ರೂಪಾಯಿ ವಿದ್ಯಾ ತೆರಿಗೆಯನ್ನು ವಸೂಲು ಮಾಡಿ ಸರಕಾರದವರು ಅಷ್ಟೇ ಹಣವನ್ನು ಕೂಡಿಸಿ ಕೊಟ್ಟರು. ಈ ಜಿಲ್ಲೆಯಲ್ಲಿರುವ ೬೫೬ ಶಾಲೆಗಳಲ್ಲಿ ೫೮೭ ಹುಡುಗರ ಶಾಲೆಗಳು, ಉಳಿದ ೯೯ ಬಾಲಿಕಾ ಪಾಠಶಾಲೆಗಳು.

ಈ ಜಿಲ್ಲೆಯಲ್ಲಿರುವ ಎಲ್ಲಾ ಶಾಲೆಗಳನ್ನು ನಡೆಸಲಿಕ್ಕಾಗಿ ಸರಕಾರದವರು ಜಿಲ್ಲಾ ಬೋರ್ಡಿಗೆ ಕಳೆದ ವರ್ಷ ರೂಪಾಯಿ ೫೮,೨೬೧ ಕೊಟ್ಟಿರುವರು.

೫. Iರಿಂದ IIIನೇ ತರಗತಿಯ ತನಕದ ಶಿಕ್ಷಣವನ್ನು ಎಲ್ಲಾ ಜಿಲ್ಲಾ ಬೋರ್ಡು ಶಾಲೆಗಳಲ್ಲಿ ಧರ್ಮಾರ್ಥವಾಗಿಯೇ ಕೊಡುತ್ತಾರೆ. ಪತಿತವರ್ಗದವರು ಮತ್ತು ಮಾಪಿಳ್ಳೆ ಮುಕ್ಕವರ ಬಗ್ಗೆ ಸ್ಥಾಪಿಸಿದ ಶಾಲೆಗಳಲ್ಲಿಯೂ ಶಾಲಾ ಫೀಸನ್ನು ಕೊಡಬೇಕಾದ್ದಿಲ್ಲ. ಎಲ್ಲಾ ಮಹಮ್ಮದೀಯ ಬೋರ್ಡು ಶಾಲೆಗಳಲ್ಲಿ (ಇಂಥವು ೭೭ ಹುಡುಗರ ಶಾಲೆಗಳೂ ೧೧ ಬಾಲಿಕಾ ಪಾಠಶಾಲೆಗಳೂ ಇವೆ.) ಮತಸಂಬಂಧವಾದ ಶಿಕ್ಷಣವನ್ನು ಕೊಡುತ್ತಾರೆ. ಹೀಗೆಯೇ ಮಹಮ್ಮದೀಯ ವಿದ್ಯಾರ್ಥಿಗಳು ೨೦ ಯಾ ಹೆಚ್ಚು ಇರುವ ಬೇರೆ ಶಾಲೆಗಳಲ್ಲಿಯೂ ಮತ ಸಂಬಂಧವಾದ ಶಿಕ್ಷಣವನ್ನು ಕೊಡುತ್ತಾರೆ.

೬. ಪತಿತವರ್ಗದವರನ್ನು ಎಲ್ಲಾ ಬೋರ್ಡು ಶಾಲೆಗಳಲ್ಲಿಯೂ ಸೇರಿಸಿಕೊಳ್ಳುತ್ತಾರೆ. ಪ್ರಸ್ತುತದಲ್ಲಿ ಅಂಥಹ ಅನೇಕ ಶಾಲೆಗಳಲ್ಲಿ ಪತಿತವರ್ಗದ ವಿದ್ಯಾರ್ಥಿಗಳಿರುವರು. ಪತಿತವರ್ಗದವರ ಶಿಕ್ಷಣ ಅಭಿವೃದ್ಧಿಗಾಗಿ ಲೇಬರ್ ಶಾಖೆಯವರು ಸ್ಥಾಪಿಸಿದ ಪ್ರತ್ಯೇಕ ೪೭ ಶಾಲೆಗಳಿವೆ. ಇವುಗಳಲ್ಲಿ ೧,೮೭೭ ವಿದ್ಯಾರ್ಥಿಗಳು ಧರ್ಮಾರ್ಥವಾಗಿ ಶಿಕ್ಷಣ ಹೊಂದುತ್ತಾರೆ.

(ಮುಂದುವರಿಯುವುದು)

ಅತ್ಯಲ್ಪ ಬೆಲೆ — The TWIN — ಅಮಂದ ಆನಂದ

ಖಿಲಭಾರತದಲ್ಲಿ ಅಶೇಷ ಪ್ರಜಾಸಮುದಾಯಕ್ಕೆ
ಅಮಂದ ಆನಂದವನ್ನುಂಟುಮಾಡುವ 'ಟ್ವಿನ್'
ರಿಕಾರ್ಡುಗಳಲ್ಲಿ ರಿಕಾರ್ಡು ಕೊಟ್ಟು ಕರ್ಣಾಟಕ
ನಾಟ್ಯಕಳೆಗೆ ಹೊಸ ವಿಕಾಸವನ್ನು ಕಲ್ಪಿಸಿದ

ಕರ್ಣಾಟಕ ನಾಟಕ ಮಂಡಲಿಯವರ

— ಭಾರತ ನಾಟಕಗಳು —

ದ್ರೌಪದೀ ಸ್ವಯಂವರ	ಬೆಲೆ ರೂ.	9—0.
ಸುಕ್ಮಾಂಗದ	,,	9—0.
ವೀರ ಅಭಿಮನ್ಯು	,,	10—8.
ದಾನಶೂರ ಕರ್ಣ	,,	12—0.
ಗಯ ಚರಿತ್ರೆ	,,	9—0.
ಭೀಷ್ಮ ಪ್ರತಿಜ್ಞೆ	,,	10—8.

ಮೇಸ್
ರೂ. 30/-

ಇವುಗಳಲ್ಲೆಲ್ಲಾ
ಶ್ರೀಯುತ ಕೊಟ್ಟೂರಪ್ಪನವರು
ಮುಖ್ಯನಾಯಕಾಪಾತ್ರವನ್ನು ಪಡೆದಿರುತ್ತಾರೆ.

ಈ ನಾಟಕ ಸೆಟ್ಟುಗಳನ್ನೀ
ಮೇಸ್ ಪೋರ್ಟಬಲ್ ಮಾಡಲ್‌ನಲ್ಲಿ
ನಿಮ್ಮ ವ್ಯಾಪಾರಿಗಳಲ್ಲಿ ಕೇಳಿ, ಜೇಕಾದವುಗಳನ್ನು ಈಗಲೇ ಕೊಳ್ಳಿರಿ!

ದಿ "ಟ್ವಿನ್" ರಿಕಾರ್ಡು ಕಂಪೆನಿ, ಲಿಮಿಟೆಡ್,
೪೫, ಪೆರೇಡ್, ಬೆಂಗಳೂರು.

ಶ್ರೀ ಶೇಷಾಚಲ ಗ್ರಂಥಮಾಲೆಯ
ಹೊಸ ಪುಸ್ತಕಗಳು.

೧. ಸ್ಕೂಲ ಮಿಸ್ಟ್ರೆಸ್

ಪುಟ 240. ಉತ್ತಮ ಗ್ಲೇಜ ಕಾಗದದ ಬೆಲೆ 1-4-0 ರೂ
ಹೆಸರಿಗೆ ತಕ್ಕಂತೆ ಈ ಪುಸ್ತಕವು ಬಹು ವಿಚಿತ್ರವೂ ಸಚಿತ್ರವೂ ಆಗಿದೆ. ಓದಲು ಪ್ರಾರಂಭಿಸಿದರೆ ಮುಗಿಸುವವರೆಗೂ ಬಿಡಲಾಗುವುದಿಲ್ಲ.

೨. ಪರಮೇಶ್ವರ

ಪುಟ 72. ಬೆಲೆ 6 ಆಣೆ.

ಕನ್ನಡ ಸಮ್ರಾಟನಾದ ಎರಡನೇ ಪುಲಿಕೇಶಿಯ ಸಂಬಂಧಿಸಿದ ಐತಿಹಾಸಿಕ ಕಥಾನಕವು. ರಮ್ಯವಾಗಿದೆ

೩. ಮಣಿ

ಪುಟ 80. ಬೆಲೆ 6 ಆಣೆ.
ಸುಂದರವಾದ ಸಾಮಾಜಿಕ ಕಥೆ.

ಗ್ರಂಥಮಾಲೆಯ ಕಾಯಂ ಗ್ರಾಹಕರು ಎರಡು ರೂಪಾಯಿ ಮನಿಯಾರ್ಡರ ಕಳಿಸಿ ತರಿಸಿಕೊಳ್ಳಬೇಕು.

ವಿಳಾಸ:—
ಭಿ. ಪ. ಕಾಳೆ,
ಆನಂದವನ, ಡಿ. ಧಾರವಾಡ.

ನೋಟೀಸು.

ಮೂಡು ಕೆರಾರ ಪಂಚಾಯಿತಿ ಕೋರ್ಟನಲ್ಲಿ.

C. S. No. 64/1936

ಅಬ್ಬು ಬ್ಯಾರಿ—ವಾದಿ

ಮೊರಂಕರಿಯ ಅಬ್ಬು ಬ್ಯಾರಿ, ತೆಂಕ ಉಳಿಪಾಡಿ ಗ್ರಾಮದ ಮಳಲಿ ಪೇಟೆಯಲ್ಲಿರುವ ಮೊರಂಕರಿಯ ಕಾಧ್ರಿ ಬ್ಯಾರಿ ಮಗ } ಪ್ರತಿವಾದಿ

ರೂಪಾಯಿ 6—9—1ಕ್ಕೆ ದಾವೆಯಲ್ಲಿ ಈ ದಾವೆಯು, ಪ್ರತಿವಾದಿಯು ತಾರೀಕು 30—1—37ರೊಳಗೆ ಎದುರಿಸದಿದ್ದಲ್ಲಿ ಏಕಪಕ್ಷೀಯವಾಗಿಯಾದ ತೀರ್ಮಾನವಾಗುವುದು.

ಕನ್ನಿಕಂಬಳಿ, 16-1-37 } R. S. Baglodi, President.



For free pamphlets and coloured posters dealing with the use of Cement Concrete,
Write to:—

The Concrete Association of India,

P. O. Box No. 312, MADRAS.

NAME.....

ADDRESS:.....

.....

.....

OCCUPATION:.....

.....

K. M. 5.

ಹತ್ತು ನಿಮಿಷ!

(ಏಕಾಂಕೀ ನಾಟಿಕೆ).

ಶ್ರೀ। ರಾಮಕುಮಾರ ವರ್ಮಾ, ಎಂ. ಎ.

ಅನುವಾದಕ: **ಬಿ. ರಾಮಕೃಷ್ಣಾಚಾರ್, ಬಿ. ಎ., ವಿಶಾರದ, ಉಡುಪಿ.**

ಪಾತ್ರ:—ಮಹಾದೇವ—ಸಾಧಾರಣ ವ್ಯಕ್ತಿ.
ಬಲದೇವ—ಆತನ ಮಿತ್ರ.
ವಾಸಂತೀ—ಬಲದೇವನ ಸೋದರಿ.
ಪೋಲೀಸ್ ಇನ್ಸ್‌ಪೆಕ್ಟರ್.
ನಾಲ್ವರು ಸಿಪಾಯಿಗಳು.

ಸ್ಥಾನ:—ಕಾನಪುರದಿಂದ ೨೦ ಮೈಲು ದೂರ.

ಸಮಯ:—ಗಲಭೆಯ ನಿಸಾಹಿ ವಿಪ್ಲವದ ಮೇಲೆ. ಅರ್ಧರಾತ್ರಿ.

[ಅಚ್ಚುಕಟ್ಟಾಗಿ ಅಳವಡಿಸಿದ ಕೋಣೆ. ಉತ್ತರ-ಪಶ್ಚಿಮಗಳಲ್ಲಿ ಎರಡು ಬಾಗಿಲುಗಳು. ಒಂದು ಕಿರಿದು—ಎರಡನೆಯದರ ಬಳಿ ಕಿಟಿಕಿ—ಮುಚ್ಚಿದೆ. ಕೋಣೆಯ ಮಧ್ಯದಲ್ಲಿ ಮೇಜು. ಎರಡೂ ಪಕ್ಕಗಳಲ್ಲಿ ಕುರ್ಚಿಗಳು. ಮುಂದುಗಡೆ ಗೋಡೆಯಲ್ಲಿ ತೂಗುತ್ತಿದ್ದ ಗಡಿಯಾರದಲ್ಲಿ ಎರಡು ಹೊಡೆದು ೧೫ ನಿಮಿಷಗಳಾಗಿವೆ.

ಮೂಲೆಯಲ್ಲಿ ಸ್ವಲ್ಪ ಹಳೆಯದಾದ ಮಂಚ ನಿದ್ದವಿದೆ. ಅದರ ಮೇಲೆ ಪ್ರೌಢವ್ಯಕ್ತಿಯೊಬ್ಬನು ಸಾಮಾನ್ಯ ಉಡುಗೆತೊಡುಗೆಯಲ್ಲಿ ಮಲಗಿ ನಿದ್ದೆ ಹೋಗಿರುವನು. ವಯಸ್ಸು ಸುಮಾರು ೩೫ ಇರ ಬಹುದು. ಮುಖದ ಮೇಲೆ ಬಳಲಿಕೆಯ ಚಿಹ್ನೆ ವಿದೆ. ಕಾಲ್ಮೂ ಕಡೆ ಶಾಂತಿ. ಒಳಗೆ ಮಂದ ಪ್ರಕಾಶ.]

(ದಕ್ಷಿಣ ದ್ವಾರದಲ್ಲಿ ಖಟ್-ಖಟ್ ಎಂಬ ಶಬ್ದ)

ಮಹಾ-ದೇವ! ಮ-ಹಾ-ದೇವ!

[ಮಹಾದೇವನು ಆಲಸ್ಯದಿಂದ ತಲೆಯೆತ್ತಿ ಕಣ್ಣೊರೆಸುತ್ತ ಹುಬ್ಬು ಗಂಟಿಕ್ಕಿ ಆತ್ತ ನೋಡುವನು. ಪುನಃ ಆದೇ ಸ್ವರ—]

ಮಹಾ-ದೇ-ವ! ('ವ' ಬಹು ಕೀಳ್ದನಿ)

ಮಹಾದೇವ:—(ಬೇಸರದಿಂದ ಎದ್ದು) ನಡುರಾತ್ರಿಗೂ ಶಾಂತಿಯಿಲ್ಲವಲ್ಲ! (ಬಾಗಿಲ ಬಳಿ ಹೋಗಿ ಕುಪಿತದನಿಯಿಂದ) ಯಾರದು?

ಆದೇ ಸ್ವರ:—(ಒರಟುದನಿ) ಬಲದೇವ!

ಮಹಾದೇವ:—(ಆಶ್ಚರ್ಯ) ಏನು ಬಲದೇವ? ನೀನು ಈ ಹೊತ್ತಿನಲ್ಲಿ (ಬಾಗಿಲು ತೆರೆದು) ಹೇಗೆ ಬಂದೆ? (ಬೆಚ್ಚಿ ಹಿಂದೆ ಸರಿದು) ಇ—ಇದೇನು?

[ಬಲದೇವ ಪ್ರವೇಶಿಸುವನು. ೨೫ ವರ್ಷಗಳ ನವಯುವಕ; ಬಟ್ಟೆಬರೆ ರಕ್ತರಂಜಿತ; ಅಂಗಿಯ ಮೇಲ್ಭಾಗ ಹರಿದಿದೆ; ಕೈಯ ಚೂರಿ ನಡುಗುತ್ತ ಬಟ್ಟೆಯಲ್ಲಿ ಸಿಲುಕಿದೆ. ಮುಖದಲ್ಲಿ ಭಯದ ಚಿಹ್ನೆ ಆಂಕಿತ; ಅಂಜುತ್ತ ಅತ್ತಿತ್ತ ನೋಟ.]

ಬಲದೇವ:—(ಒರಟುದನಿ) ಮ ಹಾ ದೇವ! ನಾನು **ಕೊಲೆ** ಮಾಡಿದೆನು!

ಮಹಾದೇವ:—(ವಿಕೃತ ಸ್ವರ) ಕೊಲೆಯೆ? ಯಾರನ್ನು? ಎಲ್ಲಿ? ಎಂದು?

ಬಲದೇವ:—(ಸೈರಿಸಿ) ಇಲ್ಲ—ಇಲ್ಲ. ಕೊಲೆ ಮಾಡಲಿಲ್ಲ! ಬೇರೆ ಯಾರೋ ನನ್ನ ಕೈಯಲ್ಲಿ ಈ ಚೂರಿಯನ್ನು ಕೊಟ್ಟರು. ನಾನು ನಿರ್ದೋಷಿ. ನಾನೇ ಮಾಡಿದೆನೆಂದು ಹೇಳುವವರಾರು?

ಮಹಾದೇವ:—ಈಗ ನೀನೇ ಹೇಳಿದೆ. ಈ ನಿನ್ನ ಬಟ್ಟೆಗಳು—(ಬಲದೇವನು ಕೈಯಿಂದ ಮುಟ್ಟುವನು.)

ಬಲ:—(ಶಿಥಿಲತೆ) ನಾನು ಹೇಳಿದೆನೆ? ಆಗಲಿ. ನಾನೇ ಕೊಲೆ ಮಾಡಿದೆನು. ಅದೇ ಆ ಪಾಪಿ ಕೇಶವನನ್ನು! ನನ್ನ ಸೋದರಿಯನ್ನು ಮಲಿನನೋಟದಿಂದ ನೋಡಿದ (ಬೆಡುಗಚ್ಚಿ) ಆ ಕುಹಕಿ ಕೇಶವ! (ವ್ಯಂಗ್ಯನಗು) ಹಃ, ಅಡಗಿ ಬಂದಿದ್ದ—ಜಗತ್ತಿನ ಕಣ್ಣುಗಳು ಮಲಗಿ ಮುಚ್ಚಿದ್ದಾಗ! ಎಚ್ಚತ್ತಿದ್ದುವು ನಾಲ್ಕೇ ಕಣ್ಣುಗಳು—ಎರಡು ಈಶ್ವರನವು, ಎರಡು ನನ್ನವು! ತನ್ನ ಹೃದಯವನ್ನು ಕರಿಪಾಪದಿಂದಲೂ, ಶರೀರವನ್ನು ಕರಿಬಟ್ಟೆಗಳಿಂದಲೂ ಮರೆಸಿ ಬಂದಿತ್ತ. (ಬಗ್ಗಿ) ಹೀಗೆ ಬಗ್ಗಿ ಬರುತ್ತಿದ್ದ, ಒಂದೇ ಏಟಿನಿಂದ ಪೂರ್ಣ ಬಗ್ಗಿಸಿಬಿಟ್ಟೆನು! ನೋಡು. ಈ ಚೂರಿ—ಸಫಲತೆಯ ವರ್ಣದಿಂದ ಅಂಕಿತವಾದ ಈ ಬಟ್ಟೆಬರೆ—(ಗರ್ವದ ಮುದ್ರೆ.)

ಮಹಾ:—(ಕ್ರೋಧ) ನಿನ್ನ ಸೋದರಿಯನ್ನು ಮಲಿನನೋಟದಿಂದ ನೋಡಿದನೆ ಆತ? ಚೂರಿ ಎಲ್ಲಿ ತಿವಿದೆ?

ಬಲ:—ಬಗಲಲ್ಲಿ!

ಮಹಾ:—ಅಯ್ಯೋ ಬೆಪ್ಪೆ! ಕಣ್ಣುಗಳಲ್ಲಿ ಇರಿಯಬೇಕಿದ್ದಿತು! ಆ ಪಾಪಿ ಕಣ್ಣುಗಳು ಲೋಕದ ಪ್ರಕಾಶ ನೋಡಬಾರದಿದ್ದುವು. ಯಾವ ಕಣ್ಣುಗಳಲ್ಲಿ ಪಾಪದ ರಕ್ತವಿದೆಯೋ ಅವುಗಳ ಕೊಲೆಯು ಸೋದರಿಯ ಅವಮಾನದ ಸಲುವಾಗಿ ಆಗಲೇ ಬೇಕು. ಛಿಃ ಸೇಡು ತೀರಿಸಲೂ ಗೊತ್ತಿಲ್ಲ! (ದುರುದುರು ನೋಟ)

ಬಲ:—ಆಗಲಿ. ಇದೋ ಈಗಲೇ ಅದನ್ನೂ ಮಾಡಬಲ್ಲೆ. ಹೋಗಲೆ? (ಉದ್ಯತ)

ಮಹಾ:—ಅಹುದು. ಹೋಗು. ಈ ಮರೆಯ ಮಾರ್ಗದಲ್ಲಿ ನಡೆ. (ಉತ್ತರದ್ವಾರದ ಕಡೆ ಸಂಕೇತ) ಈಗಲೇ ಇದರಿಂದಲೇ ಹಿಂದಿರುಗಿ ಬಾ. ಇಲ್ಲವಾದರೆ ಪೋಲೀಸರ ಕೈಗೆ ಸಿಕ್ಕುವೆ. ಮಿಂಚಿನಂತೆ ಓಡಿ ಬರುತ್ತಿರಬಹುದು ಅವರು! (ತಡೆದು) ಆದರೆ ಈಗ ಏನು ಮಾಡಲೆಳಸುವೆ? ಆ ನೀಚನು ಸತ್ತುಹೋಗಿರಬಹುದು.

ಹೆಣವನ್ನು ಹೊಡೆದರೆ ಲಾಭ?

ಬಲ:—(ಉಗ್ರತೆ) ಬೇಡ-ಬೇಡ! ಮುಯ್ಯಿ ತೀರಿಸಲು ಬಿಡು. ಸಾವಿರ-ಬಾರಿ ಕಡೆದರೂ ನಾನು—(ಉತ್ತರದ ಕಿರುಬಾಗಿಲಿನಿಂದ ಓಟ. ನೇಪಥ್ಯದಲ್ಲಿ ವಾಕ್ಯ ಪೂರ್ತಿ) ಅವಶ್ಯ ಹೋಗುವೆನು. ಎದೆಯುರಿಯನ್ನು—(ದೂರದಲ್ಲಾಗುವ ಮಂದದನಿ) ಅಡಗಿಸುವೆನು! (ಶಾಂತ)

(೧೧ನೇ ಪುಟದಿಂದ)

[ಮಹಾದೇವನು ಯೋಚಿಸುವನು. ದಕ್ಷಿಣ ದ್ವಾರದಲ್ಲಿ ಪುನಃ ಶಬ್ದ.]

ಮಹಾ:—(ದೃಢತೆ) ಯಾರದು? (ಉದ್ವಿಗ್ನತೆ) ನನ್ನ ಪಾಲಿಗೆ ರಾತ್ರಿಯೂ ಹಗಲೆ?

(ಕಿಟಿಕಿ ಬಡಿದ ಶಬ್ದ)

ಮಹಾ:—(ಬಾಗಿಲ ಬಳಿ ಹೋಗಿ) ಯಾರದು? ಹೆಸರನ್ನು ಹೇಳು!

ಹೊರಗಿನಿಂದ:—ಪೋಲೀಸ್!

ಮಹಾ:—ಪೋಲೀಸ್! ಅವರಿಗೇನು ಕೆಲಸ ಈ ಸಮಯ ನನ್ನಲ್ಲಿ?

ಪೋಲೀಸ್:—ಬಾಗಿಲು ತೆರೆ!

[ಮಹಾದೇವ ಬಾಗಿಲು ತೆರೆಯುವನು. ಇನ್ಸ್‌ಪೆಕ್ಟರ ಪ್ರವೇಶ. ೫೦ ವರ್ಷದ ದಪ್ಪನಾದ ಭೀಮಕಾಯ; ಎತ್ತರ ಉನ್ನತ; ಇಲಾಖೆಯ ಪೋಷಾಕು ತೋಭುಸುತ್ತಿದೆ. ಕೈಯ್ಯಲ್ಲಿ ಪಿಸ್ತೂಲು; ಬಳಿಯಲ್ಲಿ ನಾಲ್ಕು ಸಿಪಾಹಿಗಳು ಅದೇ ಉಡುಪಿನಲ್ಲಿ; ಎಲ್ಲರ ಕೈಯ್ಯಲ್ಲಿಯೂ ಬಚ್ಚಿಗಳು.]

ಇನ್ಸ್‌ಪೆಕ್ಟರ್:—(ಒಳಗೆ ಬರುತ್ತ) ಎಲ್ಲಾ ಆಯುಧ ಕೆಳಗಿಡು! (ಪಿಸ್ತೂಲಿನ ಗುರಿ)

ಮಹಾ:—(ಹಿಂದೆ ಸರಿದು) ಎಂತಹ ಆಯುಧ? ಯಾರ ಆಯುಧ?

ಇನ್ಸ್‌ಪ:—ಒಳ್ಳೆದು. ನೀನೊಬ್ಬನೇ ಇರುವೆಯೊ? ನಿನ್ನ ಹೆಸರು ಮಹಾದೇವನಂದೆ?

ಮಹಾ:—ಹಾಗೆಯೇ ಎನ್ನಬಹುದು.

ಇ:—ನಿನ್ನಲ್ಲಿ ಈಗ ಯಾರಾದರೂ ಬಂದಿದ್ದರೆ? ಒಬ್ಬ ಮನುಷ್ಯ—

ಮಹಾ:—ಮನುಷ್ಯನಲ್ಲ—ದೇವತೆ! ಸೋದರಿಯ ಮಾನರಕ್ಷಕನಾದ ದೇವರು!

ಇ:—ದೇವತೆ—ದೇವರು? ಇದರರ್ಥ?

ಮಹಾ:—ದೇವತೆಯೆಂದರೆ ಅರಿಯದೆ? ಇನ್ನೇನು ಅರ್ಥ?

ಇ:—ಮಣ್ಣು! (ಕಾಲನ್ನು ನೆಲಕ್ಕೆ ಬಡೆದು) ಹನ್ನೆರಡು-ಎರಡು ಗಂಟೆಗಳ ಮಧ್ಯ ಇಲ್ಲಿ ಒಂದು ಕೊಲೆಯಾಗಿದೆ.

ಮಹಾ:—ಆಗಲಿ; ನನಗೇನು? ಅದೇ ಆ ರಕ್ತವರ್ಣಸಹಿತ ಪ್ರಭಾತದ ಪೂರ್ವದಿಶೆಯು ನಸುನಗುವುದು. ಅದೇ ರಕ್ತವರ್ಣದಿಂದ ಇಡೀ ಜಗತ್ತು ಬೆಳಗುವುದು. ಸೃಷ್ಟಿಯ ಅಣುಪರಮಾಣುಗಳಲ್ಲಿ ಆ ರಕ್ತವರ್ಣವು ಜೀವನದ ಅನಂತ ಸಂದೇಶವನ್ನು ಒಯ್ದು ಒಂದೇ ಸಲ ಪ್ರಭಾತದ ಮಧುರ ಸವಿಯರನೊಡನೆ ಹರಡುವುದು!

ಇ:—(ತೀವ್ರಸ್ವರ) ಏನು ಬಗುಳುತ್ತಿರುವೆಯೋ ತಿಳಿಯದು! ಕೇಳುವುದಕ್ಕೆ ಉತ್ತರ ಸರಿಯಾಗಿ ಕೊಡು. ಈಗ ತಾನೇ ಇಲ್ಲಿಗೆ ಬಂದವನೆಲ್ಲಿಗೆ ಹೋದನು?

ಮಹಾ:—ಹತ್ತು ನಿಮಿಷಗಳ ಮೇಲೆ ಬರುವನು. ಆಗ ದಯಮಾಡಿರಿ!

ಇ:—(ವ್ಯಂಗ್ಯ) ತಾವು ದಯವಿಟ್ಟು ಮನೆ ಬರಿದುಮಾಡಿಕೊಡಿರಿ. ನಾನು ಇದರ ಅನುಸಂಧಾನ ಮಾಡುವೆನು. ಅವನು ಹತ್ತು ನಿಮಿಷದಲ್ಲಿ ಬರಲಿ—ಇಪ್ಪತ್ತು ನಿಮಿಷದಲ್ಲಿ! ಕೇಳಿತೆ?

ಮಹಾ:—ತಮ್ಮೊಡನೆ ಶೋಧದ ವಾರಂಟಿದೆಯೆ?

ಇ:—ನನ್ನ ಆಜ್ಞೆಯೇ ವಾರಂಟು, ಮಹಾಶಯ!

ಮಹಾ:—ನಡುವಿರುಳಲ್ಲಿ ಇದು ತಮ್ಮ ಅತ್ಯಾಚಾರವೇ ಸರಿ! ಆಗಲಿ. ನನ್ನ ವಶ ಇದೊಂದು ಕೊಠಡಿ ಮಾತ್ರ ಇದೆ. ತಮ್ಮ ದೃಷ್ಟಿ ಎಲ್ಲಿಯ ತನಕ ಓಡಬಲ್ಲದೋ ಅಷ್ಟೇ ಭಾಗ ನನ್ನ ಅಧಿಕಾರದಲ್ಲಿದೆ. ಅದನ್ನು ಈಗಲೇ ನೋಡಿಬಿಡಿ—ಕೊಲೆಗಾರನೆಲ್ಲಾದರೂ ಇರುವನೇ ಎಂದು!

ಇ:—(ನಮ್ರತೆ) ನೋಡು. ತೋರಿಸಿಕೊಟ್ಟರೆ ಉಡುಗೊರೆ ದೊರೆಯುವುದು. ಗೊತ್ತೆ? ಇಲ್ಲವಾದರೆ ಸಂದೇಹದ ಮೇಲೆ ನಿನ್ನನ್ನೇ ಸೆರೆಹಿಡಿಯಬೇಕಾಗುವುದು.

ಮಹಾ:—(ಮುಂದೆ ಬಂದು) ಆನಂದದಿಂದ ಕೈದುಮಾಡಬಹುದು. ಆದರೆ ಧರ್ಮದ ಆಣೆಯಾಗಿಯೂ ನಾನು ತೀರಾ ನಿರಪರಾಧಿ!

ಇ:—ಆಗಲಿ. ತೀರಾ ಸತ್ಯವನ್ನೇ ಹೇಳಿದರೆ ಬಿಡುತ್ತೇನೆ. ಕೊಲೆಗಾರನ ಸಂಗತಿ ನಿನಗೇನು ಗೊತ್ತಿದೆ? ಹೇಳು. (ತೀವ್ರನೋಟ)

ಮಹಾ:—ಹೇಳಿದೆನಲ್ಲ! ಹತ್ತು ನಿಮಿಷಗಳಲ್ಲಿ ಬನ್ನಿರಿ. ಈಗಾಗಲೇ ಎರಡು ಹೊಡೆದು ೪೦ ನಿಮಿಷಗಳು—(ಗಂಟೆಯ ಕಡೆಗೆ ನೋಟ)

ಇ:—ನಾನು ಹತ್ತು ನಿಮಿಷಗಳ ವರೆಗೆ ಇಲ್ಲಿಯೇ ನಿಂತರೆ?

ಮಹಾ:—ಆಗ ಒಂದು ವೇಳೆ ಅವನು ಬಾರದಿದ್ದರೆ?

ಇ:—ಅದೇಕೆ?

ಮಹಾ:—ಪೊಲೀಸ್ ಮತ್ತು ಕೊಲೆಗಾರರೊಳಗೆ ನಾಯಿ-ಬೆಕ್ಕುಗಳ ಸಂಬಂಧವಿದೆ, ಎರಡೂ ಒಂದನ್ನೊಂದು ಸದಾ ಸಂದೇಹದೃಷ್ಟಿಯಿಂದ ನೋಡುವುವು!

ಇ:—ಆಗಲಿ. ನಿನ್ನ ಶೋಧನವನ್ನು ಇನ್ನೆರಡು ನಿಮಿಷಗಳಲ್ಲಿ ಮಾಡುವೆನಂತೆ (ಸಿಪಾಹಿಗಳಿಗೆ) ಈ ಮನೆಯ ಸುತ್ತಲೂ ಪಹರೆ ಇಡಬೇಕು. ಈ ಮಧ್ಯೆ ನಾನು ಶವವನ್ನು ಸಾಗಿಸಿ ಬರುತ್ತೇನೆ.

ಈಗಲೇ ಬಂದೆ. ಹೊಶಿಯಾರ್!

(ಸಿಪಾಹಿಗಳು ನಮ್ರರಾಗಿ ಸಲಾಮು ಮಾಡುವರು.) ಜೋ ಹುಕುಮ್, ಸಾಹೇಬ್!

ಇ:—(ವ್ಯಂಗ್ಯ) ಆಗಲಿ. ತಾವೆರಡು ನಿಮಿಷ ದಣುವಾರಿಸಿಕೊಳ್ಳಿರಿ.

[ಇನ್ಸ್‌ಪೆಕ್ಟರನು ಸಿಪಾಹಿಗಳೊಡನೆ ಹೊರಗೆ ಹೋಗುವನು. ಮಹಾದೇವನು ಬಾಗಿಲನ್ನು ಮುಚ್ಚಿ ತುಸುಹೊತ್ತು ಮೇಜಿನ ಬಳಿ ತಲೆವಾಗಿ ಯೋಚಿಸುವನು. ಉತ್ತರದ್ವಾರದಲ್ಲಿ ಧ್ವನಿ ಕೇಳಿಸುವುದು. ಆತನೆದ್ದು ತೆರೆಯಲು ಬಲದೇವನು ಪ್ರವೇಶಿಸುವನು. ಇನ್ನೂ ಹೆಚ್ಚಿನ ರಕ್ತಜಿಂದ ತೊಯ್ದಿರುವನು.]

ಬಲ:—(ಪ್ರಸನ್ನತೆ) ಚೂರಿ ದಾಟಿಹೋಯಿತು—ಎರಡೂ ಕಣ್ಣುಗಳನ್ನು ಬೇಧಿಸಿ! ಮುಂದಿನ ಜನ್ಮದಲ್ಲಿ ಅವನು ಯಾರನ್ನೂ ಕೆಟ್ಟ ದೃಷ್ಟಿಯಿಂದ ನೋಡಲಾರನು.

ಮಹಾ:—(ಗಂಭೀರತೆ) ಸಂಭವವಿದೆ. ಬರುವ ಹುಟ್ಟಿನಲ್ಲಿ ಅವನು ಕುರುಡನಾಗಬೇಕು. ಆಗ ಪಾಪದೃಷ್ಟಿಯಿಂದ ಹೇಗೆ ನೋಡುವನು?

ಬಲ:—(ತನ್ನ ವಿಚಾರಸರಣಿಯಲ್ಲಿಯೇ ಲೀನನಾಗಿ ಕಣ್ತೆರೆದು) ಊಃ ರಕ್ತದಿಂದ ನೆಲವೆಲ್ಲವೂ ಕೆಂಪಾಗಿಹೋಯಿತು. ನನ್ನ ಕೃತ್ಯದಿಂದ ವೃಥ್ವೀಮಾತೆಯು ಕಿಲಕಿಲ ನಗುವಂತಿದ್ದಿತು. ನಾನೂ ಮನಬಿಚ್ಚಿ ನಕ್ಕುಬಿಟ್ಟೆ! (ಮುಖ ವಿಕಾರ)

ಮಹಾ:—(ಗಂಭೀರ ಮುದ್ರೆ) ಅದೇ ಆ ಉಲ್ಲಾಸದ ನಗುವಿನಿಂದ ಕೆಂಪಾಗಿ ನಾಳೆ ಬೆಳಗ್ಗಿನ ಸೂರ್ಯನು ನಗುವನು. ಗುಲಾಬಿಯೂ ನಗುವುದು. ಸಂಗಡಲೇ ಅದರ ಸಹಚರೀ ಮೊಗ್ಗುಗಳೂ.....ಒಂದು ಕೆಲಸ ಮಾಡುವೆಯಾ?

ಬಲ:—(ಉತ್ಸುಕತೆ) ಅದೇನು?

ಮಹಾ:—ವಿಜಯವರ್ಣರಂಜಿತವಾದ ಆ ಒಬ್ಬೆಯನ್ನು ಬಿಚ್ಚಿಬಿಡು. (ತನ್ನ ಪೆಟ್ಟಿಗೆಯಿಂದ ಹೊಸ ಒಬ್ಬೆ ತೆಗೆದು) ಇದೋ, ಈ ಹೊಸ ಅಂಗಿ! ಇದನ್ನು ಧರಿಸು. ಲೋಕದ ಪಲಕಗಳಲ್ಲಿ ಸಂದೇಹದ ಪುತ್ಥಲಿಗಳಿವೆ!

ಬಲ:—(ದೃಢತೆ) ಇರಲಿ. ಇದರ ಉತ್ತರ ನನ್ನ ಕೊರಳ ರಕ್ತದಿಂದ ಕೊಡಬಲ್ಲೆ.

ಮಹಾ:—ನ್ಯಾಯದಿಂದ ಕಾದುವ ಶತ್ರುವಿಗೆ ತನ್ನ ಕೊರಳ ರಕ್ತದಿಂದ ಉತ್ತರ ಕೊಡಬೇಕು. ಇದು ನ್ಯಾಯದ ಕದನವಲ್ಲ!

ಬಲ:—(ಯೋಚಿಸಿ) ಹಾಗೆಯೇ ಆಗಲಿ. (ಅಂಗಿ ಬಿಚ್ಚಿ) ನೀನು ಕೇಳಲಾರೆ. ನಿನ್ನ ಹಠವೇ ಮೇಲಾಗಲಿ. ಈಗಲಾದರೋ (ಅಂಗಿ ತೊಟ್ಟು) ಪ್ರಸನ್ನನಾದೆಯಾ?

ಮಹಾ:—ಸ್ವಲ್ಪ ವಿಶ್ರಮಿಸಿಕೊ-ಹತ್ತು ನಿಮಿಷಗಳ ವರೆಗೆ. (ಯೋಚಿಸಿ) ಇಲ್ಲ.—ಹತ್ತು ನಿಮಿಷ ಏನು ಮಾಡಬಹುದು? ಹೋಗು, ಸೋದರಿಯ ಯೋಗಕ್ಷೇಮ ವಿಚಾರಿಸು.

ಬಲ:—(ಸ್ಥೈರ್ಯ) ಅವಳು ಮಾತೆಯ ಪ್ರೇಮದಂತೆ ಶಾಂತಸ್ನಿಗ್ಧಸ್ವಪ್ನಸಂಸಾರದಲ್ಲಿ ವಿಹರಿಸುತ್ತಿರಬಹುದು. ಆ ಶಾಂತಿನಿರ್ಝರದಿಂದ ಅವಳನ್ನೆತ್ತಿ ಜಾಗ್ರತಿಶಿಲೆಯ ಮೇಲೇಕೆ ಕೆಡಹಲಿ? ಪ್ರಾತಸ್ಸೂರ್ಯನ ಕೆಂಗದಿರು ತಾನೇ ಅವಳನ್ನೆಬ್ಬಿಸುವುದು!

ಮಹಾ:—ಬೇಡ. ಸೋದರನ ಕೈಗಳು ಸೂರ್ಯಕಿರಗಳಿಗಿಂತಲೂ ಅಧಿಕ ಕೋಮಲ—ಪ್ರೇಮಮಯವಾಗಿವೆ. ಮಹಾತ್ಮಾ ತುಲಸೀದಾಸರು ಸೋದರಪ್ರೇಮದ ಕುರಿತು ಏನು ಹೇಳಿರುವರು ಬಲ್ಲೆಯಾ?

ಬಲ:—(ಆಶ್ಚರ್ಯ) ಹೇಗೆ? ಇಲ್ಲಿರಬಾರದೆ ನಾನು?

ಮಹಾ:—ಸೋದರ! ಇಲ್ಲಿರುವುದಕ್ಕಿಂತಲೂ ಸೋದರಿಯ ಕುಶಲ ವಿಚಾರಿಸುವುದು ಅತ್ಯಾವಶ್ಯಕ. ಯಾರ ಸನ್ಮಾನದ ಮೂಲ್ಯವು ಒಬ್ಬ ಮನುಷ್ಯನ ಜೀವನಕ್ಕಿಂತಲೂ ಅಧಿಕವೋ ಅವಳ ಕ್ಷೇಮವನ್ನು ವಿಚಾರಿಸಲು ಇಷ್ಟು ಸಂಕೋಚವೇಕೆ? ಅವಳೊಡನೆ ನೀನು ಪುನಃ ಇಲ್ಲಿಗೆ ಬರುವೆಯಂತೆ.

ಬಲ:—(ಅಂಗಿ-ಚೂರಿಯನ್ನೆತ್ತಿ) ಆಗಲಿ. ಸೋದರ! ಹೋಗುವೆನು. ಸ್ವಲ್ಪ ಹೊತ್ತಿನಲ್ಲಿಯೇ ಅವಳ ಸಂಗಡ ಬರುತ್ತೇನೆ.

ಮಹಾ:—ಈ ಅಂಗಿ-ಚೂರಿಗಳೇಕೆ? ಅವಳ ಬಳಿ ಇವಕ್ಕೇನು ಕೆಲಸವಿದೆ?

(ಬಲದೇವನು ಮೂಲೆಯಲ್ಲಿ ಅವುಗಳನ್ನಿಟ್ಟು ಉತ್ತರದ್ವಾರದಿಂದ ಹೋಗುವನು.)

ಮಹಾ:—(ಯೋಚಿಸಿ) ಇದು ಸಮಸ್ಯಾನದ ಪ್ರತಿಶೋಧ! (ಕುರ್ಚಿಯ ಮೇಲೆ ಕುಳಿತು ಹಾಡುವನು)

'ಚಾಹ ನಹೀಂ ಸುರಬಾಲಾಕೇ
ಗಹನೋ ಮೇಂ ಗೊಂಥಾ ಜಾವೊಂ
ಗಹನೋಮೇಂ ಗೊಂಥಾ ಜಾವೊಂ॥'

(ದಕ್ಷಿಣದ್ವಾರದಲ್ಲಿ ಧ್ವನಿ)

'ಚಾಹ—(ಪುನಃ ಶಬ್ದ) 'ನಹೀಂ—(ತಿರಿಗಿ ಬಡೆತ) 'ಪ್ರೇ-ಏ-ಮಿ-ಈ—

ಮಹಾ:—ನಿಲ್ಲಿ! (ರಕ್ತರಂಜಿತ ಅಂಗಿಯನ್ನು ಧರಿಸಿ ಚೂರಿಯನ್ನಾಯ್ದು ಬಾಗಿಲನ್ನು ತೆರೆದು) ಯಾರದು?

ಇನ್ಸ್‌ಪೆಕ್ಟರನು ಪಿಸ್ತೂಲಿನ ಗುರಿಯಿಟ್ಟು ಪ್ರವೇಶಿಸಿ) ಕೊಲೆಗಾರನೆಲ್ಲಿ? (ಚಕಿತದೃಷ್ಟಿಯಿಂದ ಮಹಾದೇವನ ರಕ್ತರಂಜಿತ ಉಡುಪನ್ನು ನೋಡಿ) ಏ-ಕೊಲೆಗಾರ!

ಮಹಾ:—(ದೃಢತೆ) ನಾನೇ ಆ ಕೊಲೆಗಾರ.

ಇ:—ನೀನೇಯೋ (ಆಶ್ಚರ್ಯ). ಸಿಪಾಹಿಗಳು ಈಗಲೇ ನಿನ್ನ ಕೊಠಡಿಯೊಳಗೆ ಮಾತು ಕತೆಗಳ ಸದ್ದು ಕೇಳಿದರಂತೆ!

ಮಹಾ:—ನಾನು ಹಾಡುತ್ತಿದ್ದೆ.

ಇ:—(ದುರುದುರು ನೋಟ) ಹೂಂ? ನೀನೇ ಕೊಲೆಗಾರನೆ?

ಮಹಾ:—ತೋರುವುದಿಲ್ಲವೆ—ಈ ಬಟ್ಟೆ-ಈ ಚೂರಿ?

ಇ:—ಹತ್ತು ನಿಮಿಷದ ಮೇಲೆ ಕೊಲೆಗಾರ ಬರುವನೆಂದು ನೀನೇ ಹೇಳಿದೆ?

ಮಹಾ:—ಹೌದು. ನಿಮಗೆ ಅವನು ಸಿಕ್ಕಿದನೆ ಇಲ್ಲವೆ? ಆತನು ನಿಮ್ಮ ಮುಂದೆಯೇ ನಿಂತಿರುವನು. ಈಗ ನೀವು ಸಂದೇಹಪಡುವಿರೇಕೆ? ಶವವನ್ನು ನೋಡಿ ಬಂದಿರಷ್ಟೆ! ಅದರ ಕಣ್ಣು-ಪಕ್ಕಗಳಲ್ಲಿ ಗಾಯವಿದೆಯೆ?

ಇ:—(ತಲೆಯಾಡಿಸಿ) ಅಹುದಯ್ಯಾ! ಅದರ ಕಣ್ಣುಗಳು ಕಿತ್ತಿಡಲ್ಪಟ್ಟಿವೆ. ಪಕ್ಕದಲ್ಲಿ ಚೂರಿಯು ಇರಿಯಲ್ಪಟ್ಟ ಗಾಯವಿದೆ.

ಮಹಾ:—(ಮುಂದೆ ಬಂದು) ಇದೇ ಚೂರಿ ಅದು! (ತೋರಿಸುವನು)

ಇ:—(ಸಿಪಾಯಿಗಳಿಗೆ) ಹಿಡಿಯಿರಿ ಇವನನ್ನು—ಠಾಣೆಗೆ ಒಯ್ಯಿರಿ. ಈ ಮನೆಗೆ ಬೀಗ ಹಾಕಿ ಬನ್ನಿ. ಇವನಿಗಾರೂ ಸಂಬಂಧಿಗರಿಲ್ಲ. ಠಾಣೆಯಲ್ಲೆಲ್ಲವೂ ನಿರ್ಣಯವಾಗುವುದು.

(ಸಿಪಾಹಿಗಳು ಮಹಾದೇವನನ್ನು ಕೈಸೆರೆ ಹಿಡಿದೊಯ್ಯುವರು. ಉತ್ತರದ್ವಾರದಲ್ಲಿ ಸದ್ದಾಗುವುದು—ಮಂದಸ್ವರ) ಮಹಾದೇವ! ಮಹಾದೇವ!

ಇ:—ಯಾರದು?

ಹೊರಗಿಂದ:—ಅವನ ಮಿತ್ರ ಬಲದೇವ!

ಹೊರಗಿಂದ:—ಅವನ ಮಿತ್ರನ ಸೋಧರಿ—ವಾಸಂತೀ!

ಇ:—(ತೀವ್ರಸ್ವರ) ಈ ಸಮಯ ಮಹಾದೇವನು ಯಾರಿಗೂ ದರ್ಶನ ಕೊಡಲಾರನು! (ಸಿಪಾಹಿಗಳಿಗೆ) ಬೇಗ ನಡೆಯಿರಿ. (ಪ್ರಸ್ಥಾನ)

(ಹೊರಗಿಂದ ಕಿರುದನಿಯಲ್ಲಿ ಪುನಃ ಮಹಾದೇವನ ಹೆಸರು ಅನಂತಶೂನ್ಯತೆಯಲ್ಲಿ ಮಾರ್ದನಿಗೊಡುತ್ತಿರುವುದು!)

ತುಳಸಿರಾಜ ಎಣ್ಣೆ—ಇದರಿಂದ ಅಂಡವಾಯು, ಅಂಡವ್ಯಾಧಿ, ಸಂಧಿವಾಯು, ವಾತ ಈ ರೋಗಗಳು, ಶಸ್ತ್ರಕ್ರಿಯೆ ಇಲ್ಲದೆನೇ, ಸಂಪೂರ್ಣವಾಗಿ ಗುಣವಾಗುವುದೆಂದು ಗ್ಯಾರೆಂಟಿ ಇದೆ. ಬೆಲೆ ರೂ. 1/-. ವಿುತ ಸಂತಾನವು ಯಾವ ಕಾಲದಲ್ಲಿಯೂ ಅಪಜಯ ಪಡೆದಿಲ್ಲ. ಮುಟ್ಟಿನ ದೋಷ, ಬಿಳಿಯಾಗಿರುವ ಮುಟ್ಟು ಇವನ್ನು ಗುಣಪಡಿಸುತ್ತದೆ. ರೂ. 1/4/-. ತಾಮ್ರದ ಹಾಫ್ ಟೋನ್, ಲೈನ್ ಬ್ಲಾಕ್, ಮರದ ಬ್ಲಾಕ್, ಇಲೆಕ್ಟ್ರೊ ಕಾಪ್ಪರ್ ಪ್ಲೇಟ್, ಸ್ಟೀಲ್ ಡೈ, ಬ್ರಾಸ್ ಸೀಲ್, ರಬ್ಬರ್ ಸ್ಟಾಂಪ್, ಮರದ ಟ್ಯಾಪು ನಮ್ಮಲ್ಲಿ ದೊರೆಯುತ್ತವೆ. ಬಮ್ಮೆ ಪರೀಕ್ಷಿಸಿರಿ.
N. DE, Specialist in Ulcers, 152/2, Manicktola St., Cal. Agent—B. K. Paul & Co., Calcutta.

IMPORTANT NOTICE TO INDIAN PRODUCE SHIPPERS.

Highest Market Prices for Dried Salted Fish, Fish Manure, Coffee, Cardamoms, Scrap Rubber, Dhal, Chillies, Tamarind, Onions, Potatoes, etc. All Indian Produce.

Correspondence invited from those interested, in ENGLISH PREFERRED or in KANARESE.

J. A. EDWIN.DE.SILVA,
21, Wasala Road,
8, 12-1. Colombo, CEYLON.

ನರಸಿಂಹ ಲೇಹಂ

(ಸ್ವರ್ಣ ಸಹಿತ) ನಿಶ್ಯಕ್ತರಿಗೊಂದು ವರಪ್ರದಾನ.

ರಕ್ತ, ಶಕ್ತಿ, ಚೈತನ್ಯ, ಕ್ಷೀಣ ಮತ್ತು ಮನುಷ್ಯತ್ವವನ್ನು ವೃದ್ಧಿಗೊಳಿಸುತ್ತದೆ. ಉಷ್ಣ ಮತ್ತು ಬಹುಮೂತ್ರವನ್ನು ಗುಣಪಡಿಸುತ್ತದೆ. 2 ಕರಡಿಗೆಗಳು ಸಾಕು.

20 ತೊಲೆಗಳ ಕರಡಿಗೆಯೊಂದರ ರೂ. 2—8—0
ವಿ. ಪಿ. ಪ್ರತ್ಯೇಕ.

P. C. A. & Co., Ayurvedic Samaj,
Peridepi, Nellore Dt.

ಸೂತಿಕಾವಾಯು ಅಪಸ್ಮಾರ 10 ನಿಮಿಷಗಳಲ್ಲಿ ನಿಲ್ಲಿಸಲ್ಪಡುವದು, "ವಾಯುಮುಕ್ತಾ"

ಈ ಔಷಧವು ದೇಶೀಯ ಮೂಲಿಕೆಗಳಿಂದ ತಯಾರಿಸಲ್ಪಡುತ್ತದೆ. ಕಳೆದ 30 ವರ್ಷಗಳಿಂದ ಮಾನವರ ಸೇವೆಯನ್ನು ಮಾಡುತ್ತಿದೆ. ಅನಾರೋಗ್ಯದಲ್ಲಿರುವ ಅಥವಾ ಗರ್ಭಿಣಿಯರಾಗಿರುವ ಸಾವಿರಾರು ಸ್ತ್ರೀಯರು ಈ ಭಯಂಕರ ವ್ಯಾಧಿಯಿಂದ ಮುಕ್ತರಾಗಿದ್ದಾರೆ. ಹಿಸ್ಟೀರಿಯಾವನ್ನು ಭೂತ ಯಾ ಪ್ರೇತಬಾಧೆಯೆಂದು ತಿಳಿಯತಕ್ಕುದಲ್ಲ. ಅದು ಇತರ ರೋಗಗಳಂತೆಯೇ ದೇಹಸಂಬಂಧವಾದ ರೋಗವಾಗಿರುತ್ತದೆ. ಬಡಬಡಿಕೆ, ಕೂಗು, ಹೊರಳಾಟ, ಬಲಹೀನತೆ, ತಲೆತಿರುಗುವಿಕೆ, ಶೀತ, ಎಡೆಬಿಡದ ಅಪಸ್ಮಾರ, ಹುಚ್ಚು ತನ ಮೊದಲಾದ ಪೀಡಾಟಗಳು 24 ತಾಸುಗಳಲ್ಲಿ ನಿಲ್ಲುವುವು. ಸ್ಮೃತಿಯಿಲ್ಲದಿರುವಿಕೆ, ಅಪಸ್ಮಾರ, ಒಡ್ಡಾಟ 10 ನಿಮಿಷಗಳಲ್ಲಿ ಮಾಯವಾಗುತ್ತವೆ. ಮತ್ತು ರೋಗಿಯು ಶಾಂತಿಯನ್ನೂ, ತ್ರಾಣವನ್ನೂ ಪಡೆಯುತ್ತಾನೆ. 10 ದಿನಗಳ ಔಷಧಿಗೆ ರೂ. 2/- ಮತ್ತು 30 ದಿನಗಳ ಔಷಧಕ್ಕೆ ರೂ. 5/-. ಪೋಸ್ಟೇಜು ಅಲಾಯಿಡಾ.

C. L. Namawala,
Palace Road, BARODA.
12, 15-1.

500 ರೂಪಾಯಿಗಳ ಬಹುಮಾನ.
ಬಿಳೇ ಕುಷ್ಠಕ್ಕೆ (ತೊನ್ನಿಗೆ) ಅತ್ಯಾಶ್ಚರ್ಯಕರವಾದ ಔಷಧಿ.

ಈ ವನಸ್ಪತಿಯ ಕೆಲವು ದಿನಗಳ ಪ್ರಯೋಗದಿಂದಲೇ, ಬಿಳೇ ಕುಷ್ಠವು (ತೊನ್ನು) ಸಮೂಲವಾಗಿ ಸಂಪೂರ್ಣ ಗುಣವಾಗುತ್ತದೆ. ಬರೇ ಕೆಲವು ಹನಿ ಮಾತ್ರ ಉಪಯೋಗಿಸಿ, ಈ ಭಯಂಕರ ರೋಗವನ್ನು ಪರಿಹರಿಸಿಕೊಳ್ಳಿ. ಈ ವನಸ್ಪತಿಯು ಒಬ್ಬ ಮಹಾತ್ಮನಿಂದ ದತ್ತವಾಗಿರತಕ್ಕದ್ದು. ಯಾವತ್ತು ಔಷಧಗಳನ್ನೂ ಮಾಡಿ ನಿರಾಶರಾದವರು, ಇದನ್ನು ಪ್ರಯೋಗಿಸತಕ್ಕದ್ದು. ಇದು ಮೋಸಗಾರಿಕೆಯದೆಂದು ತೋರಿಸಿಕೊಟ್ಟರೆ 500 ರೂಪಾಯಿಗಳ ಬಹುಮಾನವಿದೆ. ಬೆಲೆ ರೂ. 1—8—0. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

S. N. SINHA,
No. 36, P. O. Mirchaiganj (PATNA.)

THE DECCAN CO.,
Cantonment, :: MANGALORE,
Agents for
"Mohini Coffee Powder"
and
"Kelagur Tea"
ಡೆಕ್ಕಾನ್ ಕಂಪೆನಿ.

ಕೆಂಟೋನ್‌ಮೆಂಟ್—ಮಂಗಳೂರು.

ಕಾಫಿ ತೋಟಗಳಿಗೂ, ತೆಂಗು ಇತ್ಯಾದಿ ಫಲವಸ್ತುಗಳ ಮರಗಳಿಗೂ, ಅಡಕೆ ತೋಟಗಳಿಗೂ ಬೇಕಾಗುವ ಗೊಬ್ಬರಗಳು ಇವರಲ್ಲಿ ಯಾವಾಗಲೂ ದೊರೆಯುತ್ತವೆ.

ಪ್ರಸಿದ್ಧ "ಮೋಹಿನಿ ಕಾಫಿ ಹುಡಿ" ಮತ್ತು "ಕೆಳಗೂರ್ ಟೀ" ಇದರ ವಿಜಂಟಿರು.

OMNIUM-GATHERUM.

THE LATE MR. KARNAD SADASHIVA RAO.

By: Dr. N. S. Hardiker, Hubli.

By the sudden and untimely death of Mr. Sadashiva Rao Karnatak has lost one of its illustrious sons of the day. He was the pillar of Congress movement in Karnatak and particularly in the District of Mangalore. His removal from the field has given a set back to the Congress work specially in South Canara which owes a deep debt of gratitude to him.

It was from Mr. Sadashiva Rao that the people of South Canara received inspiration for national service. Born and bred up in a very rich family and being the only son of his father Mr. Sadashiva Rao's temperament and health were not suited to the sufferings he underwent during the last decade both financially and physically. He first entered the public field in 1916 after a few years of legal practice in Mangalore. In that year he joined late Mrs. Annie Besant's Home Rule League and worked in his district for the furtherance of the League's object. When the clarion call came from Mahatma Gandhi for renunciation in 1920 Mr. Sadashiva Rao renounced all the comforts of life to which he was used from his birth and plunged himself heart and soul into the Non-co-operation movement. He not only gave up his legal practice but swore that he would never enter the Court and he stuck up to his oath literally to the day of his death. This oath brought him into severe financial difficulties. Taking the advantage of the situation and his lenient and loving nature, the majority of those who owed him large sums of money never returned them. Mr. Sadashiva Rao not even caring for his personal and family's needs, went on supporting all the activities of the Congress including national schools and Khadi centres in South Canara and before the end of the year 1925 all his resources were over.

Even then his residence was the centre of all the national activities in the district. Once a very rich man but now caught in the grip of poverty Mr. Sadashiva Rao was put to hard tests but he bravely stood all of them and did not shirk his duty to the nation and Congress the services of which he had made his own. He went to Jail in the Civil Disobedience movements both in 1930 and 1932 and never lost his faith in the struggle for freedom.

He was twice the President of the Karnatak Provincial Congrees Committee. He started an Ashram at Kadre near Mangalore and a national school in his residential premises soon after the inauguration of the Non-co-operation movement. Kadre was known for its production of khadi in those days. Mr. Sadashiva Rao was at the head of the relief organized in South Canara during the flood havoc of 1923—24 at Bantwal and various other places. When the occasion came for holding the 39th session of the Indian National Congress in Karnatak it was Mr. Sadashiva Rao's keen desire to have it in his district. But the majority favoured its holding at Belgaum and at Belgaum too Mr. Sadashiva Rao strove hard to make his contribution to its success.

Sadashiva Rao lost his father at a very young age. His ailing mother over eighty years of age has the misfortune of seeing with her own eyes the passing away of her only son. His two daughters are not yet given any permanent footing in life. They are still studying, one being a Research Scholar and the other reading in the College at Bangalore. Under these circumstances, his death has been a bolt from the blue to them just as it has been an unbearable shock to those in the Congress field in Karnatak. Sadashiva Rao had endeared himself by his sweet and gentle nature to all, whether young or old, for a long time to come. They will feel the pangs of his passing away and his name will be perpetuated in the annals of the Congress in Karnatak. Our heartfelt sympathies are with his aged and ailing mother and two daughters. May the soul of the departed rest in peace.

WOOD'S CHALLENGE TO STEEL AND CONCRETE.

That Indian wood can challenge steel and concrete even for some of the heaviest type of modern structural construction and still hold its own, is the claim made by the Forest Research Institute at Dehra Dun, as a result of certain successful researches in wood preservation.

Wood, it is said, can be made to last specially when preserved under pressure with a suitable antiseptic, for a long period of time—longer in most cases than the economic life of the structures. Treated wood requires no periodical protective treatment necessary in the case of iron or carbon steel which, for the same weight, is not stronger than wood, but, on the contrary, is much more expensive, says a press note from the Director of Public Information, New Delhi. In the case of concrete, the strength of which in compression is the only strength worth considering, it is five or six times as heavy as wood for the same degree of strength. Two recent important developments have made properly preserved wood the most economical and up-to-date structural material known at the present day. The first relates to the improved types of timber joints which now enable the engineer to obtain practically the full strength of the members at the joint in fabricated work like roof trusses. The second is the present day inexpensive but very efficient and permanent methods of preserving woods.

For the same strength, steel and concrete, the Institute says, cost about five times as much as wood when used in the round form and 2½ times as much when used in the square form. For obtaining the same strength, wood and steel are of equal weight, but concrete is about five times as heavy, which means that the load on and hence the cost of foundations have to be increased proportionately. If treated timber structures can be expected to give a conservative minimum life of only 25 years, steel and concrete structures cannot be more economical even in the long run than treated wood structure if they cost initially more than one and half times as much.

The case for wood is presented in a booklet entitled 'Wood's challenge to Steel and Concrete', just issued from the Forest Research Institute, Dehra Dun. The booklet explains how there is scope for the use of treated wood practically in every type of mechanical engineering construction, including highway bridges, buildings, and aeroplane hangers.

Forest Research Institute, Dehra Dun.



D

ಪಜಲ್ ನಂಬ್ರ 31. ಪೋಸ್ಟ್ ಮಾಡುವ ಕೊನೆಯ ತಾರೀಕು 11-2-37.

11,000 ರೂಪಾಯಿಗಳನ್ನು ಗೆಲ್ಲುತ್ತಿದೆ.

1ನೇ ಬಹುಮಾನವಾದ ರೂ. 7,000 ಎಲ್ಲ ಉತ್ತರಗಳೂ ಸರಿಯಾದುದಕ್ಕೂ, 2ನೇ ಬಹುಮಾನವಾದ ರೂ. 3,000 ಒಂದು ತಪ್ಪಿನದಕ್ಕೂ, ರೂ. 500 ಅತ್ಯಧಿಕ ಸಂಖ್ಯೆಯ ಉತ್ತರಗಳನ್ನು ಕಳುಹಿಸಿದವರಿಗೂ (ಇದಕ್ಕೆ ಗ್ಯಾರಂಟಿ ಇದೆ) ದೊರಕುವುದು. ಉಚಿತ ಸಂಭಾವನೆಗಳಿಗಾಗಿ ರೂ. 500 ಕೂಡ ಇದೆ. ಸರಿಯಾದ ಉತ್ತರವನ್ನು ಮದ್ರಾಸ್ ಯುನೈಟೆಡ್ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಮೊಹರು ಮಾಡಿ ಇಟ್ಟಿದೆ.

ಪ್ರತಿ ಒಂದು ಸಾಲೂ:—3 ಪೈ.

ಪ್ರವೇಶ ಹಾಸಲು:—ಪ್ರತಿ ಉತ್ತರಕ್ಕೆ ರೂಪಾಯಿ. 1ರಂತೆ. ಎರಡು ಉತ್ತರಗಳನ್ನು ಕಳುಹಿಸುವವರಿಗೆ ಒಂದು ಸುಂದರವಾದ ಕ್ಯಾಲೆಂಡರನ್ನೂ, 15 ಅಥವಾ ಅದಕ್ಕೂ ಮೇಲ್ಪಟ್ಟು ಉತ್ತರಗಳನ್ನು ಕಳುಹಿಸುವ ಪ್ರತಿಯೊಬ್ಬರಿಗೂ ಒಂದೊಂದು ಬೆಳ್ಳಿಯ ಟೀ-ಸೆಟ್ಟೂ ಉಚಿತವಾಗಿ ಕಳುಹಿಸಲಾಗುವುದು. ಪ್ರವೇಶಧನದ ಜುಮ್ಲಾ ಮೊತ್ತವನ್ನು ಮನಿಯಾರ್ಡರ್ ಮೂಲಕವೇ ಕಳುಹಿಸತಕ್ಕದ್ದು, ಸ್ಟಾಂಪಿನ ರೂಪದಲ್ಲಿ ಅಲ್ಲ. ಪೂರ್ತಿ ಕಾಗದದ ಮೇಲೆ ಬರೆದ ಉತ್ತರಗಳನ್ನು ಸ್ವೀಕರಿಸಲಾಗುವುದು.

ನಿಯಮಗಳು:—1 ರಿಂದ 16ರ ವರೆಗಿನ ಅಂಕೆಗಳಿಂದ ಪೂರ್ತಿ ಅಂಕಣಗಳನ್ನು ತುಂಬಿಸಿ. ಒಮ್ಮೆ ಉಪಯೋಗಿಸಿದ ಸಂಖ್ಯೆಯನ್ನು ಇನ್ನೊಮ್ಮೆ ಉಪಯೋಗಿಸಬಹುದು. ಹೀಗೆ ಪ್ರತಿ ಪೂರ್ತಿಯಲ್ಲಿ (ಉದ್ದಕ್ಕೆ, ಅಗಲಕ್ಕೆ, ಮೂಲೆ ಪೂರ್ತಿಯಲ್ಲಿ) 34ನ್ನು ತೋರಿಸಿರಿ. ಯೋಜನೆಯು ಸಮಪ್ರಮಾಣದ್ದಾಗಿದೆ. ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿರುವಲ್ಲಿ, ಬಹುಮಾನಗಳನ್ನು ಸಮಪಾಲಾಗಿ ಹಂಚಲಾಗುವುದು. ಗೆಲ್ಲುವ ಒಬ್ಬ ಸ್ಪರ್ಧೆಗಾರನಿಗೆ ಒಂದು ಬಹುಮಾನ ಮಾತ್ರ. ನಿಮ್ಮ ಉತ್ತರಗಳೊಡನೆ ಮನಿಯಾರ್ಡರ್ ರಶೀದಿಯನ್ನು ಲಗ್ತಿಕರಿಸಿರಿ. ಹಣವನ್ನು ಕಳುಹಿಸದೆ ಉತ್ತರ ಕಳುಹಿಸಬೇಡಿ. ಒಂದು ವಾರದ ಮೇಲೆ ತಿಳಿಯುವ ಫಲತಾಂಶವನ್ನು ಕಳುಹಿಸಬೇಕಾದಲ್ಲಿ ಇಂಡಿಯಾಕ್ಕೆಯನ್ನು ಹೆಚ್ಚಿಗೆಯಾಗಿ ಕಳುಹಿಸಿ. ಮ್ಯಾನೇಜರರ ತೀರ್ಮಾನವೇ ಸಿಂಧು ಮತ್ತು ಕೊನೆಯದು.

ಪ್ರವೇಶಧನವೂ, ಉತ್ತರಗಳೂ ಈ ವಿಳಾಸಕ್ಕೆ:—To THE MANAGER,
Venus Easy Puzzle Solving Bureau,
No. 12, *Manikanda Mudally St.,*
G. T., MADRAS.

4, 8-1

WISHING YOU A VERY HAPPY & PROSPEROUS NEW YEAR

THE ASIAN ASSURANCE CO., LTD., BOMBAY.

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಬೊಂಬಯಿ.



Has completed its long 26 years of Humanitarian service having its Branches and Agencies all over India, Ceylon and East Africa.

Most beneficial schemes are ever ready to suit the individua purse.

WRITE FOR TERMS OF AGENCIES:

Branch Manager,
HAMPANKATTA, MANGALORE.

Obtain 100% Satisfaction!

By using our Famous, Regd. Deer Brand, Flower Vase Brand, Steamer (King George) Brand and Gold Mohar Brand

Roofing Tiles, Ridges, Ventilators, Skylights, Flooring Tiles, Building Bricks, etc.

They are hall marks of perfection—genuine in quality and superb in kind.

That is why we want you to insist on buying them.

Buy only goods bearing our genuine Trade Marks & Names.

Also superfine fish oil, manure & dried fish available,

Messrs. C. Abdurahiman & Coragappa,
MANGALORE.
Props: HAMEEDIAH TILE WORKS, MANGALORE,
Mang. Props: ISLAMIAH TILE CO., KASARAGODE.

THE BANK OF MANGALORE, LTD.
MANGALORE.
ESTD. 1931.

Head Office:-MANGALORE.
Branches:-
MANGALORE, PANEMANGALORE, MUDABIDRI & PADUBIDRI.
Chairman:-**Philip J. Chandran, Esq., B. A.,**
Retd. Dt. Registrar & Asstt. Registrar of Joint Stock Companies, S.K.

On & from 1st of January 1937
Fixed Deposits will be received at following rates of interest.

For 3 months		3½%
,, 6	,,	4 %
,, 12	,,	5 %
,, 24	,, & upwards	5½%

Interest Payable Quarterly.
SAVINGS BANK DEPOSITS: 3½% on daily balance.
All kinds of banking business transacted.
U. R. PAI,
N. UPENDRA PAI, } *MANAGING DIRECTORS.*

ಶ್ರೀ ದುರ್ಗಾ ಪರಮೇಶ್ವರೀ ಮೋಟರ್ ಸರ್ವೀಸ್,
ಮಂಗಳೂರು.

ಸ್ಥಾಪಿತವಾದುದು 1927ರಲ್ಲಿ!

ನಮ್ಮ ಮೋಟಾರು ಬಸ್ಸುಗಳು ಕ್ರಮವಾಗಿ ಪ್ರತಿನಿತ್ಯವೂ ಮಂಗಳೂರಿಂದ ಮರವೂರು, ಬಜಪೆ, ಕಟೀಲ್, ಕಿನ್ನಿಗೋಳಿ ಮಾರ್ಗವಾಗಿ ಮೂಲ್ಕಿಗೂ; ಗುರುಪುರ, ಬಜಪೆ, ಕಟೀಲ್ ಮಾರ್ಗವಾಗಿ ಮೂಲ್ಕಿಗೂ; ಮರವೂರು, ಬಜಪೆ, ಕಟೀಲ್ ಮತ್ತು ಮುಂಡ್ಕೂರಿಗಾಗಿ ಬೆಳ್ಮಣ್ಣಿಗೂ; ಅಡ್ಯಾರ್, ಫರಂಗಿಪೇಟೆ ಮಾರ್ಗವಾಗಿ ಬಂಟ್ವಾಳಕ್ಕೂ; ಮೂಲ್ಕಿಯಿಂದ ಪಡುಬಿದ್ರೆ, ಬೆಳ್ಮಣ್ಣು, ಕಾರ್ಕಳಕ್ಕೂ; ಕಾರ್ಕಳದಿಂದ ಬೆಳ್ಮಣ್ಣು, ಮಂಚಿ ಕಲ್ಲು ಮಾರ್ಗವಾಗಿ ಉಡುಪಿಗೂ ಚಲಾವಣೆಯಾಗುವುವು.

ನಮ್ಮ ಹೊಸ ಲೈನುಗಳು.

ಮೂಲ್ಕಿ—ಕಿನ್ನಿಗೋಳಿ—ಮೂಡಬಿದರೆ ಮಾರ್ಗವಾಗಿ ಕಾರ್ಕಳಕ್ಕೂ; ಕಾರ್ಕಳದಿಂದ ಸೀಪಾ ಸೋಮೇಶ್ವರಕ್ಕೂ ಬೆಳಿಗ್ಗೆ ಮತ್ತೂ ಮಧ್ಯಾಹ್ನ ಎರಡು ಸರ್ವೀಸುಗಳು ಹೊಸದಾಗಿ ನಡೆಯುತ್ತಿವೆ. ಶಿವಮೊಗ್ಗಾ—ತೀರ್ಥಹಳ್ಳಿ—ಕೊಪ್ಪ—ಹರಿಹರ ಮೊದಲಾದ ಪ್ರದೇಶಗಳಿಗೆ ಹೋಗುವವರಿಗೆ ಇದರಿಂದ ತುಂಬ ಅನುಕೂಲ.

ವಿ. ಸೂ.—ಮಂಗಳೂರು, ಮೂಲ್ಕಿ, ಮಂಚಕಲ್, ಉಡ್ಪಿ, ಕಿನ್ನಿಗೋಳಿ ಮೊದಲಾದ ಕಡೆಗಳಿಂದ ಹೊರಡುವ ಬೆಳಗಿನ ಮತ್ತೂ ಮಧ್ಯಾಹ್ನದ 'ಸರ್ವೀಸು'ಗಳು, ಸಮಯಕ್ಕೆ ಸರಿಯಾಗಿ ಸೋಮೇಶ್ವರಕ್ಕೆ ತಲುಪಿ, ಮೇಲಿನ ಬಸ್ಸು ಸರ್ವೀಸುಗಳಲ್ಲಿ ಕೂಡಲೇ ಪ್ರಯಾಣ ಮಾಡುವಂತೆ ಏರ್ಪಡಿಸಲಾಗಿದೆ.

ಪ್ರಯಾಣಿಕರ ಸೌಕರ್ಯವೇ ನಮ್ಮ ಮುಖ್ಯಧ್ಯೇಯ!
ಇದಕ್ಕಾಗಿಯೇ ಹೊಸ ಬಸ್ಸುಗಳು!

ಹೆಚ್ಚಿನ ಮಾಹಿತಿ ಈ ಸರ್ವೀಸಿನ ಏಜಂಟರುಗಳಿಂದ ತಿಳಿದುಕೊಳ್ಳಬಹುದು.

RHEUMATISM BACKACHE



ಈ ಎಲ್ಲಾ ನೋವುಗಳಿಂದ ನರಳುವವರಿಗೆ ಈ ಔಷಧವು ಪೂರ್ವದ ಅನುಭವದಿಂದ ದಿಟವಾಗಿಯೂ ಖಂಡಿತ ಗುಣಕಾರಿಯೆಂದು ಪ್ರತ್ಯೇಕವಾಗಿ ಶಿಫಾರಸು ಮಾಡಲ್ಪಟ್ಟಿದೆ.

ಇತರ ಎಲ್ಲಾ ಒಳಗಣ ಮತ್ತು ಬಾಹ್ಯ ಔಷಧಗಳು ನಿಷ್ಪ್ರಯೋಜಕವಾದಲ್ಲಿ, ಈ ಮಾತ್ರೆಗಳು, ಬಾರಿಬಾರಿಗೂ ಶಮನವನ್ನುಂಟುಮಾಡಿರುತ್ತವೆ. ಯಾವ ರೀತಿಯಲ್ಲಿಯೂ ಅವುಗಳ ಗುಣಕ್ಕೆ ಬಾಧಕರವಾಗಿರದೆ, ಸಾಮಾನ್ಯ ಆರೋಗ್ಯಕ್ಕೆ ಯಾವಾಗಲೂ ಕಳೆಗೊಳಿಸುವ ಔಷಧವಾಗಿರುತ್ತದೆ.

Madras Stockists:—Messrs. DADHA & CO.,
52, Nainiappa Naick Street, Madars.

ಗುಣ ಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ **[ಹಣ ಪರತ.**

ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ್)

ಈ ಚೂರ್ಣವು ಕೆಂಪು, ಬಿಳಿ ಶರಗಿಗೆ ಶತ್ರುವಾಗಿರುವದು! ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ, ಮೈಯಲ್ಲಿ ನೋವು, ಉಷ್ಣತಾ, ಕ್ಷೀಣತಾ, ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ, ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವುದು. ಮಕ್ಕಳಾಗುವುದಿಲ್ಲೆಂದು ತನೇ ಲಗ್ನವಾಗುವ ಮೊದಲು ಗೃಹದೇವತೆಯಾದ ಪೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟು, ಮಾ। ರಾ। ಎ. ಎಂ. ಇನ್ಸ್‌ಪೆಕ್ಟರ್ ಬೆಳಗಾಂವ—'ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳೂ ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಬಿಳಿ ಶರಗು ಇಲ್ಲದಂತಾದವು.' ೩೧ ದಿವಸದ ಡಬ್ಬಿಯ ಕಿ. ರೂ. ೩. ಟಿ. ಖ. ಆಣೆ ೮.

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರಿಗೆ ಅಶಕ್ತಿಯಾಗುತ್ತದೆ. ಬಡತನದಲ್ಲಿ ಮಕ್ಕಳಾಗುವದರಿಂದ ದುಃಖವಾಗುತ್ತದೆ, ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂಜಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೆ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು—ಡಾಕ್ಟರ್ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್., ಕೆಳವಾಮಾಹಿಮ, ಠಾಣೇ— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ, ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ. ಡಬ್ಬಿ ಕಿಮ್ಮತು ರೂ. ೪; ವಿ. ಪಿ. ಆಣೆ ೮.

ಕಿಣಾಸ:—ಸಂಜೀವಿನೀ ಔಷಧಾಲಯ, ಮು. ಪೊ. ವಿಜಾಜಿ, (S. M. C.)

T. B. C. No. 104 of 2—1—37
Approved for all High, Normal and Middle Schools and Training Colleges.

ಸಿದ್ಧವಾಗಿದೆ! ಸಿದ್ಧವಾಗಿದೆ!!

ಪಂಡಿತ ಜವಹರಲಾಲರ ಆತ್ಮಕಥೆ

ಕನ್ನಡ ಭಾಷಾಂತರ: 'ನವಜೀವನ ಕನ್ನಡ ಗುಂಪಿ'ನಿಂದ

— ವಾಚನಾಲಯ ಮತ್ತು ಇತರ ಸಂಸ್ಥೆಗಳಿಗಾಗಿ —

ಅತ್ಯುತ್ತಮ ಪ್ರತಿ. ೮ ಅಥವಾ ೪ ಸಂಪುಟಗಳಲ್ಲಿ ($7\frac{1}{2}$"×$9\frac{1}{2}$") ರೂ. ೨೫—೦—೦
ಉತ್ತಮ ಪ್ರತಿ. ೪ ಅಥವಾ ೨ ಸಂಪುಟಗಳಲ್ಲಿ .... ,, ೧೦—೦—೦

ಆತ್ಮಕಥೆಯ ಕನ್ನಡ ಭಾಷಾಂತರವನ್ನು ಟಿಕ್ಸ್ ಬುಕ್ ಕಮಿಟಿಯವರು ಘನವಾದ ಔದಾರ್ಯದಿಂದ ಟಿ. ಬಿ. ಸಿ. ನಂ. ೧೦೪/೩೬-೩೭ ತಾ॥ ೨—೧—೩೭ನೆಯ ಅಜ್ಞಾಪತ್ರದ ಮೂಲಕ ಸಂಸ್ಥಾನದ ಎಲ್ಲ ಹೈ ಸ್ಕೂಲ್, ನಾರ್ಮಲ್ ಮತ್ತು ಮಿಡ್ಲ್ ಸ್ಕೂಲುಗಳಿಗೂ ಮತ್ತು ಟ್ರೈನಿಂಗ್ ಕಾಲೇಜುಗಳಿಗೂ ಶಿಫಾರಸು ಮಾಡಿರುತ್ತಾರೆ.

ಪ್ರಕಾಶಕರು:—ಸಿ. ಅಶ್ವತ್ಥನಾರಾಯಣರಾವ್, ಬಿ. ಎ.,
ಸಂಪಾದಕರು: "ನವಜೀವನ" ಮತ್ತು "ಮಕ್ಕಳ ಪುಸ್ತಕ",
ಬಳೇಪೇಟೆ, ಬೆಂಗಳೂರು ಸಿಟಿ.